# ಕೇರಳ ಪಾಠಾವಳಿ
# KERALA READER

## ಕನ್ನಡ - ಮೂಲ ಪಠ್ಯ
## KANNADA - BASIC TEXT

ತರಗತಿ
VI

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ.ಅದರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VI (Basic Text)

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT Kerala
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಸಾಧನವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

## Text Book Development Committee
## KANNADA - VI BT

**Advisor**

| | |
|---|---|
| Shivashankara P. | Asst. Professor, GPM Govt. College, Manjeshwar |

**Chairperson**

| | |
|---|---|
| Balakrishna B. M. | Associate Professor, Govt. College Kasaragod |

**Experts**

| | |
|---|---|
| Dr. Vedavathi S. | Asst. Professor, Govt.College Kasaragod |
| Ramanna D | Rtd. Head Master, GVHSS Delampady |

**Participants**

| | |
|---|---|
| Padma Nayana N. K. | Rtd. H.M. S.V.V.A.U.P. School Kodlamogaru |
| Asha Dileep Rai | HST, SVVHSS Kodlamogaru |
| Vijaya Kumar A. | UPST, BAUPS Katukukke |
| Shakila V. | UPST, Bakrabail AUPS Pathoor |
| Divakara Ballal A. B. | UPST, GVHSS Kunjathur |
| Gururaj K. | UPST, GHSS Udyawar |

**Artists**

| | |
|---|---|
| Divakara | Rtd. Drawing Teacher |
| Satheesha K. | Specialist Teacher, B.R.C. Kumbla |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram

STATE COUNCIL OF EDUCATION RESEARCH AND TRAINING (SCERT)
Vidhyabhavan, Poojappura,Thiruvananthapuram 695 012

# ಅನುಕ್ರಮಣಿಕೆ


| ಕ್ರ. ಸಂ. | ಘಟಕ | ಪುಟ ಸಂಖ್ಯೆ |
|---|---|---|
| 1. | ಭಾಷೆ - ಸಾಹಿತ್ಯ | 7-30 |
| | • ನಲ್ಲಿಯಲ್ಲಿ ನೀರು ಬಂತು (ಹಾಸ್ಯ ಲೇಖನ) - ಬೇಲೂರು ರಾಮಮೂರ್ತಿ | |
| | • ಭಾಷಾ ಬಾಂಧವ್ಯ (ಕವನ) - ಡಾ\| ಮೋಹನ ಕುಂಟಾರ್ | |
| | • ಹೊತ್ತಿಗೊದಗುವ ಮಾತು ಗಾದೆ (ಲೇಖನ) - ಎಂ. ಕೆ. ಗೋಪಿನಾಥ್ | |
| 2. | ಸುಖ - ಸಂಪದ | 31-50 |
| | • ಕಾಲ್ಚೆಂಡು (ಲೇಖನ) - ಸಂಗ್ರಹ (ಪಠ್ಯ ಪುಸ್ತಕ ಸಮಿತಿ) | |
| | • ದುಷ್ಟ ಚಟವ ನೀ ಕಲಿಬ್ಯಾಡ (ಜನಪದ ಗೀತೆ) - ಜನಪದ | |
| | • ಗುಜ್ಜೆ ಪ್ರಸಂಗ (ಕಾದಂಬರಿ ಭಾಗ) - ಕೇಶವ ಶರ್ಮ ಕೆ. | |
| 3. | ನಾವು - ನಮ್ಮವರು | 51-70 |
| | • ಕಣ್ಣು ತೆರೆಯಿತು (ಕಥೆ) - ಕಳ್ಳಿಗೆ ಮಹಾಬಲ ಭಂಡಾರಿ | |
| | • ಎಲೆಗಳು ನೂರಾರು (ದೇಶಭಕ್ತಿ ಗೀತೆ) - ಎಚ್. ಎಸ್. ವೆಂಕಟೇಶ ಮೂರ್ತಿ | |
| | • ಸಮಾಜ ಸೇವಕ ಸ್ಕೌಟು (ಲೇಖನ) - ಸಂಗ್ರಹ (ಪಠ್ಯ ಪುಸ್ತಕ ಸಮಿತಿ) | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;<br>
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;<br>
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.




# 1 ಭಾಷೆ ಮತ್ತು ಸಾಹಿತ್ಯ

‘ಭಾಷೆ’ ಮಾನವನಿಗೆ ಮಾತ್ರ ಸಾಧಿಸಲ್ಪಡುವ ಒಂದು ಸಂಕೀರ್ಣ ಸಂವಹನ ಮಾಧ್ಯಮವಾಗಿದೆ. ಇದು ವ್ಯಕ್ತಿಯ ಭಾವನೆಗಳು ಹೊರಹೊಮ್ಮಲು ಇರುವ ವಾಹಕವೂ ಆಗಿದೆ. ಪ್ರಪಂಚದಲ್ಲಿ, ನಿರ್ದಿಷ್ಟ ಪ್ರದೇಶದೊಳಗೆ ವಾಸಿಸುವ ಜನರು ಒಂದು ನಿರ್ದಿಷ್ಟವಾದ ಭಾಷೆಯ ಮೂಲಕ ದೈನಂದಿನ ಚಟುವಟಿಕೆಗಳಿಗಾಗಿ ಮಾತು, ಬರಹಗಳನ್ನು ಬಳಸುತ್ತಾರೆ. ಅಂತಹ ಭಾಷೆಗಳಲ್ಲಿ ಕನ್ನಡವೂ ಒಂದು.

ಭಾಷೆಯ ಮೂಲಕ ಸಾಹಿತ್ಯ ರಚನೆಯಾಗುತ್ತದೆ. ಆ ಸಾಹಿತ್ಯ ಓದುಗರ ಮನಸ್ಸಿಗೆ ಹಿತವನ್ನುಂಟುಮಾಡುತ್ತದೆ. ಬುದ್ಧಿಗೆ ಚುರುಕು ಮುಟ್ಟಿಸುತ್ತದೆ. ಜ್ಞಾನವನ್ನು ವಿಸ್ತರಿಸುತ್ತದೆ. ಸುಸ್ಥಿರ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲಾಗುತ್ತದೆ. ಪ್ರಸ್ತುತ ಘಟಕದಲ್ಲಿ ಕನ್ನಡ ನಾಡುನುಡಿಯ ಮಹತ್ವ, ಸೌಂದರ್ಯ ಅಂತೆಯೇ ಸಾಹಿತ್ಯದಲ್ಲಿ ವಿಶೇಷವಾಗಿ ಪ್ರಯೋಗವಾಗುವ ಒಗಟು, ಗಾದೆ, ವಿವಿಧ ರೀತಿಯ ಭಾಷಾಂಶಗಳು ಮತ್ತು ಅನ್ಯ ಭಾಷೆಗಳ ಕುರಿತಾದ ಬಾಂಧವ್ಯ ಹಾಗೂ ಹಾಸ್ಯ ಸಾಹಿತ್ಯದ ಮೂಲಕ ಚಿಂತನೆಗೆ ಹಚ್ಚುವ ಪಾಠಗಳನ್ನು ಅಳವಡಿಸಲಾಗಿದೆ.

ತರಗತಿಗಳಲ್ಲಿ ಪಾಠ ವಿನಿಮಯದ ಮೂಲಕ ಅವುಗಳ ಆಶಯಗಳನ್ನು ಅರ್ಥೈಸಿಕೊಂಡು ವಿವಿಧ ಭಾಷಾ ವ್ಯವಹಾರ ರೂಪಗಳ ಮೂಲಕ ಅಭಿವ್ಯಕ್ತಪಡಿಸುವ ಸಾಮರ್ಥ್ಯಗಳನ್ನು ವಿದ್ಯಾರ್ಥಿಗಳು ಗಳಿಸಿಕೊಳ್ಳಬೇಕು.

# ಪ್ರವೇಶ ಚಟುವಟಿಕೆ

ಕೆಳಗಿನ ಚಿತ್ರಗಳನ್ನು ಗಮನಿಸಿರಿ.



- ಈ ಚಿತ್ರಗಳ ಆಶಯವನ್ನು ಹೇಗೆ ಅಭಿವ್ಯಕ್ತಪಡಿಸಬಹುದು? ಚರ್ಚಿಸಿರಿ.

# ನಲ್ಲಿಯಲ್ಲಿ ನೀರು ಬಂತು

- ಬೇಲೂರು ರಾಮಮೂರ್ತಿ

ಮನೇಲಿ ಬೋರ್‌ವೆಲ್, ಬಾವಿ ಇದ್ದರೂ ಕುಡಿಯಲು ನಲ್ಲಿ ನೀರೇ ಬೇಕು ಎನ್ನುವುದು ಬಡಾವಣೆಯ ಮನೆಗಳ ನೀರೆಯರ ಬಯಕೆ. ಹೀಗಾಗಿ ಬೀದಿ ಕೊನೆಯಲ್ಲಿರುವ ಒಂದೇ ಒಂದು ಮುನಿಸಿಪಲ್ ನಲ್ಲಿಯ ಬಳಿ ಸದಾ ಜನ ಇರ್ತಾರೆ. ಎಷ್ಟಾದರೂ ಅದು ಮುನಿಸಿಪಲ್ ನಲ್ಲಿ, ಅದಕ್ಕೂ ಮುನಿಸಿಕೊಳ್ಳೋ ಹಕ್ಕಿದೆ. ಅದಕ್ಕೆ ಒಂದೊಂದು ದಿನ ನೀರು ಬರೋಲ್ಲ. ಎಲ್ಲರ ಮನೆಗೂ ಕೊಳವೆ ನೀರು ಸರಬರಾಜು ಮಾಡುತ್ತೀವಿ ಅಂತ ಮುನ್ಸಿಪಾಲಿಟಿಯವರು ಹೇಳಿಕೊಂಡೇ ಬರುತ್ತಿದ್ದುದರಿಂದ ಬಡಾವಣೆಯ ಜನರೆಲ್ಲಾ ಅವರ ಮೇಲೆ ಮುನಿಸಿಕೊಂಡಿದ್ದಾರೆ.

ನಲ್ಲೀಲಿ ನೀರು ಬಾರದ ದಿನ ಸೋಮಿ ಸೋಮುಗೆ ಒಂದು ಖಾಲಿ ಕೊಡ ಕೊಟ್ಟು ಮುನ್ಸಿಪಾಲಿಟಿಗೆ ಓಡಿಸೋಕೆ ನೋಡಿದಳು. ಆದರೆ ಸೋಮು "ಸೋಮಿ ಈ ಕೊಡ, ಸೊಂಟ, ನಲ್ಲಿ, ನೀರು ಇವೆಲ್ಲಾ ನಿನ್ನ ಕೆಲಸ. ಸೊಂಟಕ್ಕೆ ಕೊಡ ಇಡ್ಕೊಂಡು ನೀನೇ ಹೋಗು" ಎಂದು ಸೋಮು ಆಫೀಸ್ ಬ್ಯಾಗ್ ಹಿಡ್ಕೊಂಡು ಮನೆಯಿಂದಾಚೆ ಹೊರಟ. ಎದುರು ಮನೆ ವನಜಾಕ್ಷಿ ಬಾಗಿಲಲ್ಲೇ ನಿಂತಿದ್ದರು. ಅವರ ಕೈಲೋ ಕೊಡ. ಮುಖದಲ್ಲಿ ಆತಂಕ, ಅವರು ಸೋಮು ಬಳಿ ಬಂದು

"ಸೋಮು ಸರ್, ನಿಮ್ಮ ಮುಖಚರ್ಯೆಗೆ, ನಿಮ್ಮ ಮಾತಿಗೆ ಒಳ್ಳೆ ಬೆಲೆ ಇದೆ. ಪ್ಲೀಸ್ ನೀವು ಈಗ ಮುನ್ಸಿಪಾಲಿಟಿಗೆ ಹೋಗಿ ನಲ್ಲೀಲಿ ನೀರು ಬರೋ ಹಾಗೆ ಮಾಡಿದರೆ ನಾನು ನಿಮ್ಮ ಬಾಯಲ್ಲಿ ನೀರೂರೋ ಹಾಗೆ ಮಾಡ್ತೀನಿ" ಅಂದಳು.

"ಏನ್ರಿ ಅದು" ಅಂದ ಸೋಮು

"ಇನ್ನೊಂದು ಅರ್ಧ ಗಂಟೇಲಿ ನೀವು ನಲ್ಲೀಲಿ ನೀರು ಬರಿಸಿದರೆ, ನೀವು ಸಂಜೆ ಆಫೀಸಿಂದ ಬರೋ ಹೊತ್ತಿಗೆ ನಾನು ನಿಮಗಿಷ್ಟವಾದ ಹಾಲುಬಾಯಿ ಮಾಡಿ ನಿಮ್ಮನೆಗೆ ತಂದಿಟ್ಟು ನಿಮ್ಮ ಬಾಯಲ್ಲಿ ನೀರೂರಿಸುತ್ತೇನೆ" ಅಂದಳು.

ಸೋಮುವಿನ ಬಾಯಿ ಅಗಲವಾಯಿತು. "ನಿಮ್ಮ ಕೊಡ ಕೊಡಿ ಈ ಕಡೆ" ಎಂದು ವನಜಾಕ್ಷಿಯ ಕೊಡ ಇಸ್ಕೊಂಡು ಮನೆಗೆ ಬಂದು ತನ್ನ ಮನೆಯ ಕೊಡಾನೂ ತಗೊಂಡು ಹೊರಟ.

ತಾನು ಮಾಡಕ್ಕಾಗದ ಕೆಲಸವನ್ನು ವನಜಾಕ್ಷಿ ಮಾಡಿದಳಲ್ಲ ಅಂತ ಸೋಮಿಗೆ ಅವಳ ಮೇಲೆ ಅಭಿಮಾನ




ದ್ವೇಷ ಎರಡೂ ಒಟ್ಟಿಗೇ ಉಕ್ಕಿತು.

ಸೋಮು ಹೋಗಿ ಮುನ್ಸಿಪಾಲಿಟಿ ಅಧಿಕಾರಿ ಬಳಿ ನಿಂತ. ಕೊಡ ಸೊಂಟದಲ್ಲಿ, ಕುಚೋದ್ಯದ ನಗು ಮುಖದಲ್ಲಿ. ಅಧಿಕಾರಿ ಕೆಂಗಣ್ಣು ಬಿಟ್ಟು

"ಇಲ್ಲಿ ನಲ್ಲಿ ಇಲ್ಲರೀ ಕೊಡ ಯಾಕೆ ತಂದ್ರಿ? ಮಳೆ ಬಾರದ ಕಡೆ ಕೊಡೆ ಹಿಡಿದ ಹಾಗೆ" ಅಂದರು.

"ನಲ್ಲಿ ಇರೋ ಕಡೆ ಕೊಡ ಇಟ್ರೆ ನೀರು ಬರೋಲ್ಲ, ಅದಕ್ಕೆ ನಲ್ಲಿ ಇಲ್ಲದಿರೋ ಕಡೆ ಕೊಡ ಇಟ್ಟು ನೋಡೋಣ" ಅಂತ ಬಂದೆ

"ವಾಟ್ ನಾನ್ಸೆನ್ಸ್ ಐ ಸೇ.. ಏನ್ರೀ ಬೇಕು ನಿಮಗೆ?"

"ಓಹೋ ಏನ್ಸಾರ್ ನೀವು ಕಾಮಧೇನುನೋ? ಇಲ್ಲಾ ಕಲ್ಪವೃಕ್ಷಾನೊ? ಕೇಳಿದ್ದೆಲ್ಲ ಕೊಡೋ ಹಾಗೆ ಮಾತಾಡ್ತಾ ಇದೀರ"

"ರೀ ನಾವು ಡ್ಯೂಟಿಗೆ ಸೇರುವಾಗ ಹೇಳಿಕೊಟ್ಟಿರುವ ಪ್ರಥಮ ಉಪದೇಶವೇ ಅದು. ಕೊಡದಿದ್ದರೂ ಕೊಡೋ ಹಾಗೆ ಮಾತಾಡಿ ಅಂತ. ಅದಕ್ಕೆ ಕೊಡ ತಂದಿರುವ ನಿಮ್ಮ ಮುಂದೆ ಕೊಡೋ ಹಾಗೆ ಮಾತಾಡ್ತಾ ಇರೋದು. ಅಲ್ಲಾರೀ ನೀವು ಕೇಳಿದಾಗೆಲ್ಲಾ ನೀರು ಕೊಡೋಕೆ ನಾನೇನು ಭಗೀರಥನಾ? ಗಂಗೆನ ಭೂಮಿಗೆ ಇಳಿಸೋಕೆ" ಅಂತ ಹೇಳಿ ತಾವಾಡಿದ್ದು ಜೋಕು ಅಂತ ತಾವೇ ನಕ್ಕರು.

"ನೀರು ಕೊಟ್ಟವನನ್ನು ಕೊನೆ ತನಕ ನೆನೆ ಅನ್ನೋ ಗಾದೆ ಇದೆ ಸರ್. ನೀವು ನಮ್ಮ ಏರಿಯಾದವರಿಗೆ ನೀರು ಕೊಡಿ. ಆಮೇಲೆ ನೋಡಿ"

"ಏನ್ರಿ ಹಾರ ಹಾಕಿ ಸನ್ಮಾನ ಮಾಡ್ತಾರಾ?"

"ಬರೀ ಹಾರ ಏನು, ನೀವು ಬಯಸೋ ಆಹಾರ ಕೂಡಾ ಕೊಡ್ತಾರೆ ಸರ್."

ಮಾತುಕತೆ ಹೀಗೇ ಮುಂದುವರಿದರೆ ಕೊನೆ ಮೊದಲಿಲ್ಲ ಅಂತ ಭಾವಿಸಿದ ಅಧಿಕಾರಿಗಳು "ನಿಮ್ಮನೆ ಬೀದಿ ನಲ್ಲೀಲಿ ನೀರು ಬರೋದಿಲ್ಲ. ಅಷ್ಟೆ ತಾನೇ ನಿಮ್ಮ ದೂರು. ನೀವು ವಾಪಸ್ ಹೋಗಿ ನೀರು ಬಂದಿರುತ್ತೆ" ಎಂದು ಒಂದು ಬೆಲ್ ಬಾರಿಸಿದರು.

"ಸರ್ ನನಗೇನೋ ಬೋರ್‌ವೆಲ್ ನೀರು ಎಲ್ಲದಕ್ಕೂ ಆಗುತ್ತೆ. ಆದರೆ ನನ್ನ ಹೆಂಡತಿಗೆ ಕುಡಿಯೋಕೆ ನಲ್ಲಿ ನೀರೇ ಬೇಕು" ಅಂದ ಸೋಮು.

"ನನ್ನ ಹೆಂಡ್ತಿಗೂ ಅಷ್ಟೇರೀ, ಅವಳಿಗೆ ಬೋರ್‌ವೆಲ್ ನೀರೂ ಆಗಲ್ಲರೀ. ಅವಳಿಗೆ ಏನಿದ್ರೂ ಬಿಸ್ಲೇರಿ ವಾಟರೇ ಬೇಕು"

"ಸ್ನಾನ ಮಾಡಕ್ಕೂನಾ ಸಾರ್" ಅಂತ ಕೇಳಿ ಸೋಮು ತುಟಿ ಕಚ್ಚಿಕೊಂಡ "ಕರಕ್ಟಾಗಿ ಹೇಳಿದ್ರಿ ಕಣ್ರೀ.. ಈಗೊಂದೆರಡು ತಿಂಗಳ ಹಿಂದೆ ಬರೀ ಬಿಸ್ಲೇರಿ ನೀರಲ್ಲೇ ಸ್ನಾನ ಮಾಡ್ತಾ ಇದ್ಲು. ಆಮೇಲೆ ಅದೇನೋ ಮೈ ಕಡಿತ ಶುರುವಾಯ್ತು ನೋಡಿ, ಡಾಕ್ಟರು, "ಮೇಡಂ ನೀವು ಎಲ್ಲರ ಹಾಗೆ ಬೋರ್‌ವೆಲ್ ಇಲ್ಲಾ ನಲ್ಲಿ ನೀರಲ್ಲಿ ಸ್ನಾನ ಮಾಡಿ" ಅಂದರು.



ಆಮೇಲೆ ಕನ್ನಡಕದೊಳಗಿಂದ ನೋಡಿ ಅಧಿಕಾರಿ ಫೈಲ್ ಒಳಗೆ ತಲೆ ಹಾಕಿದರು. ಸೋಮು ಕೊಡದ ಸಮೇತ ನಲ್ಲಿ ಬಳಿಗೆ ಹೋಗಲೋ ಇಲ್ಲಾ ಮನೆಗೆ ಹೋಗಿ ಕೊಡ ಕೊಟ್ಟು ಸೋಮಿನ ಕಳಿಸಲೋ ಅಂತ ಯೋಚನೆ ಮಾಡಿದ.

ಏನಾಶ್ಚರ್ಯ, ಸೋಮು ಬರೋ ಹೊತ್ತಿಗೆ ನಲ್ಲಿಲಿ ನೀರು ಬಂದಿತ್ತು. ಒಂದು ಕೊಡ ನೀರು ತಗೊಂಡೇ ಹೋಗಿ ಸೋಮಿಗೆ ಅಚ್ಚರಿ ಮೂಡಿಸೋಣ ಅಂತ ಕೊಡನಾ ಸರತಿ ಸಾಲಲ್ಲಿ ಇಟ್ಟು ತಾನು ಹೆಂಗಸರ ಸಾಲಿನಲ್ಲಿ ನಿಂತ.

ಅಷ್ಟರಲ್ಲಾಗಲೇ ನೀರು ಬಂದಿದ್ದರಿಂದ ನಲ್ಲಿ ಬಳಿ ತುಂಬಾ ಜನ ಸೇರಿದ್ದರು. ಎಲ್ಲ ಮಹಿಳೆಯರೇ. ಸೋಮು ಮಾತ್ರ ಮಹನೀಯ.

ಸೋಮುನ ಕಂಡೊಡನೇ ಶ್ರೀಮತಿ "ಸೋಮು ಸರ್. ಹೌ ಸ್ವೀಟ್ ಆಫ್ ಯು, ಹೀಗೆ ಮುನ್ಸಿಪಾಲಿಟಿಗೆ ಹೋಗಿ ಹಾಗೆ ನೀರು ತರಿಸಿದೀರಲ್ಲ. ನೀವು ಭಗೀರಥನಿಗಿಂತ ಏನೂ ಕಡಿಮೆಯಿಲ್ಲ, ನೀವು ನಮ್ಮ ಏರಿಯಾದ ಸೋಮುರಥ'' ಅಂದಳು.

ಸೋಮು ಬೇಕೆಂದೇ ತನ್ನ ಸರದಿ ಬರೋವರೆಗೂ ಕಾದ. ಅಲ್ಲಿಯವರೆಗೂ ಬಡಾವಣೆಯ ಮಹಿಳೆಯರೊಂದಿಗೆ ಅದೂ ಇದೂ ಹರಟಿದ. ಶ್ರೀಮತಿ ಒಂದು ಕೊಡ ನೀರು ಮನೆಗೆ ಸುರಿದು ಮತ್ತೆ ಖಾಲಿ ಕೊಡದೊಂದಿಗೆ ಹಿಂದಿರುಗುವಾಗ ಡಬ್ಬಿಯಲ್ಲಿ ಮೂರು ವಡೆ ತಂದಿದ್ದಳು

"ಏನ್ರಿ ಇದು ವಡೆ ಯಾರ ತಿಥಿ ಮಾಡಿದ್ರಿ ಇವತ್ತು? ಏನ್ ವಿಶೇಷ? ಅಂತ ಕೇಳಿದ.

"ನಮ್ಮನೆಯವರು ಮಾಡಿದ್ದು ಸರ್. ಕಲಸಿದ ಹಿಟ್ಟಿಗೆ ಆದದ್ದು ಹನ್ನೊಂದು ವಡೆ. ಎಂಟು ಅವರೇ ತಿಂದರು. ಉಳಿದ ಮೂರು ನನಗೆ ಕೊಟ್ಟರು. ನನಗೆ ಯಾಕೋ ಅದರ ವಾಸನೆ ಕಂಡ್ರೆ ಆಗಲಿಲ್ಲ. ಏನು ಮಾಡೋದು, ಗಂಡ ಮಾಡಿದ್ದು ತಿನ್ನಲೇಬೇಕು. ಅದಕ್ಕೇ ಅವರೆದುರಿಗೆ ತಿಂದ ಹಾಗೆ ಮಾಡಿ ಅವರಿಗೆ ಕಾಣದಂತೆ ವಡೆನ ನಾಯಿಗೆ ಹಾಕಿಬಿಟ್ಟೆ."

"ಮತ್ತೆ ನನಗೆ ಕೊಟ್ಟಿರೋ ಈ ವಡೆ ಯಾವುದು?" ಅಂತ ಕೇಳಿದ ಸೋಮುಗೆ ವಾಕರಿಕೆ ಬರೋ ಹಾಗಾಗಿತ್ತು. ಅಷ್ಟೊತ್ತಿಗಾಗಲೇ ಒಂದೂವರೆ ವಡೆ ಖಾಲಿ ಮಾಡಿದ್ದ. ಇನ್ನೊಂದು ತುಂಡು ಮಾತ್ರ ಬಾಕಿ ಉಳಿದಿತ್ತು.

"ಸ್ವಲ್ಪ ತಾಳಿ ಸೋಮು ಸರ್. ವಡೆನ ನಾಯಿಗೆ ಹಾಕಿದೆನಾ, ಅದು ಬಂದು ಒಂದೆರಡು ಸಾರಿ ನೆಕ್ಕಿತು, ಮೂಸಿತು ನಂತರ ಹಾಗೆ ಹಿಂದಿರುಗಿ ಹೊರಟುಹೋಯಿತು. ಅಷ್ಟೊತ್ತಿಗೆ ನನ್ನ ಗಂಡ ಶ್ರೀಮತಿ ಅಂತ ಕೂಗುತ್ತಾ ಬಂದರು. ನಾನು ವಡೆ ನಾಯಿಗೆ ಹಾಕಿದ್ದು ಅವರಿಗೆ ಎಲ್ಲಿ ಗೊತ್ತಾಗಿಬಿಡುತ್ತೋ ಅಂತ ವಡೆನ ಎತ್ತಿ ಕೈಲಿದ್ದ ಡಬ್ಬಿಗೆ ಹಾಕ್ಕೊಂಡು ಮನೇಲಿ ನೀರಿದ್ರೂ ಖಾಲಿ ಕೊಡ ಹಿಡಿದು ಬಂದುಬಿಟ್ಟೆ."

''ಏನ್ರಿ ಶ್ರೀಮತಿ ನೀವು ಹೇಳ್ತಿರೋದು. ನಾಯಿ ಮೂಸಿದ, ನೆಕ್ಕಿದ ವಡೆ ನನಗೆ ತಿನ್ನಿಸಿದಿರಾ ನೀವು?" ಅಂತ ಸೋಮು ಹೊಟ್ಟೆ ಹಿಡ್ಕೊಂಡ, ಕೈಲಿದ್ದ ವಡೆ ಚೂರನ್ನ ನೆಲಕ್ಕೆ ಒಗೆದ.

ನಾಯಿಯೊಂದು ಓಡಿ ಬಂದು ಅದಕ್ಕೆ ಬಾಯಿ ಹಾಕಿತು. ಮೂಸಿ ನೋಡಿ ಶ್ರೀಮತಿ ಕಡೆ ಗುರುಗುಟ್ಟುತ್ತಾ ಹೋಯಿತು. "ನಾಯಿಗೆ ಮಾತು ಬಂದಿದ್ರೆ ನಿಮಗೆ ಚೆನ್ನಾಗಿ ಬೆಂಡೆತ್ತಿರೋದು" ಅಂದ ಸೋಮು.

"ನೋಡೇ ನಾನು ಮಾಡಿದ ವಡೆ ಹೇಗಿದೆ ಅಂತ ನನ್ನ ಗಂಡ ಜಂಬ ಕೊಚ್ಕೊಳ್ತಾ ಇದ್ರು. ನಾನು, ನೋಡ್ರಿ ನೀವು ಮಾಡಿದ ವಡೆನ ನಾಯಿನೂ ಮೂಸಿನೋಡಲ್ಲ ಅಂತ ಅವರಿಗೆ ಛಾಲೆಂಜ್ ಮಾಡೋಣ ಅಂತಿದ್ದೆ. ಅಷ್ಟರಲ್ಲಿ ನೀವು ವಡೆ ತಿಂದುಬಿಟ್ರಿ" ಅಂದಳು ಶ್ರೀಮತಿ.

ಅಷ್ಟೊತ್ತಿಗೆ ನಾಯಿ ಮೂಸಿದ ವಡೆನ ಸೋಮು ತಿಂದ ಅಂತ ಬಡಾವಣೇಲಿ ಸುದ್ದಿ ಆಗಿ ಶ್ರೀಮತಿ ಗಂಡ ರಾಜುನೂ ಸೋಮು ಹೆಂಡ್ತಿ ಸೋಮಿನೂ ನಲ್ಲಿ ಬಳಿ ಬಂದರು.

"ಮುನ್ಸಿಪಾಲಿಟಿಗೆ ಹೋಗಿ ದೂರು ಕೊಡ್ರಿ ಅಂದ್ರೆ ಇಲ್ಲೇನ್ರೀ ಮಾಡ್ತಿದೀರ? ಸುಡುಗಾಡು ವಡೆ ತಿಂದ್ಕೊಂಡು" ಅಂದ ಸೋಮಿ ಶ್ರೀಮತಿ ಕಡೆ ಕೆಕ್ಕರಿಸಿಕೊಂಡು ನೋಡಿದಳು.

ರಾಜು ಸೋಮು ಹತ್ತಿರ ಬಂದು "ಗಂಡಸಿನ ದು:ಖಕ್ಕೆ ಗಂಡಸೇ ಆಗೋದು ಅನ್ನೋದನ್ನು ಇವತ್ತು ನೀವು ಸಾಬೀತುಪಡಿಸಿದಿರಿ ಸೋಮು. ನನಗೆ ನಿಮ್ಮ ಮೇಲೆ ಹೆಮ್ಮೆ. ಅಡಿಗೆಗೆ ಹೆಸರು ನಳಮಹರಾಜ, ಅಂಥಾ ಜಾತಿಯ ಗಂಡಸನ್ನೇ ಹೀಯಾಳಿಸಿದಳು ನನ್ನ ಹೆಂಡತಿ. ನಿಮ್ಮಿಂದಾಗಿ ನನ್ನ ಮರ್ಯಾದೆ ಉಳೀತು. ಗಂಡಸರ ಮರ್ಯಾದೆನ ಗಂಡಸರೇ ಕಾಪಾಡಬೇಕು, ಗಂಡ ಮಾಡಿದ ವಡೆ ತಿನ್ನೇ ಅಂದರೆ ಅದನ್ನು ನಾಯಿಗೆ ಹಾಕೋದಾ. ಹಾಳಾದ್ದು ನಾಯಿನೂ ನಾನು ಮಾಡಿದ ವಡೆ ತಿನ್ನದೆ ನನಗೆ ಅವಮಾನ ಮಾಡಿತು. ನಾನು ಮಾಡಿದ ವಡೆ ತಿಂದು

ನನ್ನ ಗೌರವ ಹೆಚ್ಚಿಸಿದಿರಿ. ಇನ್ನು ಮೇಲೆ ನಾನು ವಡೆ ಮಾಡಿದಾಗಲೆಲ್ಲಾ ನಿಮಗೆ ನಾಲ್ಕು ವಡೆ ಮೀಸಲು" ಅಂದರು.

"ನಲ್ಲಿ ನೀರೂ ಬೇಡ ವಡೆನೂ ಬೇಡ ನಡೀರಿ ಮನೆಗೆ" ಅಂದು ಸೋಮು ಕೈ ಹಿಡಿದು ಎಳೆದಳು ಸೋಮಿ.

ಸೋಮುನ ಸೋಮಿ ಬಲವಂತವಾಗಿ ಎಳ್ಕೊಂಡು ಮನೆಗೆ ಬರೋಷ್ಟರಲ್ಲಿ ಸೋಮಿ ತಂದೆ ಬಂದಿದ್ದರು.

"ಇದ್ಯಾಕಮ್ಮ ಅಳಿಯಂದಿರನ್ನು ಹೀಗೆ ನಾಯಿ ತರ ಎಳ್ಕೊಂಡು ಬಂದಿದೀಯಲ್ಲ?. ನೀನು ಮುಂದೆ ಹೊರಟರೆ ಅವರು ಹಿಂದೆ ಬರ್ತಾರಲ್ಲ ಅಂದರು. ಸೋಮು ತೆಪ್ಪಗೆ ಕುರ್ಚಿಲಿ ಕೂತ.

ಸೋಮಿ "ಅಪ್ಪಾ ಇವರು ಮಾಡೋ ಕೆಲಸ ಒಂದೆರಡಲ್ಲ. ಇವರಿಗೆ ಒಂದು ಕೆಲಸ ಹೇಳಿದರೆ ಆ ಕೆಲಸ ಬಿಟ್ಟು ಮಿಕ್ಕೆಲ್ಲದ್ದು ಮಾಡಿ ನನ್ನ ಮರ್ಯಾದೆನೂ ಕಳೆದುಬಿಡ್ತಾರೆ ಅಂದಳು.

ಸೋಮಿಯ ಅಪ್ಪ ಸೋಮು ಬೆನ್ನ ಮೇಲೆ ಕೈ ಹಾಕಿ "ಗಂಡಸಾಗಿ ಹುಟ್ಟಿದ ಮೇಲೆ ಇಂಥವುಗಳನ್ನು ಅರಗಿಸಿ ಜಯಿಸಿ ಗಂಡಸು ಅಂತ ತೋರಿಸಿಕೊಳ್ಳಬೇಕು. ಈಗ ನಾನಿಲ್ವೇ ಹಾಗೆ" ಎಂದು ಭುಜ ಕುಣಿಸಿ ನಕ್ಕರು.

"ಅಪ್ಪಾ ಕಾಫಿ ತರ್ತೀನಿ" ಅಂತ ಸೋಮಿ ಒಳಗೆ ಹೋಗುವುದರಲ್ಲಿದ್ದಾಗ ಸೋಮಿ ತಂದೆ ಒಂದು ನಿಮಿಷಮ್ಮ ಅಂದು ತಾವು ತಂದಿದ್ದ ಚೀಲದಿಂದ ಒಂದು ಪ್ಯಾಕೆಟ್ ಹೊರತೆಗೆಯುತ್ತಾ "ಆಂಜನೇಯನಿಗೆ ಹರಕೆ ಇತ್ತು. ಇವತ್ತು ಸೇವೆ ಮಾಡಿಸಿಕೊಂಡು ಬಂದೆ. ಪ್ರಸಾದ ಕೊಟ್ಟಿದಾರೆ. ನಿನಗೂ ಕೊಟ್ಟು ಹೋಗೋಣ" ಅಂತ ಬಂದೆ ಅಂತ ಪ್ಯಾಕೆಟ್ ಓಪನ್ ಮಾಡಿದಾಗ ಅದರಲ್ಲಿದ್ದ ವಡೆ ಸರ ನೋಡಿ ಸೋಮು ತಲೆತಿರುಗಿ ಬಿದ್ದ.



## ಲೇಖಕರ ಪರಿಚಯ



ಬೇಲೂರು ರಾಮಮೂರ್ತಿಯವರು 1950ರ ಜೂನ್ 30ರಂದು ಜನಿಸಿದರು. ಕನ್ನಡ ಸಾಹಿತ್ಯಕೃಷಿಯಲ್ಲಿ ತೊಡಗಿರುವ ಇವರು ಇದುವರೆಗೆ 22 ಕಾದಂಬರಿಗಳು, 24 ಕಿರುಕಾದಂಬರಿಗಳು, 30 ಹಾಸ್ಯ ಸಂಕಲನಗಳು, 14 ಕಥಾ ಸಂಕಲಗಳು, 2 ಶಿಶು ಸಾಹಿತ್ಯ, ಪ್ರವಾಸ ಕಥನ, ವಿಚಾರಧಾರೆ ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಬೇಲೂರು ರಾಮಮೂರ್ತಿಯವರ 'ಮಹಾಕವಿ ಮುದ್ದಣ' ಕೃತಿಗೆ ಗೊರೂರು ಪ್ರಶಸ್ತಿ', 'ಹಾಸ್ಯ ಗಂಗೋತ್ರಿ' ಹಾಸ್ಯ ಸಂಕಲನಕ್ಕೆ 2012ನೇ ಸಾಲಿನ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ, 'ಕವಿ, ಕಾವ್ಯ, ಸ್ವಾರಸ್ಯ' ಕೃತಿಗೆ ಜ್ಞಾನಜ್ಯೋತಿ ಟ್ರಸ್ಟ್ ಅವರಿಂದ 2019ರ ಕನ್ನಡ ಕಣ್ಮಣಿ ಪ್ರಶಸ್ತಿ, ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ, ರನ್ನ ಪ್ರಶಸ್ತಿ, ಪರಮಾನಂದ ಪ್ರಶಸ್ತಿ, ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಪ್ರಸ್ತುತ ಪಾಠವನ್ನು ಇವರ 'ನಗೋಣು ಬಾರಾ' ಎಂಬ ಕೃತಿಯಿಂದ ಆರಿಸಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಬಡಾವಣೆಯ ಜನರು ಮುನಿಸಿಕೊಳ್ಳಲು ಕಾರಣವೇನು?
2. ನಲ್ಲಿಯಲ್ಲಿ ನೀರು ಬರುವ ಹಾಗೆ ಮಾಡಿದರೆ ಏನನ್ನು ಕೊಡುತ್ತೇನೆ ಎಂದು ವನಜಾಕ್ಷಿಯವರು ಹೇಳಿದರು?
3. ಮುನ್ಸಿಪಾಲಿಟಿಯ ಅಧಿಕಾರಿಯು "ಏನ್ರೀ ಬೇಕು ನಿಮಗೆ" ಎಂದು ಕೇಳಿದಾಗ ಸೋಮು ಏನೆಂದು ಹೇಳಿದನು?
4. ನಲ್ಲಿಯಲ್ಲಿ ನೀರು ಬರಿಸಿದ ಸೋಮುವನ್ನು ಕಂಡು ಶ್ರೀಮತಿ ಏನೆಂದು ಹೇಳಿದಳು?
5. ಸೋಮು ತಲೆತಿರುಗಿ ಬೀಳಲು ಕಾರಣವೇನು?

## ಕ್ರಮೀಕರಿಸಿ ಬರೆಯಿರಿ

ಕೆಳಗೆ ನೀಡಿರುವ ಘಟನೆಗಳನ್ನು ಕ್ರಮೀಕರಿಸಿ ಬರೆಯಿರಿ

- "ಸೋಮು ಸರ್. ಹೌ ಸ್ವೀಟ್ ಓಫ್ ಯು, ಹೀಗೆ ಮುನ್ಸಿಪಾಲಿಟಿಗೆ ಹೋಗಿ ಹಾಗೆ ನೀರು ತರಿಸಿದಿರಲ್ಲ. ನೀವು ಭಗೀರಥನಿಗಿಂತ ಏನೂ ಕಡಿಮೆಯಿಲ್ಲ, ನೀವು ನಮ್ಮ ಏರಿಯಾದ ಸೋಮುರಥ"
- "ಏನ್ರೀ ಶ್ರೀಮತಿ ನೀವು ಹೇಳ್ತಿರೋದು. ನಾಯಿ ಮೂಸಿದ, ನೆಕ್ಕಿದ ವಡೆ ನನಗೆ ತಿನ್ನಿಸಿದಿರಾ ನೀವು"
- "ನನ್ನ ಹೆಂಡ್ತಿಗೂ ಅಷ್ಟೇರೀ, ಅವಳಿಗೆ ಬೋರ್‌ವೆಲ್ ನೀರೂ ಆಗಲ್ಲರೀ. ಅವಳಿಗೆ ಏನಿದ್ರೂ ಬಿಸ್ಲೇರಿ ವಾಟರೇ ಬೇಕು"
- "ಸೋಮು ಸರ್, ನಿಮ್ಮ ಮುಖಚರ್ಯೆಗೆ, ನಿಮ್ಮ ಮಾತಿಗೆ ಒಳ್ಳೆ ಬೆಲೆ ಇದೆ. ಪ್ಲೀಸ್ ನೀವು ಈಗ ಮುನ್ಸಿಪಾಲಿಟಿಗೆ ಹೋಗಿ ನಲ್ಲೀಲಿ ನೀರು ಬರೋ ಹಾಗೆ ಮಾಡಿದರೆ ನಾನು ನಿಮ್ಮ ಬಾಯಲ್ಲಿ ನೀರೂರೋ ಹಾಗೆ ಮಾಡ್ತೀನಿ."
- "ಓಹೋ ಏನ್ಸಾರ್ ನೀವು ಕಾಮಧೇನುನೋ ಇಲ್ಲಾ ಕಲ್ಪವೃಕ್ಷಾನೊ, ಕೇಳಿದ್ದೆಲ್ಲ ಕೊಡೋ ಹಾಗೆ ಮಾತಾಡ್ತಾ ಇದೀರಾ."
- "ಸೋಮಿ ಈ ಕೊಡ, ಸೊಂಟ, ನಲ್ಲಿ, ನೀರು ಇವೆಲ್ಲಾ ನಿನ್ನ ಕೆಲಸ. ಸೊಂಟಕ್ಕೆ ಕೊಡ ಇಟ್ಕೊಂಡು ನೀನೇ ಹೋಗು"

## ಸಂಭಾಷಣೆ ಬರೆಯಿರಿ

ಸೋಮಿಯ ತಂದೆ ತಂದಿದ್ದ ವಡೆ ಸರವನ್ನು ಕಂಡು ಸೋಮು ತಲೆತಿರುಗಿ ಬಿದ್ದ. ಆಮೇಲೆ ಎಚ್ಚರಗೊಂಡ ಸೋಮು ಮತ್ತು ಸೋಮಿಯ ನಡುವೆ ನಡೆದಿರಬಹುದಾದ ಸಂಭಾಷಣೆ ಏನಾಗಿರಬಹುದು? ಊಹಿಸಿ ಸಂಭಾಷಣೆಯನ್ನು ಬರೆಯಿರಿ.

## ಮನವಿ ಪತ್ರ ಬರೆಯಿರಿ

ನೀವು ವಾಸಿಸುವ ಬಡಾವಣೆಯ ಜನರು ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆಯನ್ನು ವಿವರಿಸಿ ನಗರ ಸಭಾ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ.

## ಕಿರು ಟಿಪ್ಪಣಿ ಬರೆಯಿರಿ

"ನೀರು ಅಮೂಲ್ಯವಾದುದು. ಮನುಷ್ಯನ ಪ್ರತಿಯೊಂದು ಚಟುವಟಿಕೆಗಳಿಗೂ ನೀರು ಅತ್ಯಗತ್ಯ ಈ ಕಾರಣದಿಂದಲೇ ಎಲ್ಲಾ ನಾಗರೀಕತೆಗಳೂ ಹುಟ್ಟಿಕೊಂಡದ್ದು ನದಿ ದಡಗಳಲ್ಲಿ." - ಈ ಹೇಳಿಕೆಯ ಆಧಾರದಲ್ಲಿ 'ನೀರೊಂದು ವರ' ಎಂಬ ವಿಷಯದ ಕುರಿತು ಕಿರು ಟಿಪ್ಪಣಿ ಬರೆಯಿರಿ.

## ಲೇಖನ ಬರೆಯಿರಿ

'ನಲ್ಲಿಯಲ್ಲಿ ನೀರು ಬಂತು' ಎಂಬ ಈ ಪಾಠವು ನಗೆ ಬರಹ ಅಥವಾ ಹಾಸ್ಯ ಲೇಖನ ಎಂಬ ಸಾಹಿತ್ಯ ಪ್ರಕಾರಕ್ಕೆ ಸೇರಿದೆ. ದೈನಂದಿನ ಜೀವನದಲ್ಲಿ ನಾವು ನೋಡುವ, ಕೇಳುವ ಮತ್ತು ಅನುಭವಿಸುವ ಹಾಸ್ಯ ಸನ್ನಿವೇಶಗಳನ್ನು ಬರಹರೂಪಕ್ಕೆ ಇಳಿಸುವ ಪ್ರಯತ್ನ ಇದಾಗಿದೆ.

ನಿಮ್ಮ ಜೀವನದಲ್ಲೂ ಅನೇಕ ಹಾಸ್ಯ ಸನ್ನಿವೇಶಗಳು ಎದುರಾಗಿರಬಹುದಲ್ಲವೇ? ಅಂತಹ ಒಂದು ಸನ್ನಿವೇಶವನ್ನು ನೆನಪಿಸಿಕೊಂಡು ಒಂದು ಹಾಸ್ಯ ಲೇಖನವನ್ನು ಬರೆಯಿರಿ.

## ಘೋಷಣ ವಾಕ್ಯ ಬರೆಯಿರಿ

ಶುದ್ಧಜಲದ ಮಹತ್ವವನ್ನು ಸಾರುವ ಘೋಷಣ ವಾಕ್ಯಗಳನ್ನು ಬರೆಯಿರಿ

## ದ್ವಿರುಕ್ತಿ ಪದಗಳನ್ನು ಬಳಸಿ ವಾಕ್ಯ ಮಾಡಿರಿ

ಈ ಕೆಳಗಿನ ವಾಕ್ಯವನ್ನು ಗಮನಿಸಿರಿ.

**"ನಲ್ಲಿಯಲ್ಲಿ ಒಂದೊಂದು ದಿನ ನೀರು ಬರೋಲ್ಲ" ಅಂದರು.**

ಇಲ್ಲಿ 'ಒಂದು' ಎನ್ನುವ ಪದವು ಎರಡು ಸಲ ಬಂದು ಒಂದೊಂದು ಎಂಬುದಾಗಿ ಆಗಿದೆ. ಇಂತಹ ಇತರ ದ್ವಿರುಕ್ತಿ ಪದಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಉಪಯೋಗಿಸಿ ಸ್ವಂತ ವಾಕ್ಯ ಮಾಡಿರಿ.

- ಚೂರು ಚೂರು
- ಮೆಲ್ಲ ಮೆಲ್ಲನೆ
- ತುತ್ತತುದಿ
- ಮೊತ್ತಮೊದಲು
- ಎರಡೆರಡು
- ಬನ್ನಿ ಬನ್ನಿ

'ದ್ವಿರುಕ್ತಿ' ಎಂದರೆ ಎರಡು ಬಾರಿ ಹೇಳುವುದು ಎಂದರ್ಥ. ಸಾಮಾನ್ಯವಾಗಿ ಉತ್ಸಾಹ, ಅವಸರ, ದುಃಖ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಒಂದು ಪದವನ್ನೋ, ವಾಕ್ಯವನ್ನೋ ಎರಡೆರಡು ಸಲ ಉಚ್ಚರಿಸುವುದುಂಟು. ಇದನ್ನು ನಾವು ದ್ವಿರುಕ್ತಿ ಎಂದು ಕರೆಯುತ್ತೇವೆ.

## ನುಡಿಗಟ್ಟುಗಳು

ಈ ಕೆಳಗಿನ ವಾಕ್ಯವನ್ನು ಗಮನಿಸಿರಿ.

**ಅಧಿಕಾರಿ <u>ಕೆಂಗಣ್ಣು ಮಾಡಿ</u> ಹೇಳಿದ**

ಮೇಲಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದ ಕೆಂಗಣ್ಣು ಮಾಡು ಎಂಬುದರ ಸೂಚ್ಯಾರ್ಥ 'ಸಿಟ್ಟುಗೊಳ್ಳು' ಎಂದಾಗಿದೆ. ಇದೇ ರೀತಿ ಕನ್ನಡದಲ್ಲಿ ಇಂತಹ ಅನೇಕ ನುಡಿಗಟ್ಟುಗಳು ಪ್ರಯೋಗದಲ್ಲಿವೆ. ಕೆಲವೊಂದನ್ನು ಕೆಳಗೆ ನೀಡಲಾಗಿದೆ. ಅವುಗಳ ಸೂಚ್ಯಾರ್ಥ ಅಥವಾ ವಿಶೇಷಾರ್ಥವನ್ನು ಬರೆಯಿರಿ.

- ಕೈಕೊಡು
- ಕತ್ತಿಮಸೆ
- ಟೋಪಿ ಹಾಕು
- ಬೆನ್ನುತಟ್ಟು
- ತಲೆದೂಗು
- ಕೈ ಮೇಲಾಯಿತು
- ಸಿಂಹ ಸ್ವಪ್ನ

**ನುಡಿಗಟ್ಟು ಎಂದರೆ 'ನುಡಿಗಳನ್ನು ಕಟ್ಟಿರುವ ಅಥವಾ ಜೋಡಿಸಿರುವ' ಎಂದರ್ಥ. ವಿಶೇಷಾರ್ಥವನ್ನು ನೀಡುವ ಪದಪುಂಜವನ್ನು ನುಡಿಗಟ್ಟು ಎಂದು ಕರೆಯುತ್ತೇವೆ. ಇದರಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಒಳಾರ್ಥ ಅಥವಾ ಸೂಚ್ಯಾರ್ಥವೇ ಪ್ರಧಾನವಾಗುತ್ತದೆ.**

*****

# ಭಾಷಾ ಬಾಂಧವ್ಯ

## ಭಾಷಾ ಬಾಂಧವ್ಯ

- ಡಾ. ಮೋಹನ ಕುಂಟಾರ್

ಭಾಷೆ ಭಾಷೆಗೆ ಅಂತರವಿರಲು
ಭಾಷಾಂತರವೇ ದಾರಿ
ದೇಶ ದೇಶಕೆ ಅಂತರವಿರಲು
ಸೌಹಾರ್ದವ ಸಾರಿ

ಭಿನ್ನತೆ ಮರೆತು ಏಕತೆ ಹಾಡು
ಸ್ನೇಹ ಹಸ್ತವ ನೀಡು
ಬಹು ಬಾಹುಳ್ಯದ ಸಂಸ್ಕೃತಿ ನಾಡು
ಬಹುತ್ವ ನೆರೆಯುವ ಬೀಡು

ಹಲವು ಜಾತಿ ಹಲವು ಧರ್ಮ
ಬಹು ಭಾಷೆಗಳ ಸಂಸ್ಕಾರ
ದೇಶ ಭಾಷೆ ವೇಷ ಕೋಶ
ಜೀವ ಪ್ರೀತಿಯೇ ಸತ್ಕಾರ

ಭಾಷೆ ಭಾಷೆಗೂ ದ್ವೇಷವು ಸಲ್ಲ
ಒಲುಮೆಯೊಂದೇ ಬೇಕು
ಭಾಷಿಕ ಗಡಿಗಳ ಮೀರಿ ಬೆಳೆಯಲು
ಮಾನವತೆಯೊಂದೇ ಸಾಕು

## ಲೇಖಕರ ಪರಿಚಯ



ಕಾಸರಗೋಡಿನವರಾದ ಡಾ. ಮೋಹನ ಕುಂಟಾರ್ ಅವರು 25-05-1963 ರಂದು ಜನಿಸಿದರು. ಪಿ.ಎಚ್.ಡಿ. ಪದವೀಧರರಾದ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಭಾಷಾಂತರ, ಸಾಹಿತ್ಯ, ಸಂಸ್ಕೃತಿ, ಮತ್ತು ಯಕ್ಷಗಾನಗಳು ಇವರ ಪ್ರಮುಖ ಆಸಕ್ತಿ ಕ್ಷೇತ್ರಗಳಾಗಿವೆ.

ಕೇರಳ ಕಥನ, ಸಮುದಾಯಗಳ ಕನ್ನಡ ಪರಂಪರೆ, ಕನ್ನಡ ಮಲೆಯಾಳಂ ಭಾಷಾಂತರ ಪ್ರಕ್ರಿಯೆ ಈ ಮುಂತಾಗಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. 'ಕನ್ನಡ ಅನುವಾದ ಸಾಹಿತ್ಯ', 'ಸಮುದಾಯಗಳಲ್ಲಿ ಲಿಂಗಸಂಬಂಧಿ ನೆಲೆಗಳು' ಪ್ರಮುಖ ಸಂಶೋಧನ ಲೇಖನಗಳಾಗಿವೆ. ಪ್ರಸ್ತುತ ಕವನವನ್ನು 'ಲೋಕಾಂತದ ಕಾವು' ಎನ್ನುವ ಕವನ ಸಂಕಲನದಿಂದ ಆರಿಸಲಾಗಿದೆ.

### ಚಟುವಟಿಕೆಗಳು



### ಹಾಡಿರಿ

ಪದ್ಯವನ್ನು ರಾಗವಾಗಿ ಹಾಡಿರಿ.



### ಉತ್ತರಿಸಿರಿ

1. ಭಾಷೆಗಳ ಮತ್ತು ದೇಶಗಳ ನಡುವೆ ಇರುವ ಅಂತರಗಳಗಳನ್ನು ಪರಿಹರಿಸಲಿರುವ ದಾರಿ ಯಾವುದು?
2. ಭಾಷಿಕ ಗಡಿಗಳನ್ನು ಮೀರಿ ನಡೆಯಬೇಕಾದರೆ ನಾವೇನು ಮಾಡಬೇಕು?
3. ನಮ್ಮ ದೇಶದ ವೈಶಿಷ್ಟ್ಯಗಳು ಪದ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ?

## ಆಶಯ ಬರೆಯಿರಿ

ಡಾ. ಮೋಹನ ಕುಂಟಾರ್ ಅವರು ಬರೆದ 'ಭಾಷಾ ಬಾಂಧವ್ಯ' ಎಂಬ ಪದ್ಯದ ಆಶಯವನ್ನು ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಲಾದ ಕವನದ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ.

ಭಾಷೆ ಭಾಷೆಗೂ ದ್ವೇಷವು ಸಲ್ಲ<br>
ಒಲುಮೆಯೊಂದೇ ಬೇಕು<br>
ಭಾಷಿಕ ಗಡಿಗಳ ಮೀರಿ ಬೆಳೆಯಲು<br>
ಮಾನವತೆಯೊಂದೇ ಸಾಕು

## ಹೋಲಿಕಾ ಟಿಪ್ಪಣಿ ಬರೆಯಿರಿ

'ಭಾಷಾ ಬಾಂಧವ್ಯ' ಎಂಬ ಪದ್ಯವನ್ನು ಈ ಕೆಳಗಿನ 'ಎಲ್ಲ ಕನ್ನಡ ಕನ್ನಡ' ಪದ್ಯದೊಂದಿಗೆ ಹೋಲಿಸಿ 'ಹೋಲಿಕಾ ಟಿಪ್ಪಣಿ' ಬರೆಯಿರಿ.

### ಎಲ್ಲ ಕನ್ನಡ ಕನ್ನಡ

**- ಕವಿತಾ ಮೇಗೂರು ಬಾರಿ**

ನಮ್ಮ ಹೃದಯದಿ ಮಿಡಿವ ಕನ್ನಡ,<br>
ನಮ್ಮ ನಾಲಿಗೆ ನುಡಿವ ಕನ್ನಡ,<br>
ನಮ್ಮ ನೆಲೆಯ ನಾಡು ಕನ್ನಡ,<br>
ಎಲ್ಲ ಕನ್ನಡ ಕನ್ನಡ |

ಬೇಂದ್ರೆ ಬರೆದು, ಬೆಳೆದ ಕನ್ನಡ,<br>
ಕುವೆಂಪು ನುಡಿಯಲಿ ನಲಿದ ಕನ್ನಡ,<br>
ನಿಸಾರ, ಅಡಿಗರರಳಿಸಿದ ಕನ್ನಡ,<br>
ಎಲ್ಲ ಕನ್ನಡ, ಕನ್ನಡ |

ವಿಶ್ವೇಶ್ವರಯ್ಯರ ಕಾಯಕದ ಕನ್ನಡ,
ರಾಜಕುಮಾರರಭಿನಯದ ಕನ್ನಡ,
ಭೀಮಸೇನರ ಗಾಯನದ ಕನ್ನಡ,
ಎಲ್ಲ ಕನ್ನಡ, ಕನ್ನಡ

ಹಂಪೆ-ಹಳೆಬೀಡ ಕಲೆಯಲ್ಲಿ ಕನ್ನಡ,
ಕಾವೇರಿ-ತುಂಗೆಯ ಅಲೆಯಲ್ಲಿ ಕನ್ನಡ,
ಸಹ್ಯಾದ್ರಿ ಕಾನನದ ಚೆಲುವಲ್ಲಿ ಕನ್ನಡ,
ಎಲ್ಲ ಕನ್ನಡ, ಕನ್ನಡ |

## ಪ್ರಬಂಧ ಬರೆಯಿರಿ

'ಭಾಷಾ ಬಾಂಧವ್ಯ' ಎಂಬ ಪದ್ಯದಲ್ಲಿ ಭಾಷೆ ಭಾಷೆಗಳ ನಡುವಿನ ಬಾಂಧವ್ಯದ ಮಹತ್ವವನ್ನು ಹೇಳಲಾಗಿದೆ. ಇದರ ಆಧಾರದಲ್ಲಿ 'ಭಾಷಾ ಸಾಮರಸ್ಯ' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

## ವಿಂಗಡಿಸಿ ಬರೆಯಿರಿ

ಮಾದರಿಯಂತೆ ಕೆಳಗೆ ನೀಡಿರುವ ಪದಗಳನ್ನು ಅರ್ಥಪೂರ್ಣವಾಗಿ ವಿಂಗಡಿಸಿ ಬರೆಯಿರಿ.

ಮಾದರಿ:- ಅಂತರ + ಇರಲು = ಅಂತರವಿರಲು

- ಒಲುಮೆಯೊಂದೆ
- ಭಾಷಾಂತರ
- ಮಾನವತೆಯೊಂದೇ
- ಅಡಿಗರರಳಿಸಿದ
- ರಾಜಕುಮಾರರಭಿನಯ
- ಕೋಶಗಳೇನೇಯಿರಲಿ

## ಪರ್ಯಾಯ ಪದ

ಒಂದು ಪದದ ಅರ್ಥಕ್ಕೆ ಸಮಾನವಾದ ಅರ್ಥವನ್ನು ಕೊಡುವ ಪದಗಳನ್ನು ಪರ್ಯಾಯ ಪದ ಅಥವಾ ಸಮಾನಾರ್ಥಕ ಪದ ಎಂದು ಕರೆಯುತ್ತಾರೆ.

ಉದಾ :- ಕಾಯಕ = ಕೆಲಸ, ದುಡಿಮೆ, ಕಜ್ಜ

ಇದೇ ರೀತಿ ಕೆಳಗೆ ನೀಡಿರುವ ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಕಾನನ -

ಏಕತೆ -

ನೀರು -

ದಾರಿ -

ತಾಯಿ -

ಭೂಮಿ -

ಅಪ್ಪ -

ಚಂದ್ರ -

ಸೂರ್ಯ -

ಮೋಡ -

ಆಕಾಶ -

## ಸಂಚಿಕೆ ತಯಾರಿಸಿರಿ

ಕನ್ನಡ ನಾಡು ನುಡಿಗೆ ಸಂಬಂಧಿಸಿದ ಹಾಡುಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಿರಿ.

*****

# ಹೊತ್ತಿಗೊದಗುವ ಮಾತು ಗಾದೆ

- ಎಂ. ಕೆ. ಗೋಪಿನಾಥ್

ನೀವು ಎಷ್ಟೆಷ್ಟೋ ಗಾದೆಗಳನ್ನು ಕೇಳಿರಬಹುದು. ಕೆಲವು ಗಾದೆಗಳನ್ನು ಮಾತಿನ ಮಧ್ಯೆ ಆಗಾಗ ಬಳಸಿಯೂ ಇರಬಹುದು. ಈ ಕೂಡಲೇ ಹತ್ತು ಗಾದೆಗಳನ್ನು ನೆನಪಿಗೆ ತಂದುಕೊಂಡು ಹೇಳಲು ನಿಮಗೆ ಸಾಧ್ಯವುಂಟೆ? ಕೇಳಿದ್ದು ಬಳಸಿದ್ದು ಎಲ್ಲ ಸೇರಿ ಒಟ್ಟು ಹತ್ತು ಹದಿನೈದು ಗಾದೆಗಳನ್ನು ಒಮ್ಮೆಗೇ ನೆನಪಿಗೆ ತಂದುಕೊಳ್ಳುವುದು ಕಷ್ಟವೆಂದೇ ತೋರುತ್ತದೆ. ಗಾದೆಗಳಲ್ಲಿ ಅರ್ಥ, ಪ್ರಾಸ, ಹಾಸ್ಯ, ಕಟಕಿ, ನಿಂದೆ, ಕಾವ್ಯ ಎಲ್ಲವೂ ಇದೆ. ಎಲ್ಲವೂ ಹದವಾಗಿ ಕಲೆತುಕೊಂಡು ಕ್ಷಣಾರ್ಧದಲ್ಲಿ ಘನಿಸಿ ಅಂಗೈಯಲ್ಲಿ ಅರಮನೆ ತೋರುವ ಗುಣ ಗಾದೆಗಳದು.

ಗಾದೆಗಳು ಜನಮನಕ್ಕೆ ಹಿಡಿದ ಕನ್ನಡಿ. ಲೋಕದ ಜನರ ಸ್ವಭಾವ ಚಿತ್ರಣ ಗಾದೆಗಳಲ್ಲಾದಂತೆ ಬೇರೆಲ್ಲೂ ಆಗಿಲ್ಲ. ಬಡಾಯಿ ಕೊಚ್ಚುವವನ ಬಗ್ಗೆ ಒಂದು ಗಾದೆ ಬೇಕೆ? 'ಕುದುರೆಗಿಂತ ಅದರ ಲದ್ದಿ ಬಿರುಸು' ಎಂಬ ಗಾದೆ ಇದೆ. ಜಿಪುಣರ ಮರ್ಮ ತಿಳಿಸುವ ಗಾದೆ ಅಪೇಕ್ಷಿಸುವಿರಾ? ತೆಗೊಳ್ಳಿ 'ದುಡ್ಡಿನ ಆಸೆಗೆ ಬೆಲ್ಲ ಮಾರಿ ಗೋಣಿಚೀಲ ನೆಕ್ಕಿದ' ಎಂಬ ಗಾದೆ. ಜಂಭ ಕೊಚ್ಚಿಕೊಳ್ಳುವವರನ್ನು ಕುರಿತು ಚಾಟಿ ಏಟು ಬೇಕೆ? 'ಬೆಟ್ಟ ಎತ್ತಿ ತಲೆಯ ಮೇಲಿಟ್ಟರೆ ಎಷ್ಟು ದೂರ ಬೇಕಾದರೂ ಹೊತ್ತೇನು' ಎಂಬ ಗಾದೆಯನ್ನು ಗಮನಿಸಬಹುದು.



ಮನುಷ್ಯಸ್ವಭಾವದ ಎಲ್ಲ ನ್ಯೂನಾತಿರೇಕಗಳೂ ಪ್ರತಿಧ್ವನಿಗೊಳ್ಳುವ, ಮನುಷ್ಯನ ಮನಸ್ಸಿನ ಒಳ ವ್ಯಾಪಾರಗಳ ದಟ್ಟ ಚಿತ್ರಣ ಚುಟುಕಾಗಿ ದೊರೆಯುವ ಏಕೈಕ ಸ್ಥಳವೆಂದರೆ ಗಾದೆ. ಹಾಗಾಗಿ ಗಾದೆಗಳು ಜನಸಾಮಾನ್ಯರ ಕಾವ್ಯ, ಕಾಸು ಖರ್ಚಿಲ್ಲದೆ ಪುಕ್ಕಟೆ ಸಿಗುವ ವಿವೇಕ. ಮೊನ್ನೆ ಮೊನ್ನೆ ಒಮ್ಮೆ ಬಸ್ ಪ್ರಯಾಣದಲ್ಲಿದ್ದಾಗ ನನ್ನ ಹಿಂದಿನ ಸೀಟಿನಲ್ಲಿ ಕುಳಿತಿದ್ದ ವ್ಯಕ್ತಿ ಪಕ್ಕದಲ್ಲಿದ್ದವನಿಗೆ ತನ್ನ ಯಾವುದೋ ಒಂದು ನಿರರ್ಥಕ ಪ್ರಯತ್ನವನ್ನು ಕುರಿತು ಹೇಳುತ್ತಾ, "ಯಾಕಾದರೂ ಈ 'ಗಾಳಿಗುದ್ದಿ ಮೈ ನೋಯಿಸಿಕೊಳ್ಳುವ ಕೆಲಸಕ್ಕೆ ಕೈಹಾಕಿದೆನೋ" ಎಂದ. "ನೀ ಮಾಡಿದ್ದು ಗಾಳಿಗುದ್ದೋ ಕೆಲಸ ಅಲ್ಲಪ್ಪಾ ಬೆಟ್ಟ ಅಗೆದು ಇಲಿ ಹಿಡಿಯೋ ಕೆಲಸ" ಎಂದ ಪಕ್ಕದಲ್ಲಿ ಕುಳಿತಿದ್ದಾತ. ಒಟ್ಟಿನಲ್ಲಿ 'ಸಾಯೋಕಾಲಕ್ಕೆ ನೊಣ ತಿಂದು ಜಾತಿ ಕೆಟ್ಟಂಗಾತು' ಎಂದಿತು ಹೆಂಗಸಿನ ಧ್ವನಿಯೊಂದು. ಸರಸರ ಬಂದವು ಈ ಗಾದೆಗಳು.

ಮೇಲಿನ ಮೂರು ಗಾದೆಗಳೂ ಒಂದೇ ಅರ್ಥಕೊಡುವ, ಒಂದೇ ಭಾವವನ್ನು ವ್ಯಕ್ತಪಡಿಸುವ ಮತ್ತು ಒಂದು ವಿಶಿಷ್ಟ ಸಂದರ್ಭದಲ್ಲಿ ಮಾತ್ರ ಬಳಸಬಹುದಾದ ಗಾದೆಗಳು, ಅವುಗಳ ಹೊರಮೈಯಲ್ಲಿ ವಿಪುಲ ವ್ಯತ್ಯಾಸಗಳಿವೆ; ಒಳಗಿನ ಹೂರಣ ಮಾತ್ರ ಒಂದೇ. ಗಾದೆಗಳ ಅಸಾಮಾನ್ಯ ಗುಣಗಳಲ್ಲಿ ಇದೂ ಒಂದು. ಒಮ್ಮೊಮ್ಮೆ ಈ ಸಮಾನಾಂತರ ಗಾದೆಗಳ ಸಂಖ್ಯೆ ಮೂರು ನಾಲ್ಕು ಕೂಡಾ ಇರುತ್ತವೆ. ಉದಾಹರಣೆಗೆ 'ಸಾಲಮಾಡಿ ವಾಲೆ ಕೊಂಡ, ವಾಲೆ ಮಾರಿ ಬಡ್ಡಿಕೊಟ್ಟ' ಎಂಬುದೊಂದು ಗಾದೆ. ಇದಕ್ಕೆ ಸಮಾನವಾಗಿ ಬರುವ ಗಾದೆ ಹೀಗಿದೆ – 'ವಾಲೆ ಮಾರಿ ಎಮ್ಮೆ ತಂದ, ಎಮ್ಮೆ ಮಾರಿ ಕೂರಿಗೆ ತಂದ' ಹೀಗೆ ಜೊತೆಜೊತೆಯಾಗಿ ಬರುವ ಗಾದೆಗಳ ಗುಂಪಿಗೆ ಕೊನೆಯಿಲ್ಲ; ಮೊದಲಿಲ್ಲ.

ಅರ್ಥ, ಧ್ವನಿಗಳಲ್ಲಿ ಒಂದನ್ನೊಂದು ಹೋಲುವ ಮೂರು ಮೂರು ಗಾದೆಗಳ ಸಮೂಹವನ್ನು ಪ್ರಯತ್ನಪಟ್ಟರೆ ಹುಡುಕಬಹುದು. 'ಎಲೆ ಎತ್ತೋ ಗುಂಡ ಎಂದರೆ ಉಂಡೋರೆಷ್ಟು ಮಂದಿ ಎಂದ', 'ಹುರುಳಿ ಸಾರಿಗೆ ಹೋಗಿ ಕುದುರೆ ಬೆಲೆ ಕೇಳಿದ', 'ಉಂಡಾಯಿತೋ ಎಂದು ಕೇಳಿದರೆ ಮುಂಡಾಸು ಮೂವತ್ತು ಮೊಳ ಎಂದ'. ಅಧಿಕಪ್ರಸಂಗಿಗಳ ಸ್ವಭಾವವನ್ನು ಉತ್ಪ್ರೇಕ್ಷಿಸಿ ಹೇಳುವ ಈ ಗಾದೆಗಳ ತೂಕ, ಬಣ್ಣ ಒಂದೇ. ಆಂತರಿಕ - ಬಾಹ್ಯ ರೂಪ, ಚಹರೆಗಳು ಒಂದೇ ತೆರನಾದುವು. ಹೀಗೆ ಜೊತೆ ಜೊತೆಯಾಗಿ ಮೂರು ಮೂರರ ಗುಂಪಿನಲ್ಲಿ ಕೆಲವೊಮ್ಮೆ ನಾಲ್ಕು ನಾಲ್ಕಾಗಿ ಬರುವ ಈ ತೆರನ ಗಾದೆಗಳೆಲ್ಲವನ್ನೂ ಒಬ್ಬನೇ ಒಬ್ಬಾತ ರಚಿಸಿರಲಾರ. ಒಬ್ಬರನ್ನು ನೋಡಿಕೊಂಡು ಇನ್ನೊಬ್ಬರು ಮಾಡಿರುವ ಕೆಲಸ ಇದಾಗಿರಬೇಕು. ಏನೇ ಇರಲಿ ಇಂತಹ ಗಾದೆಗಳ ಲಕ್ಷಣವನ್ನು 'ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲಾ' ಎಂಬ ಗಾದೆ ಬಹು ಚೆನ್ನಾಗಿ ಹೇಳಿಬಿಟ್ಟಿದೆ.



**ಕೈ ಕೆಸರಾದರೆ ಬಾಯಿ ಮೊಸರು**

ಆರಂಭಶೂರರನ್ನು 'ಹೊಸ ಅಗಸ ಗೋಣಿ ಎತ್ತಿ ಎತ್ತಿ ಒಗೆದ' ಎಂಬ ಗಾದೆ ಗೇಲಿ ಮಾಡುತ್ತದೆ. ಆಸೆ ಬುರುಕರನ್ನು 'ಕನಸಿನ ಬತ್ತಕ್ಕೆ ಎಚ್ಚೆತ್ತು ಗೋಣಿಯಾಂತರು' ಎಂಬ ಗಾದೆ ಜರಿಯುತ್ತದೆ. ಬಹಳಷ್ಟು ನಿರೀಕ್ಷಿಸಿ ಹೋದ ಕಡೆ ಏನೂ ಕೆಲಸಕ್ಕೆ ಬಾರದ ವಸ್ತು ಸಿಕ್ಕಿದಾಗ 'ಬುಕ್ಕರಾಯ ಮೆಚ್ಚಿ ಬೆಕ್ಕಿನ ಮರಿ ಕೊಟ್ಟ' ಎಂಬ ಗಾದೆ ಹೇಳಿಕೊಂಡು ಸಂತೋಷಪಟ್ಟುಕೊಳ್ಳಬಹುದು. ಇಂತಹ ಗಾದೆಗಳು ನೀಡುವ ಕೊಳ್ಳುವ ಅನುಭವ, 'ಮೊಂಡು ಕೈಯಲ್ಲಿ ಮಂಡೆ ತುರಿಸಿಕೊಂಡ ಹಾಗಲ್ಲ; ಕೊಳ್ಳಿ ತೆಗೊಂಡು ತಲೆಕೆರೆದುಕೊಂಡ ಹಾಗೆ' ಪ್ರಗಲ್ಭ; ಪರಿಪೂರ್ಣ.

'ಗೌಡನೊಳು ಹಗೆತನವು, ಕಿವುಡನೊಳು ಏಕಾಂತ, ಮೂಢನಿಗುಪದೇಶ ಇವು ಮೂರು ಹಸಿದೆದ್ದು ತೌಡು ತಿಂದಂತೆ' ಎಂದ ಸರ್ವಜ್ಞ ಕವಿ, ಈ ತ್ರಿಪದಿಯಾಗಲಿ, 'ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗನು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ' ಎಂಬ ವಚನವಾಗಲಿ ಗಾದೆಗಳ ಸಾಲಿನಲ್ಲೇ ನಿಲ್ಲಿಸಬಹುದಾದ ಲೋಕಾನುಭವದ ಮಾತುಗಳು, ಹಾಗೆಯೇ ಬಸವಣ್ಣನವರ 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ', ಎಂಬ ವಚನವಾಗಲಿ 'ಅಗಸಿ ನೀರೊಳಗಿರ್ದು ಬಾಯಾರಿ ಸತ್ತಂತೆ' ಎಂಬ ಅಕ್ಕನ ವಚನವಾಗಲಿ, ಗಾದೆಗಳ ಸೀಮೆಗೆ ತುಂಬ ಹತ್ತಿರವಾದವುಗಳೇ. ಸರ್ವಜ್ಞನ ವಚನಗಳನ್ನು ಗಾದೆಗಳಿಗೆ ಸಮನಾಗಿಯೇ ಜನಸಾಮಾನ್ಯರು ಮಾತುಕತೆಗಳಲ್ಲಿ ಬಳಸುತ್ತಾರೆ.

'ತೋಟ ಶೃಂಗಾರ ಒಳಗೆ ಗೋಳಿಸೊಪ್ಪು' ಎಂಬ ಗಾದೆಮಾತನ್ನೇ ಗಾದೆಗಳ ಬಗೆಗೆ ಅನ್ವಯಿಸಲು ಬರುವುದಿಲ್ಲ. ಗಾದೆಗಳದು ರಾಜವನ. ಶ್ರೀ ಸಾಮಾನ್ಯನಿಗೂ ಈ ರಾಜವನಕ್ಕೆ ಪ್ರವೇಶದ ಹಕ್ಕುಂಟು. 'ಹಂಪೆಗೆ ಹೋಗುವುದಕ್ಕಿಂತ ಕೊಂಪೆಯಲ್ಲಿರುವುದೇ ಲೇಸು' ಎಂದುಕೊಂಡು ಕುಳಿತುಬಿಟ್ಟರೆ ಗಾದೆಗಳು ಕೈಗೆ ಹತ್ತುವುದಿಲ್ಲ. ವಿದ್ಯಾವಂತರು, ಶಿಕ್ಷಣವಿಲ್ಲದ ಜನ ಎಂದು ತಾರತಮ್ಯ ತೋರದೆ ಎಲ್ಲರಿಗೂ ಒಲಿಯುವ ದೇವತೆ ಗಾದೆ. ಇಟ್ಟರೆ, ತೊಟ್ಟರೆ ಪುಟ್ಟಕ್ಕ ಚಂದ; ಉಪಯೋಗಿಸಿ ನೋಡಿದರೆ ಗಾದೆಯ ಗುಣ ಗೊತ್ತಾದೀತು. 'ಮುನಿಸಿಕೊಂಡು ಕೂತೋನು ಮೂರು ಮುದ್ದೆ ಉಂಡ, ನಾಚಿಕೊಂಡು ಕೂತೋನು ನಾಲ್ಕು ಮುದ್ದೆ ಉಂಡ' ಎನ್ನುತ್ತದೆ ಗಾದೆ. ಗಾದೆಗಳ ವಿಚಾರದಲ್ಲಿ ಮುನಿಸು ತರವಲ್ಲ, ನಾಚಿಕೆಯೇ ಲೇಸು ಎನಿಸುತ್ತದೆ.

ನಾವೀಗ ಗಾದೆಗಳ ಬಗ್ಗೆ ವಿಚಾರ ಲಹರಿ ಹರಿಸುತ್ತಾ ಹತ್ತೆಂಟು ಗಾದೆಗಳನ್ನು ಮೆಲುಕುಹಾಕಿದೆವು. ವ್ಯಾವಹಾರಿಕ ಬದುಕಿನಲ್ಲಿ ಗಾದೆಗಳ ಪಾತ್ರ ಏನು? ಎಂಬ ಪ್ರಶ್ನೆಯನ್ನು ಬದಿಗಿಟ್ಟು ನಮ್ಮ ಭಾವನಾತ್ಮಕ ಬದುಕಿನಲ್ಲಿ ಗಾದೆಗಳಿಗೆ ಒಂದು ಸ್ಥಾನ ಕೊಟ್ಟಾಗ ಗಾದೆಗಳ ಉಪಯುಕ್ತತೆ ಮನದಟ್ಟಾಗುತ್ತದೆ.

ಹೇರಳವಾದ ಲೋಕಾನುಭವ, ಬದುಕಿಗೆ ಸೂತ್ರ ಪ್ರಾಯವಾಗಬಲ್ಲ ವಿವೇಕ, ರಂಜನೀಯ ಹಾಸ್ಯ, ಹಾಳತವಾದ ಉತ್ಪ್ರೇಕ್ಷೆ, ಪ್ರಾಸವೈಭವ - ಈ ಎಲ್ಲ ಜಿನಸುಗಳು ಹದವಾಗಿ ಒಂದೇ ಮಾತಿನಲ್ಲಿ ಮಿಳಿತಗೊಂಡು ಕಟವಾದಾಗ ಹುಟ್ಟುವ ಮಾತೇ ಗಾದೆ, ಅದೇ ಮುತ್ತಿನಂತಹ ಮಾತು. ಅದೇ ಶ್ರೀಸಾಮಾನ್ಯನ ಪಾಲಿನ ಕಾವ್ಯ.







## ಚಟುವಟಿಕೆಗಳು

### ಉತ್ತರಿಸಿರಿ

1. ಗಾದೆಗಳು ಎಂದರೇನು?
2. "ಸಾಲ ಮಾಡಿ ವಾಲೆಕೊಂಡ, ವಾಲೆ ಮಾರಿ ಬಡ್ಡಿ ಕೊಟ್ಟ" ಈ ಗಾದೆ ಮಾತಿಗೆ ಸಮಾನವಾದ ಅರ್ಥ ಕೊಡುವ ಗಾದೆ ಮಾತು ಯಾವುದು?
3. 'ಹೊಸ ಅಗಸ ಗೋಣಿ ಎತ್ತಿ ಎತ್ತಿ ಒಗೆದ' ಎಂಬ ಗಾದೆ ಮಾತಿನ ಅರ್ಥವನ್ನು ಬರೆಯಿರಿ.
4. ಬದುಕಿನಲ್ಲಿ ಗಾದೆ ಮಾತುಗಳ ಪ್ರಯೋಜನ ಏನು?

### ಪಟ್ಟಿ ಮಾಡಿರಿ

ಈ ಲೇಖನದಲ್ಲಿ ಬಂದಿರುವ ಗಾದೆ ಮಾತುಗಳನ್ನು ಪಟ್ಟಿ ಮಾಡಿರಿ.

### ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

ಈ ಕೆಳಗಿನ ಗಾದೆ ಮಾತಿನ ವಿಸ್ತರಣೆಯನ್ನು ಓದಿರಿ.

**'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು'**

ಗಾದೆಯು ವೇದಕ್ಕೆ ಸಮಾನವಾಗಿದೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆ ಮಾತುಗಳು ನಮ್ಮ ಹಿರಿಯರ ಸುದೀರ್ಘ ಜೀವನಾನುಭವದಿಂದ ಹುಟ್ಟಿಕೊಂಡ ಅಮೂಲ್ಯ ರತ್ನಗಳಾಗಿವೆ. ಇವುಗಳು ನೋಡಲು ಒಂದು ಸಾಲಿನಷ್ಟು ಕಿರಿದಾಗಿದ್ದರೂ ಅದರ ಅರ್ಥ ವ್ಯಾಪ್ತಿ ವಿಶಾಲವಾದುದಾಗಿದೆ. ಈ ಆಶಯಕ್ಕೆ ಪೂರಕವಾದ ಒಂದು ಗಾದೆ ಮಾತಿದೆ. ಅದುವೇ ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬುದು.

ನಾವು ಯಾವುದೇ ವ್ಯಕ್ತಿ ಅಥವಾ ವಸ್ತುವನ್ನು ಅದರ ಆಕಾರ ನೋಡಿ ಅದು ಹೀಗೆಯೇ ಆಗಿರಬಹುದೆಂದು ನಿರ್ಧರಿಸಬಾರದು. ಇರುವೆ ಗಾತ್ರದಲ್ಲಿ ಚಿಕ್ಕದಾದರೂ ಅದು ಮಾಡುವ ಕೆಲಸ ಹಿರಿದಾದುದು. ಕ್ರಿಕೆಟ್ ದೇವರು ಎಂದು ಕರೆಯುವ ಸಚಿನ್ ಕೂಡ ಶಾರೀರಿಕವಾಗಿ ಅಷ್ಟೇನೂ ನೀಳಕಾಯರಾಗಿರದಿದ್ದರೂ ಅವರ ಸಾಧನೆ ಇಡೀ ಲೋಕವೇ ಮೆಚ್ಚುವಂತದ್ದು. ಹಾಗಾಗಿ ಸಾಧನೆಯನ್ನು ಮಾಡಲು ಮತ್ತು ಗುರುತಿಸಲು ನಮ್ಮ ಭೌತಿಕ ಆಕಾರ ಮುಖ್ಯವಾಗುವುದಿಲ್ಲ.

ಕನ್ನಡದಲ್ಲಿ ಇಂತಹ ಅನೇಕ ಗಾದೆ ಮಾತುಗಳಿವೆ. ಅವುಗಳಲ್ಲಿ ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಎಂಬ ಗಾದೆ ಮಾತನ್ನು ನೀವು ಕೇಳಿರಬಹುದಲ್ಲವೇ?

ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

### ಸನ್ನಿವೇಶ ಚಿತ್ರಣ.

ಪಾಠಭಾಗದ ಹಿನ್ನೆಲೆಯಲ್ಲಿ ಕೆಲವು ಗಾದೆಮಾತುಗಳನ್ನು ಬಳಸಿಕೊಂಡು ಒಂದು ಸನ್ನಿವೇಶ ಚಿತ್ರಣ ಮಾಡಿರಿ.

### ಒಗಟು ತಯಾರಿಸುವ

ಈ ಕೆಳಗಿನ ಒಗಟುಗಳಿಗೆ ಉತ್ತರಿಸಿರಿ

ಹತ್ತು ಸಾಸಿರ ಕಣ್ಣು ನೆತ್ತಿಲಾದರು
ಬಾಲ ಹುತ್ತಿನ ಹುಳವ ಹಿಡಿಯುವುದು
ಕವಿಜನರ ಮೊತ್ತವಿದ ಹೇಳಿ ಸರ್ವಜ್ಞ||

ಕಾಲುಂಟು ನಡೆಯದದು ಮೂಲೆಯಲಿ ಕಟ್ಟಿಹುದು
ಬಾಲಕರ ಸೊಮ್ಮ ಹೊರುವುದು ಕವಿಗಳಲಿ
ಬಾಲರಿದ ಪೇಳಿ ಸರ್ವಜ್ಞ||

ರೆಕ್ಕೆಯುಂಟು ಹಕ್ಕಿಯಲ್ಲ.
ನೇತಾಡುತ್ತಿದ್ದರೂ ಬಾವಲಿಯಲ್ಲ
ತಿರುಗುತ್ತಿದ್ದರೂ ರಾಟೆಯಲ್ಲ

ನೆಲ ಬಿಟ್ಟು ಹಾರಾಟ
ಕೆಲ ದೇಶ ಸಂಚಾರ
ಬಲದಿಂದ ಜನರನೊಯ್ಯುವೆ
ಇಲ್ಲ ಬಳಲಿಕೆ ನನಗೆ ನೋಡಿ

ಈ ಒಗಟುಗಳನ್ನು ಗಮನಿಸಿದಿರಲ್ಲವೇ? ಇದೇ ರೀತಿಯಲ್ಲಿ ಇತರ ಒಗಟುಗಳನ್ನು ತಯಾರಿಸಿರಿ.

## ಜೋಡುನುಡಿ

ಈ ಕೆಳಗಿನ ಸಾಲುಗಳನ್ನು ಗಮನಿಸಿರಿ.

- ಮೊಲದ ಮಾತನ್ನು ಕೇಳಿ ಸಿಂಹವು ಹಿಂದೆಮುಂದೆ ನೋಡದೆ ಬಾವಿಗೆ ಧುಮುಕಿತು.
- ವಿದ್ಯಾರ್ಥಿಯು ತಾನು ಕಳೆದುಕೊಂಡ ಪೆನ್ನನ್ನು ಸುತ್ತಮುತ್ತ ಹುಡುಕಿದನು.

ಈ ವಾಕ್ಯಗಳಲ್ಲಿ ಅಡಿಗೆರೆ ಎಳೆದ 'ಹಿಂದೆಮುಂದೆ', 'ಸುತ್ತಮುತ್ತ' ಎಂಬ ಪದಗಳು ಜೋಡು ನುಡಿಗಳಾಗಿವೆ.
ಇಂತಹ ಇತರ ಶಬ್ದಗಳನ್ನು ಸಂಗ್ರಹಿಸಿ ವಾಕ್ಯ ರೂಪದಲ್ಲಿ ಬರೆಯಿರಿ.

## ಕ್ರಿಯಾಪದ

ಕ್ರಿಯೆಯನ್ನು ಸೂಚಿಸುವ ಪದಗಳನ್ನು ಕ್ರಿಯಾಪದಗಳೆಂದು ಕರೆಯುತ್ತಾರೆ.
ಉದಾಹರಣೆಗೆ :-

- ಪಾಂಡು ಗುರುಗಳ ಕಾಲಿಗೆ ನಮಸ್ಕಾರ ಮಾಡಿದನು.
- ಸೌಮ್ಯ ಕವಿತೆಯನ್ನು ಬರೆದಳು.

ಇಲ್ಲಿ ಅಡಿಗೆರೆ ಎಳೆದ ಪದಗಳು ಕ್ರಿಯೆಯನ್ನು ಸೂಚಿಸುತ್ತವೆ. ಇಂತಹ ಪದಗಳೇ ಕ್ರಿಯಾಪದಗಳು.
ಪಠ್ಯ ಭಾಗದಲ್ಲಿ ಬಂದಿರುವ ಇತರ ಕ್ರಿಯಾಪದಗಳನ್ನು ಕಂಡುಹಿಡಿದು ಸ್ವಂತವಾಕ್ಯ ಮಾಡಿ ಬರೆಯಿರಿ.

## ವಿಶೇಷಣಗಳು

ಈ ಕೆಳಗಿನ ಪದಗಳನ್ನು ಗಮನಿಸಿರಿ.

**ಕಲಿಭೀಮ, ಕೆಂಪುಗುಲಾಬಿ, ಹೆಬ್ಬಂಡೆ, ಕರಿನೀರು, ಒಳ್ಳೆಯ ಮನುಷ್ಯ**

ಇವುಗಳಲ್ಲಿ ಕಲಿಭೀಮ ಎಂಬ ಪದದಲ್ಲಿ ಭೀಮ ಎಂಬ ನಾಮಪದದ ವಿಶೇಷಣವಾಗಿ 'ಕಲಿ' ಎಂಬುದು ಬಂದಿದೆ. ಕಲಿ ಎಂದರೆ ವೀರ ಎಂಬ ಅರ್ಥವಿದೆ. ಇದು ಭೀಮನು ವೀರನಾಗಿದ್ದಾನೆ ಎಂಬುದನ್ನು ಸೂಚಿಸುತ್ತದೆ.

## ಗಾದೆಗಳನ್ನು ಕಂಡುಹಿಡಿಯಿರಿ

ಕೆಳಗಿನ ಆಶಯಗಳಿಗೆ ಸೂಕ್ತವಾದ ಗಾದೆಮಾತುಗಳನ್ನು ಕಂಡುಹಿಡಿದು ಬರೆಯಿರಿ.

"ನಾವು ನಮ್ಮ ಆದಾಯಕ್ಕೆ ತಕ್ಕ ಹಾಗೆ ಖರ್ಚು ಮಾಡಬೇಕು. ಆದಾಯ ಮೀರಿ ಖರ್ಚು ಮಾಡುವುದೆಂದರೆ ಸಾಲ ಮಾಡುವ ಪರಿಪಾಠ ಬೆಳೆಯುತ್ತದೆ. ಇದರಿಂದ ಬಾಳು ದುಃಖಮಯವಾಗುತ್ತದೆ."

"ನಮ್ಮ ನಮ್ಮ ಕಷ್ಟ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳಬೇಕು. ನಾವು ನಾವೇ ಜಗಳವಾಡಿದರೆ ನಮ್ಮ ದೌರ್ಬಲ್ಯಗಳನ್ನು ಗಮನಿಸಿದ ಇನ್ನೊಬ್ಬರು ನಮ್ಮ ಮಧ್ಯೆ ಪ್ರವೇಶಿಸಿ ತಾವು ಲಾಭ ಪಡೆದುಕೊಳ್ಳುತ್ತಾರೆ."

"ಕೂಡಿಟ್ಟ ಕುಡಿಕೆ ಹಣ ಎಂದಿಗೂ ಸಾಕಾಗುವುದಿಲ್ಲ. ಮನುಷ್ಯ ಸಂಪಾದಿಸುತ್ತಾ ಖರ್ಚು ಮಾಡಬೇಕು. ದುಡಿಮೆಯಿಂದ ಗಳಿಸಿದ ದುಡ್ಡಿಗೆ ಬೆಲೆ ಇದೆ. ಸೋಮಾರಿಯಾಗಿ ಕುಳಿತು ಉಣ್ಣುವವನಿಗೆ ಭವಿಷ್ಯ ಎಂದೂ ಕಷ್ಟಕರವೇ."

“ಯಾವ ಮನುಷ್ಯರನ್ನು ದೂರದಿಂದ ಕಂಡು ಅವರ ಗುಣಗಳನ್ನು ಅಳೆಯಲಾಗದು. ಅವರು ಹೊರನೋಟಕ್ಕೆ ಚಂದವಾಗಿ ಕಾಣಿಸುತ್ತಾರೆ. ಅವರು ಹಾಕುವ ಬಟ್ಟೆಯಿಂದ ಅವರು ಘನತೆವೆತ್ತ ವ್ಯಕ್ತಿಗಳೆಂದು ತೋರುತ್ತವೆ. ಆದರೆ ಅವರ ನಿಕಟ ಸಂಪರ್ಕಕ್ಕೆ ಬಂದಾಗಲಷ್ಟೇ ನಿಜವಾದ ಗುಣ ಸ್ವಭಾವಗಳು ತಿಳಿದುಬರುತ್ತವೆ.”

“ಮಕ್ಕಳು ಎಳೆಯವರಿದ್ದಾಗಲೇ ದೊಡ್ಡವರು ಅವರಲ್ಲಿರುವ ದುರ್ಗುಣಗಳು ಅವರು ಮಾಡಬಹುದಾದ ತಪ್ಪುಗಳನ್ನು ಕಂಡು ಕೊಂಡು ತಿದ್ದಬೇಕು. ಆಗ ಆ ಮಕ್ಕಳು ಕೇಳುವ ಸ್ಥಿತಿಯಲ್ಲಿರುತ್ತಾರೆ. ಆಗಲೇ ಸರಿಯಾದ ದಾರಿಗೆ ಅವರನ್ನು ತರಬಹುದು. ಈ ಕೆಲಸವನ್ನು ಪಾಲಕರಾಗಲೀ, ಪೋಷಕರಾಗಲೀ, ಶಿಕ್ಷಕರಾಗಲೀ ಮಾಡಬೇಕು. ಇಲ್ಲದೆ ಹೋದಲ್ಲಿ ದೊಡ್ಡವರಾದ ಮೇಲೆ ಆ ಮಕ್ಕಳನ್ನು ತಿದ್ದಲು ಈ ಮೂವರಿಂದಲೂ ಸಾಧ್ಯವಾಗುವುದಿಲ್ಲ. ಎಳೆಯವರಿದ್ದಾಗಲೇ ಮಕ್ಕಳನ್ನು ಸರಿಯಾದ ದಾರಿಗೆ ತರುವ ಪ್ರಯತ್ನ ಮಾಡಬೇಕು.”



### ಸಂಗ್ರಹಿಸಿ ಸಂಚಿಕೆ ತಯಾರಿಸಿರಿ

ಕನ್ನಡ ಭಾಷೆಯಲ್ಲಿ ಅನೇಕ ಗಾದೆ ಮಾತುಗಳು ಮತ್ತು ಒಗಟುಗಳು ಪ್ರಯೋಗದಲ್ಲಿವೆ. ಅಂತಹ ಗಾದೆ ಮಾತು ಮತ್ತು ಒಗಟುಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.

*****

# 2 ಸುಖ-ಸಂಪದ



ದೈಹಿಕ, ಮಾನಸಿಕ ಮತ್ತು ಸಾಮಾಜಿಕ ನೆಮ್ಮದಿಯ ಸ್ಥಿತಿಯೇ ಆರೋಗ್ಯ. ಉತ್ತಮ ಕೌಟುಂಬಿಕ ವಾತಾವರಣ , ಪ್ರೀತಿ, ಸ್ನೇಹ , ಸಹಕಾರ , ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪರಿಣಾಮ ಬೀರುತ್ತವೆ. ಸಾಮಾಜಿಕ ಒತ್ತಡವನ್ನು ಎದುರಿಸಲು ಉತ್ತಮ ಆರೋಗ್ಯವಿರಬೇಕು. ಪೋಷಕಾಂಶಯುಕ್ತ ಆಹಾರ, ದೈಹಿಕ ವ್ಯಾಯಾಮ, ಕ್ರೀಡೆ, ವಿಶ್ರಾಂತಿ ನಮ್ಮ ಆರೋಗ್ಯವನ್ನು ವೃದ್ಧಿಸುತ್ತದೆ. ದುಶ್ಚಟಗಳು, ಸಾಮಾಜಿಕ ಪಿಡುಗುಗಳು ಇವು ಮಾನಸಿಕ ದೌರ್ಬಲ್ಯಕ್ಕೆ ಕಾರಣವಾಗುವುದು. ಇಂಥ ದುರಾಭ್ಯಾಸಗಳನ್ನು ದೂರವಿಟ್ಟು ಉತ್ತಮ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಪ್ರತಿಯೊಬ್ಬನ ಆರೋಗ್ಯಕ್ಕೆ ಒಳ್ಳೆಯದು. ಆರೋಗ್ಯವಂತ ಪ್ರಜೆಯೂ ರಾಷ್ಟ್ರದ ಸಂಪತ್ತು ಎನ್ನುವುದನ್ನು ಮನನ ಮಾಡಿಕೊಳ್ಳಬೇಕಾಗಿದೆ.

# ಪ್ರವೇಶ ಚಟುವಟಿಕೆ

ಕೆಳಗೆ ಕೊಟ್ಟಿರುವ ಕ್ರೀಡೆಗಳು ಮತ್ತು ಕ್ರೀಡಾ ಪಟುಗಳನ್ನು ಗುರುತಿಸಿರಿ.






















❖ ನೀವು ಅತಿ ಹೆಚ್ಚು ಇಷ್ಟಪಡುವ ಕ್ರೀಡೆ ಯಾವುದು? ಯಾಕೆ? ಚರ್ಚಿಸಿ ಬರೆಯಿರಿ.

# ಕಾಲ್ಚೆಂಡು

- ಸಂಗ್ರಹ

ನೀವು ಕಾಲ್ಚೆಂಡು ಆಟವನ್ನು ನೋಡಿರಬಹುದಲ್ಲವೇ? ಅದನ್ನು ಆಡಿರುವಿರಾ? ಈ ಆಟವನ್ನು ನಾವು ಫುಟ್ಬಾಲ್ ಆಟವೆಂದು ಕರೆಯುತ್ತೇವೆ. ಕಾಲ್ಚೆಂಡು ಒಂದು ಜನಪ್ರಿಯ ಆಟವಾಗಿದೆ. ಇದನ್ನು ಆಡುವುದರಿಂದ ದೇಹದ ಎಲ್ಲ ಅವಯವಗಳಿಗೂ ಯೋಗ್ಯ ವ್ಯಾಯಾಮ ದೊರಕುತ್ತದೆ. ನಿತ್ಯವೂ ಶಾಲೆ ಬಿಟ್ಟ ಬಳಿಕ ಅರ್ಧ ತಾಸು ಕಾಲ್ಚೆಂಡು ಆಟವಾಡಿದರೆ ಅದು ದೇಹಕ್ಕೆ ಉತ್ತಮ ಉಲ್ಲಾಸವನ್ನೂ ಆರೋಗ್ಯವನ್ನೂ ತರುವುದು.

ಸಾಮಾನ್ಯವಾಗಿ ಮಕ್ಕಳು ಶಾಲೆಯಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲದೇ ಇದ್ದರೂ ಇರುವಷ್ಟು ಸ್ಥಳದಲ್ಲಿ ಕಾಲ್ಚೆಂಡು ಆಟದಲ್ಲಿ ತಲ್ಲೀನರಾಗುವುದನ್ನು ನಾವು ಕಾಣುತ್ತೇವೆ. ಗೋಲು ಹೊಡೆಯಬೇಕಾದ ಸ್ಥಳದಲ್ಲಿ ಎರಡು ಕಲ್ಲುಗಳನ್ನಾಗಲೀ, ಯಾವುದಾದರೂ ವಸ್ತುಗಳನ್ನಾಗಲೀ ಗುರುತಾಗಿ ಇಟ್ಟುಕೊಳ್ಳುತ್ತಾರೆ. ಚೆಂಡನ್ನು ಅತ್ತಿತ್ತ ತುಳಿದು ಓಡಿಸುತ್ತಾರೆ. ಇದು ಕ್ರಮಬದ್ಧವಾದ ಆಟವೆನಿಸದಿದ್ದರೂ ಕಾಲ್ಚೆಂಡು ಮಕ್ಕಳಲ್ಲಿ ಎಷ್ಟು ಆಸಕ್ತಿಯನ್ನು ಹುಟ್ಟಿಸಿರುತ್ತದೆ ಎಂದು ತಿಳಿದುಕೊಳ್ಳಬಹುದು.



ಕಾಲ್ಚೆಂಡಿನ ಆಟಕ್ಕೆ ಎಷ್ಟು ಸ್ಥಳ ಬೇಕೆಂದು ನಿಮಗೆ ಗೊತ್ತಿದೆಯೇ? ಅದರ ಕಳ 110 ಗಜ ಉದ್ದವೂ 60 ಗಜ ಅಗಲವೂ ಇರುವ ಆಯತಾಕೃತಿಯಲ್ಲಿರಬೇಕು. ಅಗಲದ ಎರಡು ಬದಿಗಳ ಮಧ್ಯದಲ್ಲಿ ಸಮದೂರದಲ್ಲಿ ಎಂಟು ಅಡಿ ಎತ್ತರದ ಕಂಬಗಳನ್ನು ನೆಡಬೇಕು. ಕಂಬಗಳ ತುದಿಗಳನ್ನು ಅಡ್ಡ ಕೋಲಿನಿಂದ ಸೇರಿಸಬೇಕು. ಹೀಗೆ ಆಟದ ಕಳದ ಎರಡು ಕಡೆಗಳಲ್ಲಿಯೂ ಎರಡೆರಡು ಕೋಲುಗಳನ್ನಿಟ್ಟು ಗುರುತಿಸಿದ ಸ್ಥಳಗಳು ಗೋಲುಗಳೆಂದು ಕರೆಯಲ್ಪಡುತ್ತವೆ. ಕಾಲಿನಿಂದ ತುಳಿದ ಚೆಂಡು ಈ ಗೋಲನ್ನು ಹಾದುಹೋದರೆ ಗೋಲು ಆಯಿತೆಂದು ತಿಳಿಯುತ್ತಾರೆ.

ಕಾಲ್ಚೆಂಡಿನ ಪಂದ್ಯಾಟದಲ್ಲಿ ಎರಡು ಗುಂಪುಗಳು ಬೇಕೆಂಬುದು ನಿಮಗೆ ತಿಳಿದಿದೆ. ಒಂದೊಂದು ಗುಂಪಿನಲ್ಲಿ ಹನ್ನೊಂದು ಮಂದಿ ಆಟಗಾರರಿರಬೇಕು. ಆಟದ ಕಳವನ್ನು ಎರಡು ವಿಭಾಗ ಮಾಡಿ ಒಂದೊಂದು ವಿಭಾಗದಲ್ಲಿ ಒಂದೊಂದು ಪಂಗಡ ನಿಂತುಕೊಳ್ಳಬೇಕು. ಒಂದೊಂದು ಕಡೆಯಲ್ಲಿಯೂ ಗೋಲಿನ ರಕ್ಷಕನಿರುತ್ತಾನೆ. ಇವನನ್ನು ಗೋಲ್ ಕೀಪರ್ ಎಂದು ಕರೆಯುತ್ತಾರೆ. ಇವನು ಗೋಲಿನ ಎದುರು ಭಾಗದಲ್ಲಿ ನಿಂತುಕೊಂಡು ಎದುರು ಪಕ್ಷದವರು ಗೋಲ್ ಹೊಡೆಯದ ಹಾಗೆ ನೋಡಿಕೊಳ್ಳುತ್ತಾನೆ. ಗೋಲಿನ ಸಮೀಪಕ್ಕೆ ಬಂದ ಚೆಂಡನ್ನು ಕೈಯಿಂದಲೋ ಕಾಲಿನಿಂದಲೋ ತಡೆದು ದೂರಕ್ಕೆ ಎಸೆಯುತ್ತಾನೆ. ಪ್ರತಿ ಗೋಲ್ ಕೀಪರನ ಮುಂಭಾಗದಲ್ಲಿ 'ಬೆಂಗಡೆ'ಯವರಾಗಿ ಇಬ್ಬರು ನಿಂತಿರುತ್ತಾರೆ. ಗೋಲಿನ ಕಡೆಗೆ ಬರುವ ಚೆಂಡನ್ನು ತಡೆಯುವುದೇ ಅವರ ಕೆಲಸ. ಇವರ ಮುಂಭಾಗದಲ್ಲಿ ಐದು ಮಂದಿ ಆಟಗಾರರಿರುತ್ತಾರೆ. ಅವರನ್ನು ಫೋರ್ವರ್ಡ್ ಅಥವಾ ಮುಂಗಡೆಯವರು ಎಂದು ಕರೆಯುತ್ತಾರೆ. ಚೆಂಡನ್ನು ತಮ್ಮ ವಿರುದ್ಧ ಪಂಗಡದ ಗೋಲುಗಳ ಸಮೀಪ ಕಳುಹಿಸುವುದೇ ಇವರ ಕೆಲಸ. ಉಳಿದ ಮಂದಿ ಎಡಬಲ ಬದಿಗಳಲ್ಲಿದ್ದು ಫೋರ್ವರ್ಡ್ ಮತ್ತು ಬೆಂಗಡೆಯವರಿಗೆ ಸಹಾಯ ಮಾಡುತ್ತಾರೆ. ಹೀಗೆ ಆಟಗಾರರ ವ್ಯವಸ್ಥಿತ ಹಂಚಿಕೆಯಿಂದ ಆಟವು ಪ್ರಾರಂಭವಾಗುತ್ತದೆ.



ಈ ಆಟವು ಸುಲಭವಾದ ಆಟವೆಂದು ನಮಗನಿಸಿದರೂ ಅದು ಹಾಗಲ್ಲವೆಂದು ಅದು ಕಷ್ಟವಿದೆ ಎಂದು ಅದನ್ನು ಚೆನ್ನಾಗಿ ವೀಕ್ಷಿಸಿದರೆ ತಿಳಿಯಬಹುದು. ಪ್ರತಿಯೊಬ್ಬ ಆಟಗಾರನೂ ಚುರುಕಾಗಿಯೂ ಜಾಗ್ರತೆಯಾಗಿಯೂ ಇದ್ದು ಚೆಂಡನ್ನು ಒದೆದು ಅದರ ಹಿಂದೆಯೇ ಓಡುತ್ತಿರಬೇಕು. ಚೆಂಡನ್ನು ಕಾಲಿನಿಂದ ಒದೆಯುತ್ತಾ ಯುಕ್ತಿಯಿಂದ ಎದುರು ಗುಂಪಿನ ಆಟಗಾರನನ್ನು ತಪ್ಪಿಸಿ ತನ್ನ ಗುಂಪಿನವನಿಗೆ ಚೆಂಡು ಸಿಗುವಂತೆ ಮಾಡುವ ಚಾತುರ್ಯವು ಆಟಗಾರನಲ್ಲಿರಬೇಕು. ಹೀಗೆ ಚೆಂಡನ್ನು ಒದೆಯುತ್ತಾ ಎದುರು ಭಾಗದ ಮುಂಗಡೆ ಮತ್ತು ಹಿಂಗಡೆಯ ಆಟಗಾರರನ್ನು ತಪ್ಪಿಸಿ ಗೋಲಿನಲ್ಲಿ ಹಾದು ಹೋಗುವಂತೆ ಹೊಡೆದರೆ ಹೊಡೆದ ಗುಂಪಿಗೆ ಗೋಲಾಗುತ್ತದೆ. ಹೆಚ್ಚು ಗೋಲುಗಳನ್ನು ಹೊಡೆದ ಪಂಗಡವು ವಿಜಯಿಯಾಗುತ್ತದೆ.

ಆಡುವಾಗ ಚೆಂಡನ್ನು ಕೈಯಿಂದ ಮುಟ್ಟುವುದಾಗಲೀ ಹೊಡೆಯುವುದಾಗಲೀ ಸಲ್ಲದು. ಹಾಗೆ ಆದರೆ ಆ ಪಂಗಡಕ್ಕೆ ಶಿಕ್ಷೆಯಾಗುತ್ತದೆ. ಇದಕ್ಕೆ ಪೆನಾಲ್ಟಿ ಎಂದು ಹೆಸರು. ಮುಟ್ಟಿದ ಸ್ಥಳದಿಂದ ಎದುರು ಪಂಗಡದವರು ಚೆಂಡನ್ನು ಹೊಡೆಯುವ ಅಧಿಕಾರವನ್ನು ಪಡೆಯುತ್ತಾರೆ. ಗೋಲ್ ಕೀಪರ್ ಮಾತ್ರವೇ ಚೆಂಡನ್ನು ಕೈಯಲ್ಲಿ ಹಿಡಿಯಬಹುದು. ಕಾಲ್ಚೆಂಡಿನ ಪಂದ್ಯಾಟವನ್ನು ಈ ಕ್ರಮಗಳಿಗನುಸಾರವಾಗಿ ನಡೆಸುವವನಿರುತ್ತಾನೆ. ಇವನಿಗೆ ರೆಫರಿ ಎಂದು ಹೆಸರು. ರೆಫರಿಯು ಆಟಗಾರರ ಹಿಂದೆಯೇ ಓಡಿ ಪಾಲನೆಯನ್ನು ನೋಡಿಕೊಳ್ಳುತ್ತಾನೆ. ತನ್ನ ನಿರ್ದೇಶನಗಳನ್ನು ವಿಸಿಲ್ ಊದುವುದರ ಮೂಲಕ ತಿಳಿಸುತ್ತಾನೆ. ರೆಫರಿಯ ನಿರ್ಣಯಕ್ಕೆ ಎರಡು ಪಂಗಡಗಳೂ ತಲೆಬಾಗಬೇಕು.

ಕಾಲ್ಚೆಂಡು ಆಟದಲ್ಲಿ ಸಿಗುವಷ್ಟು ವ್ಯಾಯಾಮ ಮತ್ತು ಸಂತೋಷ ಬೇರೆ ಆಟಗಳಲ್ಲಿ ಸಿಗಲಾರದು ಎನ್ನಬಹುದು. ಓಡಿ, ಹಾರಿ, ಒದೆದು, ಒರೆಗೆ ಸರಿದು, ಬಿದ್ದು, ಎದ್ದು ಚೆಂಡನ್ನು ಗೋಲಿನ ಕಡೆಗೆ ಕೊಂಡುಹೋಗುವ ಪ್ರಯತ್ನದಲ್ಲಿ ಪಂಗಡದವರೆಲ್ಲರೂ ಪರಸ್ಪರ ಹೊಂದಿಕೆಯಿಂದ ಮುಂದುವರಿಯುವಾಗ ಎಲ್ಲರಿಗೂ ವ್ಯಾಯಾಮ ದೊರಕುತ್ತದೆ. ಪ್ರತಿಯೊಬ್ಬರಲ್ಲಿ ಎಲ್ಲಿಲ್ಲದ ಉತ್ಸಾಹ ಕಂಡುಬರುತ್ತದೆ.



ಕಾಲ್ಚೆಂಡಿನ ಆಟ ನಮಗೆ ಸಂತೋಷವನ್ನು ತರುತ್ತದೆ. ಉತ್ತಮ ಆಟಗಾರರ ಕೂಡುವಿಕೆಯಿಂದ ಸಮಬಲ ಗುಂಪುಗಳೊಳಗೆ ಪಂದ್ಯಾಟ ನಡೆಯುವಾಗ ಅದನ್ನು ನೋಡಲು ಜನರು ದೇಶ-ವಿದೇಶಗಳಿಂದ ಬರುತ್ತಾರೆ. ಸಾವಿರಾರು ಪ್ರೇಕ್ಷಕರು ಬೊಬ್ಬೆ ಕೂಗಾಟಗಳಿಂದ ಆಟವನ್ನು ನೋಡುತ್ತಾರೆ. 'ಚೆಂಡನ್ನು ಹೊಡೆ, ಗೋಲನ್ನು ಹೊಡೆ, ಅಪ್ ಅಪ್' ಎಂದು ಮೊದಲಾದ ಉದ್ಗಾರಗಳಿಂದ ಆಟಗಾರರನ್ನು ಪ್ರೋತ್ಸಾಹಿಸುತ್ತಾರೆ. ಇಂಥ ಸಂದರ್ಭಗಳಲ್ಲಿ ಪ್ರೇಕ್ಷಕರು ಸಂತೋಷದಿಂದ ಹಾರುವುದನ್ನೂ ಕುಣಿಯುವುದನ್ನೂ ನಾವು ಕಾಣಬಹುದು.

ಸ್ವಾತಂತ್ರ್ಯವು ನಮಗೆ ಲಭಿಸಿದ ಮೇಲೆ ನಮ್ಮ ದೇಶದಲ್ಲಿ ಆಟಗಳಿಗೆ ಹೆಚ್ಚು ಪ್ರೋತ್ಸಾಹ ಸಿಕ್ಕತೊಡಗಿದೆ. ಭಾರತದ ತರುಣರೂ ಯುವಕರೂ ಉತ್ತಮ ಆಟಗಾರರಾಗಬೇಕಾದುದು ರಾಷ್ಟ್ರದ ಅವಶ್ಯಕತೆಗಳಲ್ಲಿ ಒಂದಾಗಿದೆ. ನಮ್ಮ ಸರ್ಕಾರವು ಆಟಗಳಿಗೆ ಪ್ರೋತ್ಸಾಹ ಕೊಡುವುದಲ್ಲದೆ ಉತ್ತಮ ಆಟಗಾರರಿಗೆ ಧನಸಹಾಯವನ್ನೂ ಮಾಡುತ್ತದೆ. ಇತರ ಅಂತರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಆಟಗಳ ಸ್ಪರ್ಧೆಯಲ್ಲಿ ಭಾಗವಹಿಸಲು ಆಟಗಾರರನ್ನು ಆಯ್ಕೆ ಮಾಡಿ ಅವರಿಗೆ ಸೂಕ್ತ ತರಬೇತಿಯನ್ನು ನೀಡಿ ಕಳುಹಿಸಿ ಕೊಡುತ್ತದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಕಾಲ್ಚೆಂಡಿನ ಆಟದ ಕಳ ಹೇಗಿರಬೇಕು?
2. ಕಾಲ್ಚೆಂಡಿನ ಆಟದಲ್ಲಿ ಗೋಲ್ ಕೀಪರ್ ನ ಕೆಲಸವೇನು?
3. ಕಾಲ್ಚೆಂಡು ಆಟದ ಪ್ರಯೋಜನವೇನು?
4. 'ರೆಫರಿ' ಅಂದರೆ ಯಾರು? ರೆಫರಿಯ ಕಾರ್ಯವೇನು?

### ವಿವರಣೆ ಬರೆಯಿರಿ

ಕಾಲ್ಚೆಂಡು ಆಟದ ಸಂಪೂರ್ಣ ವಿವರಗಳನ್ನು ಲೇಖನದಿಂದ ಓದಿ ತಿಳಿದುಕೊಂಡಿರುವಿರಿ. ಅದೇ ರೀತಿ ನೀವು ನೋಡುತ್ತಿರುವ ಅಥವಾ ಆಡುತ್ತಿರುವ ಯಾವುದಾದರೊಂದು ಕ್ರೀಡೆಯ ಕುರಿತು ವಿವರಣೆ ಬರೆಯಿರಿ.

## ಸಂದರ್ಶನ ಪ್ರಶ್ನಾವಳಿ

ನಿಮ್ಮ ಊರಿನಲ್ಲಿ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಕ್ರೀಡಾಪಟುಗಳಿದ್ದಾರಲ್ಲವೇ? ಅವರ ಪರಿಚಯ ನಿಮಗಿದೆಯೇ? ಅವರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ತಿಳಿಯಲು ಒಂದು ಸಂದರ್ಶನ ನಡೆಸಿದರೆ ಹೇಗೆ? ಅವರನ್ನು ಸಂದರ್ಶನ ಮಾಡಲು ಸೂಕ್ತವಾದ ಸಂದರ್ಶನ ಪ್ರಶ್ನಾವಳಿಗಳನ್ನು ತಯಾರಿಸಿರಿ.

## ಆಮಂತ್ರಣ ಪತ್ರಿಕೆ

ನಿಮ್ಮ ಶಾಲೆಯಲ್ಲಿ ನಡೆಯಲಿರುವ ವಾರ್ಷಿಕ ಕ್ರೀಡಾಕೂಟದ ಆಮಂತ್ರಣ ಪತ್ರಿಕೆಯನ್ನು ತಯಾರಿಸಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ಈ ಕೆಳಗೆ ನೀಡಿರುವ ಮಾಹಿತಿಗಳ ಆಧಾರದಲ್ಲಿ ಕಾಸರಗೋಡಿನ ಪ್ರಖ್ಯಾತ ಕಬಡ್ಡಿ ಆಟಗಾರ ಜಗದೀಶ್ ಕುಂಬಳೆ ಯವರ ವ್ಯಕ್ತಿ ಪರಿಚಯ ಬರೆಯಿರಿ.



| | |
|---|---|
| ಹೆಸರು | : ಜಗದೀಶ್ ಕುಂಬಳೆ |
| ಜನನ ದಿನಾಂಕ | : 21 ಮಾರ್ಚ್ 1973 |
| ಸ್ಥಳ | : ಕಾಸರಗೋಡು ಜಿಲ್ಲೆಯ ಕುಂಬಳೆ ಗ್ರಾಮ ಪಂಚಾಯತಿನ ಶೇಡಿಕಾವು |
| ತಂದೆ - ತಾಯಿ | : ಕೃಷ್ಣಪ್ಪ ಮತ್ತು ಯಮುನಾ |
| ಶಿಕ್ಷಣ | : ಪ್ರಾಥಮಿಕ, ಪ್ರೌಢ ಶಿಕ್ಷಣ ಕುಂಬಳೆ ಸರಕಾರಿ ಪ್ರೌಢಶಾಲೆ, ಪದವಿ ಪೂರ್ವ ಶಿಕ್ಷಣ ಕಾಸರಗೋಡು ಸರಕಾರಿ ಕಾಲೇಜು |
| ಕಬಡ್ಡಿ ಆಸಕ್ತಿ | : ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ, ವಿಶ್ವವಿದ್ಯಾನಿಲಯ ಕ್ರೀಡಾಕೂಟಗಳಲ್ಲಿ ಭಾಗಿ. ಕಬಡ್ಡಿ ಅಸೋಸಿಯೇಷನ್ ಟೂರ್ನಮೆಂಟುಗಳಲ್ಲಿ ಜಿಲ್ಲಾ ತಂಡದ ಪ್ರತಿನಿಧಿ. ಭಾರತೀಯ ಸೇನೆಗೆ ನೇಮಕ ಹಾಗೂ ಸೇನಾ ಕಬಡ್ಡಿ ತಂಡಕ್ಕೆ ಆಯ್ಕೆ. ರಾಷ್ಟ್ರೀಯ ಮಟ್ಟದಲ್ಲಿ ಕಬಡ್ಡಿ ತಂಡಕ್ಕೆ ಆಯ್ಕೆ. |
| ಪ್ರಶಸ್ತಿ | : ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ಕಬಡ್ಡಿ ತಂಡದ ಸವ್ಯಸಾಚಿ ಆಟಗಾರ. |

ಸಾಧನೆಗಳು :

- 2016ರ ಪ್ರೊ ಕಬಡ್ಡಿ ಲೀಗ್‌ನಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಆಟಗಾರ.
- ಬೆಂಗಾಲ್ ವಾರಿಯರ್ಸ್ ಮತ್ತು ತೆಲುಗು ಟೈಟಾನ್ಸ್ ತಂಡದ ತರಬೇತುದಾರ.
- ನಿವೃತ್ತಿ ನಂತರ ಜೆ.ಕೆ. ಕಬಡ್ಡಿ ಅಕಾಡೆಮಿ ಎಂಬ ಸಂಸ್ಥೆಯ ಮೂಲಕ ಹುಟ್ಟೂರಿನ ಪ್ರತಿಭೆಗಳಿಗೆ ಪ್ರೋತ್ಸಾಹ
- ಪದವಿ ಪೂರ್ವ ಹಂತದಲ್ಲಿ ಬಡತನದಿಂದಾಗಿ ಕ್ರೀಡಾ ಚಟುವಟಿಕೆಗಳಿಂದ ವಿಮುಖವಾಗುವ ಉತ್ತಮ ಕಬಡ್ಡಿ ಪ್ರತಿಭೆಗಳನ್ನು ವಿವಿಧ ಕಾಲೇಜುಗಳ ಸಹಕಾರದೊಂದಿಗೆ, ಅವರಿಗೆ ಉಚಿತ ತರಬೇತಿಯೊಂದಿಗೆ ವಿದ್ಯಾಭ್ಯಾಸ ಮುಂದುವರೆಸಲು ಸಂಪೂರ್ಣ ಸಹಾಯ.

## ಪ್ರಬಂಧ ಬರೆಯಿರಿ.

'ಕ್ರೀಡೆಗಳಿಂದ ದೊರೆಯುವ ಪ್ರಯೋಜನಗಳು' ಎಂಬ ವಿಷಯದ ಕುರಿತು ಪ್ರಬಂಧ ಬರೆಯಿರಿ.

## ಸ್ವಂತ ವಾಕ್ಯ ರಚಿಸಿರಿ

ಈ ವಾಕ್ಯವನ್ನು ಗಮನಿಸಿರಿ.

**ಉತ್ತಮ ಆರೋಗ್ಯವನ್ನು ಹೊಂದಲು ದಿನನಿತ್ಯ ವ್ಯಾಯಾಮಗಳನ್ನು ಮಾಡಬೇಕು.**

'ವ್ಯಾಯಾಮ' ಎಂಬ ಪದವನ್ನು ವಾಕ್ಯದಲ್ಲಿ ಬಳಸಿರುವುದನ್ನು ಗಮನಿಸಿದಿರಲ್ಲವೇ?

ಇದೇ ರೀತಿಯಲ್ಲಿ ಈ ಕೆಳಗಿನ ಪದಗಳನ್ನು ಬಳಸಿಕೊಂಡು ಅರ್ಥಪೂರ್ಣ ವಾಕ್ಯಗಳನ್ನು ರಚಿಸಿರಿ.

- ಜನಪ್ರಿಯ
- ಕ್ರಮಬದ್ಧವಾದ

- ಸಮದೂರ
- ತಲೆಬಾಗು
- ಧನಸಹಾಯ

### ಅನ್ಯ ದೇಶೀಯ ಪದಗಳು

ಈ ಕೆಳಗಿನ ಪದಗಳನ್ನು ಗಮನಿಸಿರಿ.

**ಗೋಲ್ ಕೀಪರ್, ಪೆನಾಲ್ಟಿ**

**ಅನ್ಯ ಭಾಷೆಯ ಕೆಲವು ಪದಗಳನ್ನು ಕನ್ನಡ ಭಾಷೆಯಲ್ಲಿ ಬಳಸುತ್ತೇವೆ. ಇಂತಹ ಪದಗಳನ್ನು ಅನ್ಯದೇಶೀಯ ಪದಗಳು ಎನ್ನುತ್ತೇವೆ.**

ಈ ಪಾಠ ಭಾಗದಲ್ಲಿ ಬಂದಿರುವ ಅನ್ಯ ದೇಶೀಯ ಪದಗಳನ್ನು ಪಟ್ಟಿ ಮಾಡಿರಿ.

### ಸಂಚಿಕೆ ತಯಾರಿಸಿರಿ

ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ಪ್ರಸಿದ್ಧರಾದ ಭಾರತೀಯ ಕ್ರೀಡಾಪಟುಗಳ ಸಂಪೂರ್ಣ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಿರಿ.

*****

# ದುಷ್ಟ ಚಟವ ನೀ ಕಲಿಬ್ಯಾಡ

- ಜನಪದ ಗೀತೆ



ದುಷ್ಟ ಚಟವ ನೀ ಕಲಿಬ್ಯಾಡ
ದುಷ್ಟ ಚಟವ ನೀ ಕಲಿಬ್ಯಾಡ
ಕೆಟ್ಟದ್ದನ್ನು ಬಯಸಲು ಬೇಡ
ಮತ್ತೊಬ್ಬರ ಮನೆ ಮುರಿಬ್ಯಾಡ
ದುಷ್ಟ ಚಟವ ||

ದುಷ್ಟರ ಸಂಗ ಮಾಡಿ ಇಷ್ಟ ಬಂದಂಗ ಆಡಿ
ಕೋತಿಯಂಗ ಕುಣಿದ್ಯಲ್ಲೋ
ಕೆಟ್ಟಾಗ ಯಾರೂ ಇಲ್ಲ ನಿಂತು ನಗುವರೆಲ್ಲ
ಎನ್ನುವ ಮಾತನ್ನು ತಿಳಿದಿಲ್ಲ
ದುಷ್ಟ ಚಟವ ||



ನಂಬಿ ನಡೆಯುವಲ್ಲಿ ಕೂಡಿ ನೀ ಕುಳಿತಲ್ಲಿ
ಕೆಟ್ಟದ್ದು ಮಾಡಲು ಬೇಡ
ಸರಿಯಲ್ಲ ಅಂತ ಚಾಳಿ ಸುಖವಿಲ್ಲ ನಿನಗಲ್ಲಿ
ಎನ್ನುವ ಮಾತನ್ನು ತಿಳಿ ಮೊದಲ
ದುಷ್ಟ ಚಟವ ||

ದುಷ್ಟರ ದೂರ ಮಾಡು ಸಜ್ಜನರಲ್ಲಿ ಕೂಡು
ದೇಶದ ಚಿಂತೆಯ ಮಾಡು
ದಾನ ಧರ್ಮವ ನೀಡು ಸುಖದಿಂದ ಬಾಳ್ವೆ ಮಾಡು
ಸತ್ಯದ ಮಾರ್ಗದಿ ನೀ ಕೂಡು
ದುಷ್ಟ ಚಟವ ||



## ಜನಪದ ಗೀತೆ

ಜನಪದ ಗೀತೆ ಎಂದರೆ ಹಳ್ಳಿಯ ಜನರ ಹಾಡು. ಹಳ್ಳಿಯ ಜನರು ದಿನ ನಿತ್ಯ ಕೆಲಸಗಳನ್ನು ಮಾಡುವಾಗ ಹಾಗೂ ಬಿಡುವಿನ ಸಂದರ್ಭದಲ್ಲಿ ತಮ್ಮ ಅನುಭವ, ಅನಿಸಿಕೆಗಳನ್ನು ಪದಗಳಲ್ಲಿ ಹಾಡುಗಳಾಗಿ ಕಟ್ಟಿ ಹಾಡುತ್ತಿದ್ದರು. ಹೀಗೆ ಜನಪದರ ಬಾಯಿಂದ ಬಾಯಿಗೆ ಬಂದ ಇಂಥ ಹಾಡುಗಳು ಜನಪದ ಗೀತೆಗಳಾಗಿವೆ.

### ಚಟುವಟಿಕೆಗಳು

### ಹಾಡಿರಿ

ರಾಗ , ತಾಳ, ಲಯದೊಂದಿಗೆ ಈ ಹಾಡನ್ನು ಹಾಡಿರಿ

### ಉತ್ತರಿಸಿರಿ

1. ಯಾವ ಮಾತುಗಳನ್ನು ಮೊದಲು ತಿಳಿದುಕೊಳ್ಳಬೇಕೆಂದು ಕವಿ ಹೇಳುತ್ತಾರೆ?
2. ಸುಖದಿಂದ ಬಾಳ್ವೆ ಮಾಡಲು ಯಾವೆಲ್ಲ ಕಾರ್ಯಗಳನ್ನು ಮಾಡಬೇಕು ಎಂದು ಕವಿ ಆಶಿಸುತ್ತಾರೆ?
3. ದುಷ್ಟ ಚಟಗಳು ಯಾವುವು?
4. ಯಾವ ಮಾತನ್ನು ನೀನು ತಿಳಿದಿಲ್ಲ ಎಂದು ಕವಿ ಹೇಳುತ್ತಾರೆ?

### ಆಶಯ ಬರೆಯಿರಿ

'ದುಷ್ಟ ಚಟವ ನೀ ಕಲಿಬ್ಯಾಡ' ಪದ್ಯದ ಆಶಯವನ್ನು ಬರೆಯಿರಿ.

### ಕರಪತ್ರ ತಯಾರಿಸಿರಿ

'ದುಷ್ಟ ಚಟವ ನೀ ಕಲಿಬ್ಯಾಡ' ಪದ್ಯವನ್ನು ಓದಿ ಹಾಡಿ ಆಶಯವನ್ನು ತಿಳಿದುಕೊಂಡಿರಲ್ಲವೇ? ಇದರ ಆಧಾರದಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು 'ಮಾದಕ ವಸ್ತು ಸೇವನೆ ಸಾಮಾಜಿಕ ಸ್ವಾಸ್ಥ್ಯಕ್ಕೆ ಮಾರಕ' ಎಂಬ ವಿಷಯದ ಬಗ್ಗೆ ಕರಪತ್ರವೊಂದನ್ನು ತಯಾರಿಸಿರಿ.

### ಮನವಿ ಪತ್ರ ಬರೆಯಿರಿ

ಶಾಲಾ ವಠಾರದಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ಜಾಲ ಹರಡಿಕೊಂಡಿದೆ ಎಂದು ಊಹಿಸಿರಿ. ಇದನ್ನು ನಿಗ್ರಹಿಸಬೇಕೆಂದು ಅಬಕಾರಿ ಇಲಾಖೆಯ ಅಧಿಕಾರಿಯವರಿಗೆ ಮನವಿ ಪತ್ರ ಬರೆಯಿರಿ

### ಲೇಖನ ರಚಿಸಿರಿ

ಕೆಟ್ಟದ್ದನ್ನು ಕೇಳಬಾರದು, ನೋಡಬಾರದು, ಆಡಬಾರದು ಎನ್ನುವುದನ್ನು ಗಾಂಧೀಜಿಯವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕಿದವರು. ನಾವೂ ನಮ್ಮ ಜೀವನದಲ್ಲಿ ಇಂತಹ ಆದರ್ಶಗಳ್ನು ಇಟ್ಟುಕೊಂಡು ಬದುಕಬೇಕು. ಇದರ ಆಧಾರದಲ್ಲಿ "ಆದರ್ಶ ವಿದ್ಯಾರ್ಥಿಗಳು" ಎಂಬ ವಿಷಯದ ಕುರಿತು ಲೇಖನವನ್ನು ತಯಾರಿಸಿರಿ.

### ಹೋಲಿಕಾ ಟಿಪ್ಪಣಿ ಬರೆಯಿರಿ.

ಜನಪದ ಹಾಡು ಮತ್ತು ಸರ್ವಜ್ಞನ ವಚನಗಳನ್ನು ಹೋಲಿಸಿ ಟಿಪ್ಪಣಿ ಬರೆಯಿರಿ.

## ಸರ್ವಜ್ಞನ ವಚನಗಳು

ಹೆಂಡವನು ಕುಡಿ ಕುಡಿದು ಕಂಡವರ ತಾ ತಿರಿದು
ಬಂಡು ನುಡಿಗಳಿಗೆ ನಾಚದ ನೀಚನ
ಕಂಡಿಹರೆ ತೊಲಗು ಸರ್ವಜ್ಞ

ಹೊಗೆಯ ತಿಂಬುವದೊಂದು ಸುಗುಣವೆಂದೆನಬೇಡ
ಹೊಗೆಯ ಕುಡಿದೆಲೆಯನಗಿವ ಬಾಯ್ಸಿಂದಿಯ
ಲಗಳೆಯಂತಿಹುದು ಸರ್ವಜ್ಞ

ಕಂಡವರ ದಂಡಿಸುತ ಕೊಂಡವರ ಒಡವೆಗಳ
ಉಂಡುಂಡು ಮಲಗಿ ಮಡಿದ ಮೇಲವಗೆ ಯಮ
ದಂಡ ತಪ್ಪುವದೆ ? ಸರ್ವಜ್ಞ

ಸತ್ಯವ ನುಡಿವಾತ, ಸತ್ತವನೆನಬೇಡ
ಹೆತ್ತ ತಾಯ್ ಮಗನ ಕರೆದಂತೆ ಶಿವ
ತನ್ನತ್ತಲೇ ಕರೆವ ಸರ್ವಜ್ಞ

## ಪ್ರಾಸಪದ

ಈ ಹಾಡಿನಲ್ಲಿ ಬಂದಿರುವ ಪ್ರಾಸ ಪದಗಳನ್ನು ಬರೆಯಿರಿ

ಉದಾ: ಬಯಸಲು ಬ್ಯಾಡ - ಮುರಿಬ್ಯಾಡ

**ಪ್ರಾಸ ಎಂದರೆ ಪದ್ಯದ ಸಾಲುಗಳ ಒಂದನೆಯ ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಬರುವ ಒಂದೇ ರೀತಿಯ ವ್ಯಂಜನ ಅಥವಾ ವ್ಯಂಜನಾಕ್ಷರಗಳಾಗಿವೆ. ಕೆಲವೊಮ್ಮೆ ಇದು ಪದ್ಯದ ಸಾಲುಗಳ ಮಧ್ಯದಲ್ಲೂ ಅಥವಾ ಕೊನೆಯಲ್ಲೂ ಬರುತ್ತದೆ.**

## ವಿಂಗಡಿಸಿ ಬರೆಯಿರಿ

ಮಾದರಿಯಂತೆ ವಿಂಗಡಿಸಿ ಬರೆಯಿರಿ

- ಮತ್ತೊಬ್ಬರ - ಮತ್ತೆ + ಒಬ್ಬರ
- ನಗುವರೆಲ್ಲ -
- ಮಾತನ್ನು -
- ಸುಖವಿಲ್ಲ -
- ಸರಿಯಲ್ಲ -

*****

# ಗುಜ್ಜೆ ಪ್ರಸಂಗ

**- ಕೇಶವ ಶರ್ಮ ಕೆ.**

‘ಪಾರ್ವತಿ ಈ ರಾತ್ರೆಗೆ ಹಲಸಿನ ಗುಜ್ಜೆಯ ಪಲ್ಯ ಮಾಡು. ನಾನು ಹಲಸಿನ ಗುಜ್ಜೆ ಬಿಡಿಸಿಕೊಡುತ್ತೇನೆ, ರಾತ್ರೆಗೆ ಊಟವಿಲ್ಲದಿದ್ದರೂ ಆಗುತ್ತದೆ’ ಎಂದು ಗಣಪತಿ ಬಸಳೆಯ ಚಪ್ಪರಕ್ಕೆ ಹಾಕಿದ ಗಳುವನ್ನು ಸರಿಮಾಡುತ್ತಾ ಹೇಳಿದ. ಅದಕ್ಕೆ ಪಾರ್ವತಿ ‘ಹಾ’ ಅಂತನ್ನಲೂ ‘ಇಲ್ಲ’ ಎನ್ನಲೂ ಇಲ್ಲ. ಗಣಪತಿ ಹೇಳಿದ ಮಾತನ್ನು ಕೇಳಿಸಿಕೊಂಡ ನಾರಾಯಣಿ ‘ಅಪ್ಪಾ ಗುಜ್ಜೆಯ ಪಲ್ಯದಲ್ಲಿ ಹೊಟ್ಟೆ ತುಂಬಿಸಿದರೆ ನಿಮಗೆ ಸಾಕಾಗುತ್ತದೆ. ನನಗಂತೂ ರಾತ್ರಿ ಊಟ ಮಾಡ್ಲೆಬೇಕು’ ಎಂದಳು. ಅದಕ್ಕೆ ಪಾರ್ವತಿ ‘ಈ ತಾಟಗಿತ್ತಿಗೆ, ನಾವು ಕಷ್ಟಪಡುವುದು ಗೊತ್ತೇ ಆಗುವುದಿಲ್ಲ’ ಎಂದಳು. ‘ಇರಲಿ ಅವಳಿಗೆ ಸ್ವಲ್ಪ ಗಂಜಿಯಿಟ್ಟುಬಿಡು, ದಿನಾ ಮೊಯ್ದೀನ್ ಸಾಹೇಬರ ಅಂಗಡಿಯಿಂದ ಸಾಲ ತರುವುದೆಂದರೆ ಆಗದ ಕೆಲಸ. ಸಾಲ ತೀರುವುದಾದರೂ ಹೇಗೆ? ಉತ್ಪತ್ತಿಯಿದ್ದರೆ ಅದು ಬೇರೆ ಪ್ರಶ್ನೆ, ನಾಳೆ ಗುತ್ತಿಗಾರಿಗೆ ಹೋಗುತ್ತೇನೆ. ಈಗ ಇದ್ದುದರಲ್ಲಿ ಸುಧಾರಿಸೋಣ’ ಎಂದು ಗಣಪತಿ ಹೇಳುತ್ತಿರುವಾಗಲೇ ಮಧ್ಯೆ ಬಾಯಿ ಹಾಕಿದ ಪಾರ್ವತಿ ‘ಅದಕ್ಕೆ ನಾನು ಹೇಳಿದ್ದು, ದೂಮಣ್ಣ ಮೇಷ್ಟ್ರ ಗದ್ದೆಯನ್ನು ಗೇಣಿಗೆ ತೆಗೆದುಕೊಂಡಿದ್ದರೆ ಈ ಕಷ್ಟ ಬರುತ್ತಿತ್ತಾ? ನಾನು ಹೇಳಿದರೆ ಎಲ್ಲಿ ಕೇಳುತ್ತಿರಾ? ನಿಮಗೆ ನಿಮ್ಮದೆ ಹಠ’ ಎಂದಳು. ಗಣಪತಿಯ ಹಣೆಯ ನೆರಿಗೆ ಒಮ್ಮೆ ಮೇಲೇರಿ ಮತ್ತೆ ಕೆಳಗೆ ಇಳಿಯಿತು. ಅವನು ಮಾತಾಡಲಿಲ್ಲ. ಆ ಹೊತ್ತಿನಲ್ಲಿ ಅವನಿಗೆ ಮಾತಾಡಬೇಕೆಂದೂ ಅನಿಸಲಿಲ್ಲ, ಪುನಃ ಮಾತಾಡಿ ಮನಸ್ಸು ಕಹಿ ಮಾಡುವುದಕ್ಕಿಂತ ಮಾತಾಡದೇ ಉಳಿಯುವುದೇ ಹೆಚ್ಚು ಕ್ಷೇಮವೆಂದು ಅನಿಸಿತೋ ಏನೊ? ಮೌನದ ಚಿಪ್ಪಿನೊಳಗೆ ಗಣಪತಿ ಹುಗಿದುಕೊಂಡು, ಕೈಕಾಲು ತೊಳೆದುಕೊಂಡು, ದೊಡ್ಡ ಕತ್ತಿಯಲ್ಲಿ ಹಲಸಿನ ಗುಜ್ಜೆಯನ್ನು ಭಾಗ ಮಾಡಿದ.

ಅನಂತರ ಒಂದು ಮೆಟ್ಟು ಕತ್ತಿ ಇಟ್ಟುಕೊಂಡು ಅದನ್ನು ಹೆಚ್ಚಲು ಶುರುಮಾಡಿದ. ಅವನು ಹಲಸಿನ ಗುಜ್ಜೆಯನ್ನು ಬಿಡಿಸುತ್ತಿರುವಾಗಲೇ ಮಾಧವ ಓಡಿಕೊಂಡು ಬಂದು ಹಸಿ ಗೇರುಬೀಜವನ್ನು ತಂದೆಗೆ ತೋರಿಸಿದ. ‘ಇದು ಎಲ್ಲಿಂದ ತಂದೆಯೋ?’ ಎಂದು ಕೇಳಿದ್ದಕ್ಕೆ ಮಾಧವ: ‘ದೂಮಣ್ಣ ಮೇಷ್ಟ್ರ ಗುಡ್ಡೆಯಿಂದ ತಂದೆ’ ಎಂದ. ಹಸಿಗೇರು ಬೀಜ ತಂದ ಉತ್ಸಾಹದಲ್ಲಿ ಬೇರೆ ಮಾತಾಡಲು ಮಾಧವನಿಗೆ ಆಸಕ್ತಿಯಿರಲಿಲ್ಲ. ‘ಕೇಳಿ ತಂದೆಯೋ ಅಥವಾ ಹಾಗೆಯೆ ಕದ್ದುಕೊಂಡು ಬಂದೆಯೋ’ ಎಂದು ಗಣಪತಿ ಕೇಳಿದ್ದಕ್ಕೆ ‘ಕೇಳಿ ತರುವುದಕ್ಕೆ ಅಲ್ಲಿ ಯಾರೂ ಇರಲಿಲ್ಲ. ಒಟ್ಟು ಹತ್ತೇ ಗೇರುಬೀಜ ಇರುವುದು. ಹೆಚ್ಚಿಲ್ಲ’ ಎಂದು ಎರಡು ಜೇಬುಗಳಲ್ಲಿ ತುಂಬಿಸಿಟ್ಟುಕೊಂಡಿದ್ದ ಗೇರುಬೀಜವನ್ನು ತಂದೆಯ ಎದುರಲ್ಲಿ ಹಾಕಿದ. ‘ಹಾಗೆಲ್ಲಾ ಕೇಳದೆ ತರಬಾರದು ಮಗಾ, ಕದ್ದು ತಂದದ್ದೆಂದು



ಹೇಳುತ್ತಾರೆ. ಕದಿಯುವುದು ಒಳ್ಳೆ ಬುದ್ಧಿಯಲ್ಲ, ನಮಗೇನಾದರೂ ಬೇಕಾದರೆ ಕೇಳಿ ತಿನ್ನಬೇಕು' ಎಂದು ಗಣಪತಿ ಹೇಳುತ್ತಿರುವಾಗಲೇ ಪಾರ್ವತಿ 'ಆಯಿತು ನೀವು ಹೀಗೆ ನಿಧಾನಕ್ಕೆ ಹೇಳಿದರೆ ಅವನಿಗೆಲ್ಲಿ ಬುದ್ಧಿ ಬರುತ್ತದೆ, ನಾಕು ಕುಂಡೆಗೆ ಬಿಟ್ಟರೆ ಬುದ್ಧಿ ಚೆನ್ನಾಗಿ ಬರುತ್ತದೆ, ಅದು ಬಿಟ್ಟು ..... ನೀವು ಹೀಗೆ ಕೊಂಡಾಟ ಮಾಡಿ ಹೇಳಿದರೆ ಮುಗಿಯಿತು. ಮೊದಲೇ ಅವನು ನಾನು ಹೇಳಿದ ಯಾವ ಮಾತನ್ನು ಕೇಳುವುದಿಲ್ಲ' ಎಂದು ತನ್ನ ಮಾಮೂಲಿ ಸ್ಟೈಲಿನಲ್ಲಿಯೇ ಕುಟುಕಿದಳು. ಹಾಗೆ ಕುಟುಕಿದ್ದರಿಂದಲೋ ಏನೋ ಗಣಪತಿಗೆ ಎಲ್ಲಿಲ್ಲದ ಸಿಟ್ಟು ಬಂತು. ಮೆಟ್ಟು ಕತ್ತಿಯಿಂದ ಎದ್ದು ಬಂದು ಮಾಧವನಿಗೆ ನಾಲ್ಕು ಚಟಿ ಚಟಿಯೆಂದು ಪೆಟ್ಟು ಕೊಟ್ಟ. ಎರಡೇಟು ಬಿದ್ದುದೇ ತಡ ಮಾಧವ ಜೋರಾಗಿ ಅಳುತ್ತಾ ನೆಲದ ಮೇಲೆ ಹೊರಳಾಡಿದ. ಅವನು ನೆಲದ ಮೇಲೆ ಹೊರಳಾಡಿದ್ದೇ ತಡ ಮತ್ತೆ ಪಾರ್ವತಿ, 'ನೋಡಿ ಅವನ ನಾಟಕ! ಇನ್ನೂ ಎರಡು ಬಿಗಿಯಿರಿ, ಒಳ್ಳೆ ಕತ್ತೆಯ ಹಾಗೆ ಅರಚುತ್ತಾನೆ' ನಿಮಗಂತೂ ಯಾವುದೂ ಬೇಡ' ಎಂದು ಸಿಟ್ಟಿನಿಂದ ಕೈಯಲ್ಲಿದ್ದ ಪಾತ್ರೆಯನ್ನು ಬಸಳೆ ಚಪ್ಪರದಡಿಯಲ್ಲಿದ್ದ ಕಲ್ಲಿಗೆ ಕುಟ್ಟಿದಳು. ಆ ಅಲ್ಯುಮಿನಿಯಂ ಪಾತ್ರೆಯು ನಜ್ಜುಗುಜ್ಜಾಯಿತು. ಗಣಪತಿ ಮೆಟ್ಟು ಕತ್ತಿಯ ಮೇಲೆ ಸುಮ್ಮನೇ ಕುಳಿತ. ಮತ್ತೊಂದು ಬಾರಿ ಅವನಿಗೆ 'ಈ ಜೀವನ ಸಾಕಾಯಿತಪ್ಪ' ಎನ್ನಿಸಿತು.

ಕೆಲವು ಕ್ಷಣ ಮೌನದೊಂದಿಗೆ ಉಳಿದ ಗಣಪತಿ ಮತ್ತೆ ಎದ್ದು ಬಂದು ಮಾಧವನನ್ನು ಎದ್ದು ಕೂರಿಸಿದ. ಅವನ ಮೋರೆಯನ್ನು ತನ್ನ ಪಂಚೆಯಲ್ಲಿ ಒರೆಸಿದ. ಗಣಪತಿ 'ಇನ್ನು ಹೊಡೆಯುವುದಿಲ್ಲ ನನ್ನಣ್ಣ, ಬಾ, ಕೈಕಾಲು ತೊಳೆ, ನಾನು ನಿನ್ನ ಒಳ್ಳೆಯದಕ್ಕೆ ಅಲ್ಲವಾ ಹೇಳಿದ್ದು..... ನಮ್ಮ ಕರ್ಮ ಬಾ' ಎಂದು ಅವನನ್ನು ಕರೆದುಕೊಂಡು ಬಸಳೆ ಚಪ್ಪರದಡಿಗೆ ಹೋದ. ಮಾಧವನನ್ನು ಮನೆಯೊಳಗೆ ಕರೆದುಕೊಂಡು ಹೋಗಿ ಅವನ ಕುಂಡೆಯ ಮೇಲೆ ಆದ ಕೆಂಪನೆಯ ಕೈಬೆರಳ ಅಚ್ಚಿಗೆ ತೆಂಗಿನೆಣ್ಣೆ ಹಚ್ಚಿದ. ಇದರಿಂದ ಮಾಧವನಿಗೆ ಸ್ವಲ್ಪ ಸಮಾಧಾನ ಉಂಟಾಯಿತು. ಆದರೂ ಅವನ ಬಿಕ್ಕಳಿಕೆ ನಿಲ್ಲಲಿಲ್ಲ. ಸ್ವಲ್ಪ ನೀರು ಕುಡಿ ಎಂದು ಗಣಪತಿ ನೀರು ಕುಡಿಸಿದ. ಆಮೇಲೆ ಮಾಧವನ ತಲೆಗೆ ಒಂದು ಮುತ್ತು ಕೊಟ್ಟು ಅವನನ್ನು ಕರೆದುಕೊಂಡು ಅಂಗಳಕ್ಕೆ ಬಂದ. 'ಈ ದಿನ ರಾತ್ರಿಗೆ ಹಲಸಿನಕಾಯಿ ಪಲ್ಯ ಮಾಡುತ್ತಾಳೆ ಬರೀ ಪಲ್ಯ ತಿಂದು ಮಲಗಬೇಕು, ನಾಳೆ ಗುತ್ತಿಗಾರಿಗೆ ಹೋಗಿ ಸಾಮಾನು ತರುತ್ತೇನೆ' ಎನ್ನುತ್ತಾ ಮಾಧವನನ್ನು ತಾನು ಕೂತ ಮೆಟ್ಟು ಕತ್ತಿಯ ಬಳಿಯಲ್ಲಿಯೇ ಕೂರಿಸಿಕೊಂಡ. ಮಾಧವ 'ಅಪ್ಪಾ ಇನ್ನು ಮುಂದೆ ಹೀಗೆ ಮಾಡುವುದಿಲ್ಲ' ಎಂದು ಹೇಳಿದ. ಗಣಪತಿ ಹಲಸಿನಕಾಯಿಯ ತೊಳೆ ಬಿಡಿಸಲು ಶುರುಮಾಡಿದ. ಕೈಗೆ ಹಲಸಿನಕಾಯಿಯ ಮ್ಯಾಣವು ಅಂಟಿಕೊಂಡಿತು. ಕತ್ತಲೆ ಆವರಿಸುತ್ತಾ ಬಂದಂತೆ ಪಾರ್ವತಿ ಚಿಮಿಣಿ ದೀಪಕ್ಕೆ ಎಣ್ಣೆ ಹೊಯ್ಯಲೆಂದು ದೀಪಗಳನ್ನು, ಚಿಮಿಣಿ ಎಣ್ಣೆಯ ಕ್ಯಾನನ್ನೂ ಹಿಡಿದುಕೊಂಡು ಅಂಗಳಕ್ಕೆ ಬಂದಳು. ಅವಳು ಅಂಗಳಕ್ಕೆ ಬಂದಾಗ ಗಣಪತಿಗೆ ಹಲಸಿನಕಾಯಿ ಬಿಡಿಸಿಯಾಗುತ್ತಾ ಬಂದಿತ್ತು.

ಪಾರ್ವತಿ ಚಿಮಿಣಿ ಎಣ್ಣೆಯನ್ನು ದೀಪಗಳಿಗೆ ಹಾಕಿ ಅದನ್ನು ಉರಿಸಿದಳು. 'ಪಾರ್ವತಿ, ಹಲಸಿನಕಾಯಿಯನ್ನು ಬಿಡಿಸಿಯಾಗುತ್ತಾ ಬಂತು, ಆದಷ್ಟು ಬೇಗನೆ ಬೇಯಿಸಿಬಿಡು, ಅದಕ್ಕೆ ಬೆಲ್ಲ ಸ್ವಲ್ಪ ಹೆಚ್ಚು ಹಾಕು, ಅವಲಕ್ಕಿ ಇದೆಯೆ? ಇದ್ದರೆ ಅದನ್ನೂ ಸ್ವಲ್ಪ ಬೆರೆಸಿ ಇಟ್ಟುಬಿಡು' ಎನ್ನುತ್ತಾ ಕೈಗೆ ಹಿಡಿದುಕೊಂಡ ಹಲಸಿನಕಾಯಿಯ ಮ್ಯಾಣವನ್ನು ತೆಗೆಯಲು ಅಡಿಕೆಯ ಹಾಳೆಯ ತುಂಡನ್ನು ಕೈಗೆತ್ತಿಕೊಂಡ. 'ಗಣಪತಿಯಣ್ಣ, ನಾಯಿ ಕಚ್ಚುತ್ತದಾ?' ಎನ್ನುತ್ತಾ ಓಡ್ತಮೂಲೆಯ ಶಂಭಟ್ಟ ಬಂದ. ತುಂಡು ಬೈರಾಸನ್ನು ಸೊಂಟಕ್ಕೆ ಸುತ್ತಿಕೊಂಡು ಬಂದ ಶಂಭಟ್ಟನು ಕಲಿಹಿಡಿದ ನಳನಂತೆ ಅರೆ ಸಂಜೆಯಲ್ಲಿ ಗಣಪತಿಯ ಮನೆಯ ಅಂಗಳಕ್ಕೆ ಕಾಲಿಟ್ಟಾಗ 'ಇದೇನಪ್ಪಾ?' ಎಂದು ಗಣಪತಿ ಪ್ರಶ್ನಾರ್ಥಕವಾಗಿ ನೋಡಿದ.

ದಣಪೆಯನ್ನು ದಾಟಿಬಂದ ಶಂಭಟ್ಟ 'ಇದೇನು ಮನೆಯಲ್ಲಿಯೂ ಅಡುಗೆ ಮಾಡುವುದು ನೀನೆಯೊ?' ಎಂದ. ಅವನ ಮಾತಿನಲ್ಲಿದ್ದ ವ್ಯಂಗ್ಯವು ಗಣಪತಿಯನ್ನು ಚುಚ್ಚಿದರೂ ಅದಕ್ಕೆ ಪ್ರತ್ಯುತ್ತರ ಕೊಡಲಿಲ್ಲ. ಶ್ರೀಮಂತರಿಗೆ ಪುನಃ ಉತ್ತರ ಕೊಡಬಾರದು ಎನ್ನುವುದು ಅವನು ಅನುಭವದಿಂದ ಕಲಿತ ಮಾತಾಗಿತ್ತು, ಗಣಪತಿ ಕೃತಕ ನಗೆ ತಂದುಕೊಂಡು 'ಬನ್ನಿ, ಒಳಗೆ ಬನ್ನಿ' ಎನ್ನುತ್ತಲೇ ನಾರಾಯಣಿಗೆ 'ನಾರಾಯಣಿ, ಚಾಪೆ ಹಾಕು' ಎಂದು ಹೇಳಿದ. ನಾರಾಯಣಿ ಒಂದು ಚಾಪೆ ತಂದು ಹಾಸಿದಳು. ಆಗ ಗಣಪತಿ, ಚಿಮಿಣಿ ದೀಪವನ್ನು ತಂದು ಹತ್ತಿರವಿಟ್ಟ.

ಶಂಭಟ್ಟನು ಡರ್ ಎಂದು ತೇಗುತ್ತಾ 'ಹಾಳು ವಾಯುಬಾಧೆ' ಎನ್ನುತ್ತಲೇ ಚಾಪೆ ಮೇಲೆ ಕೂತ. 'ಒಂದು

ಚೂರು ಆಸರಿಗೆಯೇನಾದರೂ ಕುಡಿಯುತ್ತೀರಾ?' ಎಂದುದಕ್ಕೆ 'ಹುಳಿಮಜ್ಜಿಗೆಯಿದ್ದರೆ ಒಂದು ಸ್ವಲ್ಪ ಉಪ್ಪು ಹಾಕಿಕೊಟ್ಟರೆ ಆದೀತು' ಎಂದ ಶಂಭಟ್ಟ. 'ಅಯ್ಯೋ ದೇವರೆ, ನೀವು ಬರುವಾಗಲೇ ಹೀಗಾಗಬೇಕೆ? ಮಜ್ಜಿಗೆ ಒಂದು ತೊಟ್ಟು ಕೂಡಾ ಇಲ್ಲ, ಓಟೆಹುಳಿ ಶರಬತ್ತು ಕೊಡಲಾ?' ಎಂದು ಪಾರ್ವತಿ ಕೇಳಿದಳು. 'ಹಾಗೇ ಆಗಬಹುದು' ಎಂದ ಶಂಭಟ್ಟ. ಗಣಪತಿ ಕೈತೊಳೆದುಕೊಂಡು ಬಂದು 'ಮತ್ತೇನು ಶಂಭಟ್ಟಣ್ಣ' ಎಂದ. ಅದಕ್ಕೆ ಶಂಭಟ್ಟ 'ನಾಡದ್ದು ಶುಕ್ರವಾರ ಮನೆಯಲ್ಲಿ ಒಂದು ಪೂಜೆಯಿದೆ, ನಲವತ್ತು ಜನಕ್ಕೆ ಅಡುಗೆಯಾಗಬೇಕು, ದೇವರಿಗೆ ಪ್ರಸಾದವನ್ನೂ ನೀನೇ ಮಾಡಬೇಕು, ಹಾಗೆ ಹೇಳಿ ಹೋಗೋಣ ಅಂತ ಬಂದೆ. ಬೆಳಿಗ್ಗೆ ಬೇಗನೆ ಬಾ' ಎನ್ನುತ್ತಾ ಪಾರ್ವತಿ ತಂದಿಟ್ಟ ಶರಬತ್ತನ್ನು ಕುಡಿದು ಬಾಯಿ ಒರಸಿಕೊಂಡ. ಗಣಪತಿ 'ಆಯಿತು ಬರ್ತೆನೆ' ಎಂದು ಹೇಳಿದ. 'ಹಾಗಿದ್ದರೆ ಶುಕ್ರವಾರ ಸಂಜೆ ಬೇಗನೆ ಬಾ, ಐದು ಗಂಟೆಗೆ ಅಲ್ಲಿಗೆ ತಲುಪಿಬಿಡಬೇಕು, ಬೇಕಿದ್ದರೆ ರಾತ್ರಿ ಊಟ ಮುಗಿಸಿ ಬಂದು ಬಿಡಬಹುದು' ಎಂದು ಹೇಳುತ್ತಾ ಎದ್ದು ನಿಂತ ಶಂಭಟ್ಟ. ಅವನ ಹೊಟ್ಟೆ ಚಿಮಿಣಿ ದೀಪದ ಬೆಳಕಿನಲ್ಲಿ ಹೊಳೆಯತೊಡಗಿತು. ಜುಟ್ಟನ್ನು ಒಮ್ಮೆ ಬಿಡಿಸಿ ಕಟ್ಟಿಕೊಂಡ, ಅಂಗಳಕ್ಕೆ ಇಳಿದು 'ಕತ್ತಲೆಯಾಯಿತಲ್ಲ ಗಣಪತಿ, ನಾಲ್ಕು ಮಡಲಿದ್ದರೆ ಕಟ್ಟಿಕೊಡು, ಈ ಕತ್ತಲೆಯಲ್ಲಿ ಯಾವುದಾದರೂ ಜಂತು ಹಾದಿಯಲ್ಲಿ ಬಿದ್ದುಕೊಂಡಿರುತ್ತದೆಯೋ ಏನೋ? ಹೇಳಲಿಕ್ಕಾಗುವುದಿಲ್ಲ' ಎಂದ. ಅದಕ್ಕೆ ನಾರಾಯಣಿ 'ಜಂತು ಇದ್ದರೆ ನಿಮ್ಮನ್ನೇನು ಮಾಡುತ್ತದೆ?' ಎಂದು ಮುಖ ಊದಿಸಿಕೊಂಡೇ ಕೇಳಿದಳು. 'ಅಕ್ಕೊ ಹಾಗೆಲ್ಲಾ ದೊಡ್ಡವರಿಗೆ ಅನ್ನಬಾರದು' ಎನ್ನುತ್ತಾ ಗಣಪತಿ ಮಡಲಿನ ಸೂಟೆ ಕಟ್ಟಿ, ಅದನ್ನು ಉರಿಸಿಕೊಟ್ಟ. 'ಅಲ್ಲೋ ಗಣಪತಿ ಇಷ್ಟು



ಪ್ರಾಯವಾದರೂ ಇದೊಂದು ನಿನಗೆ ಗೊತ್ತಿಲ್ಲ ನೋಡು, ಉರಿಸಿದ ದೀಪವಾಗಲೀ, ಉರಿಸಿದ ಸೂಟಿಯನ್ನಾಗಲೀ ಕೈಯಲ್ಲಿ ಕೊಡಬಾರದು ಅಂತ, ಆಮೇಲೆ ನಾವು ಜುಟ್ಟು ಜುಟ್ಟು ಹಿಡಿದುಕೊಂಡು ಜಗಳಾಡಬೇಕಾದೀತು' ಎನ್ನುತ್ತಾ ಸೂಟಿಯನ್ನು ನೆಲಕ್ಕೆ ಹಾಕಲು ಹೇಳಿದ, ಗಣಪತಿ ಸೂಟಿಯನ್ನು ನೆಲಕ್ಕೆ ಹಾಕಿದ. ಅದನ್ನು ಎತ್ತಿಕೊಂಡು 'ಹಾಗಿದ್ದರೆ ಶುಕ್ರವಾರ ತಪ್ಪಿಸಬೇಡ, ನಾನಿನ್ನು ಬರುತ್ತೇನೆ' ಎಂದು ಹೊರಟ.

ಶಂಭಟ್ಟ ಹೋದಮೇಲೆ ಗಣಪತಿ ಸ್ನಾನ ಮಾಡಿ ಬಂದ. ದೇವರಿಗೆ ದೀಪ ಉರಿಸಿ ಅಡ್ಡಬಿದ್ದು ಎದ್ದು ಬರುವಾಗ ಪಾರ್ವತಿಯು ಹಲಸಿನಕಾಯಿಯ ಪಲ್ಯ ತಯಾರಿಸಿಟ್ಟಿದ್ದಳು.

## ಲೇಖಕರ ಪರಿಚಯ



ಕೇಶವ ಶರ್ಮ ಕೆ. ಅವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಅಡ್ಯನಡ್ಕದ ಹತ್ತಿರವಿರುವ ಕೋಡಂದೂರಿನವರು. ತಂದೆ ದಿವಂಗತ ಕೆ.ಕೆ. ನರಸಿಂಹಭಟ್ಟ, ತಾಯಿ ಕೆ.ಎನ್.ಸೀತಾ. ಯಕ್ಷಗಾನದತ್ತ ಒಲವಿದ್ದ ಕೇಶವ ಶರ್ಮ ಇವರು ಹವ್ಯಾಸಿ ಯಕ್ಷಗಾನದ ಕಲಾವಿದರಾಗಿಯೂ ಗುರುತಿಸಿಕೊಂಡಿದ್ದಾರೆ. ಸದ್ಯ ಶಿವಮೊಗ್ಗ ಜಿಲ್ಲೆಯಲ್ಲಿ ನೆಲೆಸಿರುವ ಕೇಶವ ಶರ್ಮರು ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವರು. ಅವರು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಣ್ಣಿನ ಪರಿಕಲ್ಪನೆ ವಿಷಯದಡಿ ಪಿ.ಎಚ್.ಡಿ ಪದವಿಗಳಿಸಿದ್ದಾರೆ. ಶಬರೇಖೆ, ನಿಶಿತನ ಕೆಂಪು ಡೈರಿ, ಚಾರು ಚರಿತ (ಕಾದಂಬರಿ)ಗಳಲ್ಲದೆ ಹಲವಾರು ವಿಮರ್ಶಾ ಕೃತಿಗಳನ್ನು ರಚಿಸಿದ್ದಾರೆ.

### ಚಟುವಟಿಕೆಗಳು



#### ಉತ್ತರಿಸಿರಿ

1. "ದೂಮಣ್ಣ ಮೇಷ್ಟ್ರ ಗದ್ದೆಯನ್ನು ಗೇಣಿಗೆ ತೆಗೆದುಕೊಂಡಿದ್ದರೆ ಈ ಕಷ್ಟ ಬರುತ್ತಿತ್ತಾ?" - ಪಾರ್ವತಿ ಈ ಮಾತನ್ನು ಹೇಳಲು ಕಾರಣವೇನು?
2. ಗಣಪತಿಯು ಮಾಧವನಿಗೆ ಪೆಟ್ಟು ಕೊಟ್ಟುದುದೇಕೆ?
3. ಶಂಭಟ್ಟ್ರು ಗಣಪತಿಯ ಮನೆಗೆ ಬಂದ ಉದ್ದೇಶವೇನು?
4. ಗಣಪತಿ ಮಡಲಿನ ಸೂಟಿ ಕಟ್ಟಿ ಶಂಭಟ್ಟರಿಗೆ ಕೊಡಲು ಕಾರಣವೇನು?

## ಚರ್ಚಾಕೂಟದ ವರದಿ ಬರೆಯಿರಿ

ಉತ್ತಮ ಗುಣ ನಡತೆಗಳಿಗಾಗಿ ಹೆತ್ತವರು ಮಕ್ಕಳನ್ನು ಶಿಕ್ಷಿಸುತ್ತಿದ್ದರು. ಇದು ಸರಿ ಅಥವಾ ತಪ್ಪು ಎಂಬುದರ ಬಗ್ಗೆ ತರಗತಿಯಲ್ಲಿ ಚರ್ಚಾಕೂಟವನ್ನು ಏರ್ಪಡಿಸಿರಿ. ಚರ್ಚಾಕೂಟದ ಸ್ವರೂಪ , ಅಲ್ಲಿ ನಡೆದ ಚರ್ಚೆಯ ಪ್ರಧಾನ ವಿಚಾರಗಳ ಕುರಿತು ವರದಿ ಬರೆಯಿರಿ.

## ವಿವರಣೆ ಬರೆಯಿರಿ

ಮನೆಯಲ್ಲಿ ಸಿದ್ಧಪಡಿಸಿದ ಆಹಾರ ವಸ್ತುಗಳನ್ನು ಉಪಯೋಗಿಸುವುದು ಆರೋಗ್ಯದ ದೃಷ್ಟಿಯಿಂದ ಉತ್ತಮ. ಆದುದರಿಂದ ಗ್ರಾಮೀಣ ಖಾದ್ಯವೊಂದನ್ನು ಮಾಡುವ ವಿಧಾನದ ವಿವರಣೆಯನ್ನು ಬರೆಯಿರಿ.

## ಓದುಗರ ಓಲೆಗೆ ಪತ್ರ ಬರೆಯಿರಿ

ಜಂಕ್ ಫುಡ್ ಇಂದಿನ ಯುವ ಜನಾಂಗವನ್ನು ತನ್ನತ್ತ ಕೈಚಾಚಿ ಆಕರ್ಷಿಸುತ್ತದೆ. ಮಾನವನ ದೇಹದ ಮೇಲೆ ಜಂಕ್ ಫುಡ್‌ನ ವ್ಯತಿರಿಕ್ತ ಪರಿಣಾಮಗಳ ಕುರಿತು ಜನಜಾಗೃತಿ ಮೂಡಿಸಲು, ಕೃತಕ ಬಣ್ಣ, ರಾಸಾಯನಿಕ ವಸ್ತುಗಳನ್ನು ಉಪಯೋಗಿಸಿ ಆಹಾರ ವಸ್ತುಗಳನ್ನು ತಯಾರಿಸುವವರ ಮೇಲೆ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಓದುಗರ ಓಲೆಗೆ ಪತ್ರವೊಂದನ್ನು ಬರೆಯಿರಿ.

## ಜಾಹೀರಾತು ತಯಾರಿಸಿರಿ.

ನಿಮ್ಮ ಶಾಲೆಯಲ್ಲಿ ಆಯೋಜಿಸುವ ಗ್ರಾಮೀಣ ಖಾದ್ಯ ಮೇಳದ ಪ್ರಚಾರಕ್ಕಾಗಿ ಒಂದು ಜಾಹೀರಾತನ್ನು ತಯಾರಿಸಿರಿ.

## ಪಟ್ಟಿಮಾಡಿ ಬರೆಯಿರಿ

- ಮಡಲಿನ ಸೂಟೆಯನ್ನು ಕೈಯಲ್ಲಿ ಕೊಡಬಾರದು.
- ಉರಿಸಿದ ದೀಪವನ್ನು ಕೈಯಲ್ಲಿ ಕೊಡಬಾರದು.

ಪಾಠ ಭಾಗದಲ್ಲಿ ಬಂದಿರುವ ಇಂತಹ ನಂಬಿಕೆಗಳು ನಿಮಗೂ ತಿಳಿದಿರಬಹುದಲ್ಲವೇ? ನಿಮ್ಮ ಊರಿನಲ್ಲಿ ಬಳಕೆಯಲ್ಲಿರುವ ಆರೋಗ್ಯಕ್ಕೆ ಸಂಬಂಧಿಸಿದ ಜನಪದ ನಂಬಿಕೆಗಳನ್ನು ಪಟ್ಟಿ ಮಾಡಿ ಯಾವುದಾದರೂ ಒಂದರ ಕುರಿತು ವೈಜ್ಞಾನಿಕ ಕಾರಣಗಳನ್ನು ಬರೆಯಿರಿ.

## ಸಂಚಿಕೆ ತಯಾರಿಸಿರಿ

ಗ್ರಾಮೀಣ ಖಾದ್ಯಗಳ ಪಟ್ಟಿ ಮತ್ತು ಅವುಗಳನ್ನು ತಯಾರಿಸುವ ವಿಧಾನಗಳನ್ನು ಒಳಗೊಂಡ ಸಂಚಿಕೆಯೊಂದನ್ನು ತಯಾರಿಸಿರಿ.

## ವಿರೋದಾರ್ಥ ಪದ ಬರೆಯಿರಿ

ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ವಿರೋದಾರ್ಥ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ರಚಿಸಿರಿ.

- ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸನ್ನು ಪಡೆಯಲು ಹಗಲೂ ಇರುಳೂ ಶ್ರಮಪಟ್ಟು ಕಲಿಯಬೇಕು.
- ಜೀವನದಲ್ಲಿ ಜಿಗುಪ್ಸೆ ಹೊಂದಿದವರಿಗೆ ಎಲ್ಲದರಲ್ಲಿಯೂ ನಿರಾಸಕ್ತಿ ಉಂಟಾಗುತ್ತದೆ.
- ಪ್ರಾಣಿ ಪಕ್ಷಿಗಳು ಕತ್ತಲಾಗುತ್ತಿದ್ದಂತೆ ಗೂಡು ಸೇರುತ್ತವೆ.
- ಬಡವ ಬಲ್ಲಿದನೆಂಬ ಭೇದವಿಲ್ಲದೆ ಎಲ್ಲರನ್ನು ಸಮಾನವಾಗಿ ಕಾಣುವುದೇ ನಿಜವಾದ ಮನುಷ್ಯ ಧರ್ಮ.
- ದಿನಾ ಸಾಯುವವರಿಗೆ ಅಳುವವರು ಯಾರು?

## ತದ್ಭವ ರೂಪ ಬರೆಯಿರಿ

ಕೊಟ್ಟಿರುವ ಪದಗಳಿಗೆ ಸರಿಯಾದ ತದ್ಭವ ರೂಪಗಳನ್ನು ಪೆಟ್ಟಿಗೆಯಿಂದ ಆರಿಸಿ ಬರೆಯಿರಿ.

ಮುಖ -
ಉತ್ಸಾಹ -
ಸಂಧ್ಯಾ -
ಸುಖ -
ಭಾಷೆ -

ಆಶ್ಚರ್ಯ -
ಆಕಾಶ -
ವರ್ಷ -
ಕ್ಷಣ -

ಮೊಗ ಸೊಗ
ಆಗಸ ಬಾಸೆ ವರುಷ
ಚಣ ಉಚ್ಛಾಹ
ಸಂಜೆ ಅಚ್ಚರಿ

## ಪದ ರಚನೆ

ಪೆಟ್ಟಿಗೆಯಲ್ಲಿ ಕೊಟ್ಟಿರುವ ಅಕ್ಷರಗಳನ್ನು ಜೋಡಿಸಿ ಆಹಾರ ಖಾದ್ಯಗಳ ಹೆಸರುಗಳನ್ನು ಬರೆಯಿರಿ.

| | | | | | | | | | |
|---|---|---|---|---|---|---|---|---|---|
| ಪಾ | ಜ್ಜಿ | ಗೆ | ಹೋ | ಅ | ತ್ರೋ | ಪ | ಬು | ಕ | ಡ್ಲಿ |
| ಗೆ | ಹು | ವಿ | ದೋ | ಲು | ಸ | ತಂ | ಳಿ | ಚ | ಪಾ |
| ಸೆ | ಪ | ಡೆ | ಯ | ನ್ನ | ಡು | ಬು | ಮ | ಇ | ತಿ |

*****

# 3 ನಾವು-ನಮ್ಮವರು

ನಮ್ಮ ದೇಶ ಭಾರತ. ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ, ಬಹುಭಾಷೆಗಳಿಂದ ಕೂಡಿದ ಸಂಪದ್ಭರಿತವಾದ ದೇಶ. ಸಮನ್ವಯತೆ ಭಾರತೀಯರ ವೈಶಿಷ್ಟ್ಯ. ನೂರಾರು ಎಲೆಗಳಿದ್ದರೂ ಅವುಗಳ ಬಣ್ಣ ಒಂದೇ ಆಗಿರುವಂತೆ ವಿಭಿನ್ನ ಭಾವಗಳು ಮೇಳೈಸಿದ ಸಮಗ್ರ ರಾಷ್ಟ್ರ ಪ್ರಜ್ಞೆಯೇ ಭಾವೈಕ್ಯತೆ. ಸರ್ವಧರ್ಮ ಸಂಸ್ಕೃತಿಗಳ ನೆಲೆಬೀಡಾಗಿರುವ ನಮ್ಮ ದೇಶದಲ್ಲಿ ಬೇರೆ ಬೇರೆ ಧರ್ಮಗಳಿಗೆ ಸೇರಿದ ಬೇರೆ ಬೇರೆ ಆಚಾರ-ವಿಚಾರಗಳನ್ನು ಹೊಂದಿರುವ ಜನರು, ಒಂದೇ ಎಂಬ ಭಾವನೆಯಿಂದ ಸೌಹಾರ್ದತೆಯಿಂದ, ಮತೀಯ ಸಾಮರಸ್ಯದಿಂದ ಜೀವನ ಸಾಗಿಸಬೇಕು. “ದೇಶ ಸೇವೆಯೇ ಈಶ ಸೇವೆ” ಎಂದು ಅರಿತು ರಾಷ್ಟ್ರದ ಸಂಪತ್ತಿನ ದುರುಪಯೋಗ ಮಾಡದೆ ಅದನ್ನು ಸಂರಕ್ಷಿಸುವುದು ತಮ್ಮ ಕರ್ತವ್ಯ ಎಂದು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು.



# ಪ್ರವೇಶ ಚಟುವಟಿಕೆ

## 150 ಮಂದಿಯ ಜೀವ ಉಳಿಸಿದ...



ದೀಪಕ್ ಕುಂತವಾಲಾ ಗುಜರಾತ್ ಮೂಲದ ಅನಿವಾಸಿ ಭಾರತೀಯ. 2018ರ ನವೆಂಬರ್ 26ರಂದು ಮುಂಬೈಯ ತಾಜ್ ಹೋಟೆಲಿಗೆ ಯಮದೂತರಂತೆ ನುಗ್ಗಿ ಬಂದ ಉಗ್ರರು ಯದ್ವಾತದ್ವಾ ಗುಂಡು ಹಾರಿಸಿ ಅಮಾಯಕರನ್ನು ಕೊಂದು ಹಾಕಿದರು. ತಮ್ಮಿಂದ ಕೇವಲ 10 ಮೀಟರ್ ದೂರದ ಇನ್ನೊಂದು ರೂಮಿನಲ್ಲಿ ಯಾವ ಸಂದರ್ಭದಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ನಮ್ಮ ಪ್ರಾಣ ಹೋಗಬಹುದು ಎಂದು ಉಗ್ರರ ದಾಳಿ ಶುರುವಾದ ಕೆಲವೇ ಕ್ಷಣಗಳಲ್ಲಿ ದೀಪಕ್‌ಗೆ ಅರ್ಥವಾಗಿ ಹೋಗಿತ್ತು. ಸಾವು ಕಣ್ಣೆದುರಿಗೆ ಇದೆ ಎಂದು ಅರ್ಥವಾದ ಕೂಡಲೇ ಧೈರ್ಯ ಕಳೆದುಕೊಳ್ಳದೆ ಜೊತೆಗಿದ್ದ 150 ಮಂದಿಯನ್ನು ನಾನು ಕಾಪಾಡಬೇಕು, ಅವರ ಪಾಲಿಗೆ ನಾನೇ ಲೀಡರ್ ಆಗಬೇಕು ಎಂದು ಅವರು ನಿರ್ಧರಿಸಿಬಿಟ್ಟರು. ನಂತರ ತಾವು ಉಳಿದುಕೊಂಡಿದ್ದ ತಾಜ್ ಹೋಟೆಲ್‌ನ ಮೊದಲ ಮಹಡಿಯ ರೂಮಿನಲ್ಲಿದ್ದ ಅಷ್ಟೂ ಕರ್ಟನ್‌ಗಳನ್ನು ಬಿಚ್ಚಿಕೊಂಡು ಅವುಗಳನ್ನು ಒಂದಕ್ಕೊಂದು ಗಂಟು ಹಾಕಿ ಹಗ್ಗದಂತೆ ಮಾಡಿದ ನಂತರ ಅದೇ ರೂಮಿನ ಕಿಟಕಿ ಒಂದನ್ನು ಒಡೆದು ಹಾಕಿ ಹಗ್ಗವನ್ನು ಕಿಟಕಿಯಿಂದ ಇಳಿಬಿಟ್ಟರು. ಮೊದಲಿಗೆ ಕರ್ಟನ್ ಹಿಡಿದುಕೊಂಡು 20 ಅಡಿ ಕೆಳಗಿರುವ ನೆಲಕ್ಕೆ ತನ್ನ ತಂದೆಯನ್ನು ಕೆಳಗಿಳಿಸಿ ಆ ಮೂಲಕ ಜೊತೆಗಿದ್ದ ಎಲ್ಲರಿಗೂ ಧೈರ್ಯವಾಗಿ ಕೆಳಗಿಳಿಯಬಹುದು ಎಂದು ತೋರಿಸಿಕೊಟ್ಟರು. ಎಲ್ಲ 150 ಮಂದಿಯ ಪ್ರಾಣ ಉಳಿಸಿ ಬಿಟ್ಟರು.

- ದೀಪಕ್ ಕುಂತವಾಲರ ಬದುಕು ಹೇಗೆ ಸಾರ್ಥಕವಾಯಿತು ?
- ನಿಮ್ಮ ಪರಿಸರದ ಯಾರಾದರೂ ಮಹನೀಯರು ಮಾನವೀಯತೆಯನ್ನು ಮೆರೆದ ಸಂದರ್ಭಗಳನ್ನು ಬರೆದು ಮಂಡಿಸಿರಿ.

# ಕಣ್ಣು ತೆರೆಯಿತು

**- ಕಳ್ಳಿಗೆ ಮಹಾಬಲ ಭಂಡಾರಿ**

ಕಾಸಿಮ್ ಮತ್ತು ಬಾಲಾಜಿ ನೆರೆಹೊರೆಯವರು. ಕಾಸಿಮನ ಪತ್ನಿ ಖದೀಜ ಮತ್ತು ಬಾಲಾಜಿಯ ಪತ್ನಿ ರೋಹಿಣಿಯಮ್ಮ ಪರಸ್ಪರ ಅನ್ಯೋನ್ಯವಾಗಿದ್ದರು. ರಾತ್ರೆಯ ಗಂಜಿ, ರುಚಿಸುವ ಪದಾರ್ಥ, ಒಂದಿಷ್ಟು ಬಿಸಿನೀರು, ಇಷ್ಟಾದರೆ ಖದೀಜಳ ಮನೆಗೆಲಸ ಮುಗಿದು ಆಗ ತಾನೆ ಬರುವ ರೋಹಿಣಿಯಮ್ಮನ ವರೊಡನೆ ಎಷ್ಟೂ ಮಾತುಕತೆ ಮಾಡಬಹುದಿತ್ತು. ಸಂಜೆ ವಾಕಿಂಗಿಗೆ ಹೋಗಿ ತಂಬೆಲರಿಗೆ ಮೈಯೊಡ್ಡಿ ಪ್ರಕೃತಿಯ ನೈಜ ಸೌಂದರ್ಯವನ್ನು ವರ್ಣಿಸಿ ಕತ್ತಲಾಗುವಾಗ ಹಿಂದಿರುಗುವ ಬಯಕೆ ಅವರಿಗಿಲ್ಲ. “ರೋಹಿಣಿಯಮ್ಮ ಬಂದಿರೇ?’ ಎಂದು ಮಿದುವಾಗಿ ನುಡಿದು, ಹುಲ್ಲಿನ ಚಾಪೆಯನ್ನು ಮನೆಮಂಟಪದಲ್ಲಿ ಹಾಸಿ ಖದೀಜಾ ಮುಗುಳುನಗುತ್ತಿದ್ದಳು. ಅನಂತರ ಅಡುಗೆ ಕೋಣೆಗೋಡಿ ಒಂದಿಷ್ಟು ಕಾಫಿ ಲೋಟೆಯಲ್ಲಿ ತಂದಿರಿಸಿದಾಗ ‘ಏಕಮ್ಮಾ, ದಿನಾಲೂ ನಿನ್ನದೇ ಕಾಫಿ ಕುಡಿಯಬೇಕೆಂದೇ ವಿಧಿಯಿದೆಯೇ? ನಮ್ಮಲ್ಲಿ ಒಮ್ಮೆಯಾದರೂ ಕಾಫಿ ಕುಡಿದು ಪಾಪದ ರೋಹಿಣಿಯಕ್ಕನಿಗೆ ನಷ್ಟ ಮಾಡಬಾರದೆಂಬ ಮುಂಜಾಗ್ರತೆಯೇ?’ ಎಂದು ಸವಾಲು ಮಾಡುವರು.



ಅನಂತರ ಒಂದೇ ಚಾಪೆಯಲ್ಲಿ ಮೈ ಮೈ ಸೋಂಕಿ ಕುಳಿತರೆಂದರೆ ಯಾವ ಶಕ್ತಿಯೂ ಅವರ ಮಾತುಕತೆಯನ್ನು ಮುರಿಯಲಾರದು. ಜೀವನದ ಹತ್ತಾರು 'ಸಮಸ್ಯೆಗಳನ್ನು ರೋಹಿಣಿ ಮತ್ತು ಖದೀಜಾ ಚರ್ಚಿಸುವರು. ಎಷ್ಟು ಪವಿತ್ರ ಪ್ರೇಮವದು! ಅಡುಗೆಯ ಸಾಂಬಾರಗಳೇನಾದರೂ ಮುಗಿದಿದ್ದರೆ ರೋಹಿಣಿಯಮ್ಮ ಖದೀಜಳಿಂದಲೂ, ಖದೀಜಾಗೇನಾದರೂ ಬೇಕಿದ್ದರೆ ರೋಹಿಣಿಯಮ್ಮನವರಿಂದಲೂ ನೆರವು ಬೇಕಾಗುತ್ತಿತ್ತು.

ಸಲುಗೆಯ ಈ ಜೀವನ ಬಹುದಿನ ಬಾಳಲಿಲ್ಲ. ದಿನ ಹೋದಂತೆ ಎರಡು ಮನೆಯವರೊಳಗೂ ಒಂದು ತೆರನಾದ ಅವಿಶ್ವಾಸ, ವೈಷಮ್ಯಗಳೆದ್ದುವು. ದಿನಾಲೂ ಖದೀಜಾಳ ಮನೆ ಸಂದರ್ಶಿಸುತ್ತಿದ್ದ ರೋಹಿಣಿಗೆ ಅದನ್ನು ನಿಲ್ಲಿಸಲಿಕ್ಕಾಗಿ ಕಟ್ಟಾಜ್ಞೆಯಾಗಿತ್ತು! ಕಾರಣವಿಷ್ಟೆ. ಎರಡು ದಿನಗಳ ಹಿಂದೆ ಕಾಸಿಮನ ಅತಿಥಿಯಾಗಿ ಬಂದವನು ಕಾಸಿಮನ ತೀರಿ ಹೋದ ದೊಡ್ಡಪ್ಪನ ಮಗನಂತೆ. ಮುಂಬಯಿಯಲ್ಲಿ ಹಡಗಿನ ನೌಕರನಾಗಿದ್ದಾತ ಕೋಮುವಾರು ಹೊಡೆದಾಟದ ಕುರುಕ್ಷೇತ್ರದಿಂದ ಪಾರಾಗಲಿಕ್ಕಾಗಿ ಊರಿಗೆ ಬಂದವನು ಕಾಸಿಮನನ್ನು ನೋಡಲಿಕ್ಕಾಗಿ ಬಂದುದಂತೆ. ಹಳ್ಳಿಯವರಿಗೆ ನಗರದ ಸಮಾಚಾರ ಕೇಳುವುದೆಂದರೆ ಬಹು ಇಷ್ಟ. ಹಳ್ಳಿಯಿಂದ ಪೇಟೆಗೆ ಹೋಗಿ ಬಹಳ ದಿನಗಳ ಆನಂತರ ಹಿಂತಿರುಗುವವರಿಗೆ ಅದನ್ನು ಹೇಳುವುದೆಂದರೆ ಅಷ್ಟೇ ಮಮತೆ. ಕಾಸಿಮನ ಅತಿಥಿ ಊಟ ಮುಗಿಸಿ ಹೇಳತೊಡಗಿದ. ಕಾಸಿಂ ದಂಪತಿಗಳು ನಿಶ್ಚಿಂತರಾಗಿ ಕೇಳಿದರು.

ಕಾಸಿಮನ ಅತಿಥಿಯ ಬಾಯಿಂದ ಹೊರಟ ಕತೆಯು ಹಳ್ಳಿಯ ಆ ಎರಡು ನೆರೆಮನೆಗಳಲ್ಲಿ ರೋಹಿಣಿ- ಖದೀಜಾರ ಗೆಳೆತನದ ಆ ಪವಿತ್ರ ಬಾಳಲ್ಲಿ ವಿಷದ ಬೀಜವನ್ನು ಬಿತ್ತಿತು. ಬಾಲಾಜಿಯವರು ಪತ್ನಿಯನ್ನು ಅವಸರದಿಂದ ಕರೆದು "ಇನ್ನು ಆ ಮನೆಗೆ ಹೋಗದಿರು; ಅವರು ನಮ್ಮನ್ನು ಕೊಲ್ಲುವ ಪಣತೊಟ್ಟಿದ್ದಾರೆ" ಎಂದು ಪಿಸುಗುಟ್ಟಿದರು.

ರೋಹಿಣಿಯಮ್ಮ ಖದೀಜಾಳ ಮನೆಗೆ ಕಾಲಿರಿಸದೆ ಒಂದು ಮಾಸ ಮೀರಿತ್ತು. ಆ ಎರಡು ಮನೆಯವರಿಗೆ ಪರಸ್ಪರ ಮಾತಿಲ್ಲದೇ ಅಷ್ಟೇ ಅವಧಿಯಾಗಿತ್ತು. ಇನ್ನು ಇಲ್ಲುಳಿದರೆ ಕೆಲವೇ ದಿನಗಳಲ್ಲಿ ತನ್ನನ್ನು ಕೊಲ್ಲುವರೆಂದು ಶಂಕೆಪಟ್ಟ ಬಾಲಾಜಿಯವರು ಮನೆ ಬದಲಾಯಿಸುವುದರಲ್ಲಿದ್ದರು!

ಹೀಗಿರಲು ಒಂದು ದಿನ ಮಧ್ಯರಾತ್ರಿ ಹನ್ನೆರಡು ಹೊಡೆಯುವ ತನಕವೂ ವ್ಯಾಪಾರದ ವ್ಯವಹಾರವೇ ತಲೆಯಲ್ಲಿ ತಾಂಡವವಾಡುತ್ತಿದ್ದ ಕಾಸಿಮನಿಗೆ ನಿದ್ದೆಯೇ ಹತ್ತಲಿಲ್ಲ. ಅದೇಕೋ

ಆತ ಹಾಸಿಗೆಯಿಂದೆದ್ದು ಅರಚಿಕೊಂಡ. ಮನೆಯೊಳಗಿಂದ ಹಾರಿ ಬಾಲಾಜಿಯವರ ಹಿತ್ತಿಲು ಸೇರಿದ್ದ. ಖದೀಜಾಳು ಸರ್ವನಾಶವಾಯಿತೆಂದು ಅರಚಿಕೊಂಡಳು. ಆದರೆ ಈ ಸಂದಿಗ್ಧ ಸಮಯದಲ್ಲಿ ಘೋಷಾ ಪದ್ಧತಿ ಆಕೆಯನ್ನು ತಡೆಯಲಿಲ್ಲ. ಗಂಡನನ್ನು ಹಿಂಬಾಲಿಸಿದಳು. ರೋಹಿಣಿಯಮ್ಮ ರಾತ್ರಿ ಹೊರಗೆ ಬಿಸಿನೀರು ಕಾಯಿಸಿದ ಬೆಂಕಿಯ ಮೇಲೆ ನೀರು ಹಾಕಲು ಮರೆತುದರಿಂದ ಗಾಳಿ ಬೀಸಿ, ಬೆಂಕಿ ಹಾರಿ ಮಾಡನ್ನು ಸೇರಿ ಮನೆಯನ್ನು ಸುಡುವುದರಲ್ಲಿತ್ತು. ಮನೆಗೆ ನುಗ್ಗಿದ ಖದೀಜಾ ಮಲಗಿದ ರೋಹಿಣಿಯನ್ನೆಬ್ಬಿಸಿ ಪಕ್ಕದಲ್ಲಿದ್ದ ಮಗುವನ್ನು ಕೈಯಿಂದೆತ್ತಿ ಹಕ್ಕಿಯಂತೆ ಹೊರಗೆ ಹಾರಿದಳು. ಕಾಸಿಮನ ಆರ್ಭಟ ಆಗಲೆ ಬಾಲಾಜಿಯವರನ್ನೂ ಪಕ್ಕದ ಹತ್ತಾರು ಮನೆಮಂದಿಯನ್ನೂ ಎಬ್ಬಿಸಿತ್ತು. ಬಂದವರು ಬಾವಿಯಿಂದ ನೀರೆತ್ತಿದರು. ಕಾಸಿಮ್ ಉರಿಯುವ ಜ್ವಾಲೆಯ ಮೇಲೆ ಮಾಡಿನ ನೆತ್ತಿಯಲ್ಲಿ ನೀರು ಹಾರಿಸಿದನು. ಇನ್ನೊಂದರೆಚಣದಲ್ಲಿ ಸರ್ವನಾಶವಾಗಲಿದ್ದ ಮಹಡಿಯ ಮನೆ ಅಗ್ನಿದೇವನನ್ನು ವಂಚಿಸಿತು. ರೋಹಿಣಿಯಮ್ಮ ಖದೀಜಳನ್ನು ಅಪ್ಪಿಹಿಡಿದರು. ಒಂದು ತಿಂಗಳಿನಿಂದ ಇಲ್ಲವಾಗಿದ್ದ ಪ್ರೇಮ ಇನ್ನೊಮ್ಮೆ ಕಾಣಿಸಿಕೊಂಡಿತು. ತನಗೆ ಮೃತ್ಯುವಾಗಬಹುದೆಂದು ನೆನೆಸಿದ್ದ ಕಾಸಿಮ್ ಇಂದು ಮೃತ್ಯುವಿನ ದವಡೆಯೊಳಗಿಂದ ಬಾಲಾಜಿಯವರನ್ನು ಹೊರಗೆಳೆದ. ಇದರ ಮೊದಲೆಂದೂ ಮರಹತ್ತದ ಬಾಲಾಜಿಯವರು ತಾನೆ ತೆಂಗಿನ ಮರಹತ್ತಿ ಹತ್ತಿಪ್ಪತ್ತು ಕಾಯಿ ಕಿತ್ತರು. ಕಾಸಿಂ ಮನೆಗೋಡಿ ನಾಲ್ಕು ಸೇರು ಅವಲಕ್ಕಿ, ಬೆಲ್ಲ ತಂದ, ಎಲ್ಲರೂ ತಿಂದು ನಕ್ಕುನಲಿದರು. ಭೇದವನ್ನು ಮರೆತು ಸ್ನೇಹದಿಂದ ಮೈ ಮರೆತರು. ರೋಹಿಣಿಯಮ್ಮ ಖದೀಜಾರು ಮಾತ್ರ ಮನೆಯೊಳಕ್ಕೆ ಹೋದರು. "ನಿನ್ನ ಕಾಫಿಯನ್ನು ದಿನಾಲೂ ಕುಡಿಯಬೇಕೆಂದೇ ವಿಧಿಯಿದೆಯೇ' ಎಂದು ಸವಾಲು ಮಾಡಿದ ರೋಹಿಣಿಯಮ್ಮನವರಿಗೆ ಖದೀಜಾಳಿಗೂ ಕಾಫಿ ಕುಡಿಸುವ ಪುಣ್ಯ ಒದಗಿತು! ಅವಿವೇಕದ ಅಂಧಕಾರದಲ್ಲಿ ಕುರುಡರಾಗಿದ್ದ ಅವರ ಕಣ್ಣು ತೆರೆಯಿತು!.



## ಲೇಖಕರ ಪರಿಚಯ



ಕಳ್ಳಿಗೆ ಮಹಾಬಲ ಭಂಡಾರಿ ಕಾಸರಗೋಡಿನ ಪೈವಳಿಕೆ ಸಮೀಪದ ಕಳ್ಳಿಗೆ ಗ್ರಾಮದವರು. ಸಂಕಪ್ಪ ಭಂಡಾರಿ ಮತ್ತು ಶಂಕರಿಯವರ ಮಗನಾಗಿ 1927ರ ಜೂನ್ 16ರಂದು ಜನಿಸಿದರು.

ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯು ತೀವ್ರ ಸ್ವರೂಪ ಪಡೆಯುತ್ತಿದ್ದಂತೆ 'ಮಾಡು ಇಲ್ಲವೇ ಮಡಿ' ಚಳುವಳಿಯಲ್ಲಿ ಧುಮುಕಿದರು. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ್ದನ್ನು ವಿರೋಧಿಸಿ ಹೋರಾಟಕ್ಕೆ ಚಾಲನೆ ನೀಡಿದರು. ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಶಾಸಕರಾಗಿಯೂ ಸೇವೆ ಸಲ್ಲಿಸಿರುವರು. ವಿದ್ಯಾರ್ಥಿ ದೆಸೆಯಲ್ಲಿಯೇ ಅವರು 'ಸಮಾಗಮ' ಎಂಬ ಕಾದಂಬರಿ ಬರೆದಿದ್ದರು. 'ಮೇಲಿನ ಕೋರ್ಟು', 'ದೇವರು ಮಾಡಿದ ಕೊಲೆ' ಇವರು ಬರೆದ ಇನ್ನಿತರ ಕಾದಂಬರಿಗಳು. 'ಅಸ್ಥಿ ಪಂಜರದೊಡನೆ ಮಾತುಕತೆ' ಇವರು ಬರೆದ ಲೇಖನಗಳ ಸಂಕಲನ. 1978 ಜನವರಿ 7ರಂದು ನಿಧನರಾದರು.

### ಚಟುವಟಿಕೆಗಳು

### ಉತ್ತರಿಸಿರಿ

1. ಬಾಲಾಜಿ ಮತ್ತು ರೋಹಿಣಿಯಮ್ಮನವರ ನೆರೆಮನೆಯಲ್ಲಿ ಯಾರು ವಾಸಿಸುತ್ತಿದ್ದರು?
2. ರೋಹಿಣಿಯಮ್ಮ ಹಾಗೂ ಖದೀಜರ ದಿನಚರಿಯನ್ನು ಬರೆಯಿರಿ.
3. ರೋಹಿಣಿಯಮ್ಮ ಮತ್ತು ಖದೀಜರ ಪವಿತ್ರ ಪ್ರೇಮ ಹೇಗಿತ್ತು?
4. ರೋಹಿಣಿಯಮ್ಮ ಮತ್ತು ಖದೀಜರ ಗೆಳೆತನದ ಬಾಳಲ್ಲಿ ವಿಷದ ಬೀಜ ಬಿತ್ತಿದ ಘಟನೆ ಯಾವುದು?
5. ಅವಿವೇಕದ ಅಂಧಕಾರದಲ್ಲಿ ಕುರುಡಾಗಿದ್ದ ಅವರ ಕಣ್ಣನ್ನು ತೆರೆಸಿದ ಘಟನೆಯನ್ನು ವಿವರಿಸಿ ಬರೆಯಿರಿ.

### ಚರ್ಚಿಸಿರಿ

ಸಾಮಾಜಿಕ ಸೌಹಾರ್ದತೆಗೆ ಸಂಬಂಧಿಸಿದ ನಿಮಗೆ ತಿಳಿದಿರುವ ಘಟನೆಗಳನ್ನು ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.

### ಪತ್ರ ಬರೆಯಿರಿ

‘ಕಣ್ಣು ತೆರೆಯಿತು’ ಕಥೆಯಲ್ಲಿ ರೋಹಿಣಿಯಮ್ಮ ಮತ್ತು ಖದೀಜಮ್ಮ ಒಂದಾದ ಘಟನೆಯನ್ನು ಸಂಕ್ಷಿಪ್ತವಾಗಿ ಬರೆದು ಸಮಾಜದಲ್ಲಿ ಸಾಮರಸ್ಯದ ಬದುಕಿನ ಅಗತ್ಯದ ಕುರಿತು ನಿಮ್ಮ ಅಭಿಪ್ರಾಯಗಳನ್ನು ಗೆಳೆಯ/ಗೆಳತಿಗೆ ಪತ್ರ ಬರೆಯಿರಿ.

### ಭಿತ್ತಿಪತ್ರ ತಯಾರಿಸಿರಿ

ಸಾಮಾಜಿಕ ಸೌಹಾರ್ದತೆಗೆ ಪ್ರೇರಣೆ ನೀಡುವ ಭಿತ್ತಿಪತ್ರ ತಯಾರಿಸಿರಿ.

### ಪಾತ್ರ ಚಿತ್ರಣ ಬರೆಯಿರಿ

ಈ ಕಥೆಯಲ್ಲಿ ಬರುವ ಕಾಸಿಂನ ಪಾತ್ರ ಚಿತ್ರಣ ಬರೆಯಿರಿ.

### ಕಥೆ ಮುಂದುವರಿಸಿ ಬರೆಯಿರಿ

ಅದೊಂದು ಕೆರೆ. ಕೆರೆಯ ನಡುವೆ ಮರದ ಹಲಗೆಯಿಂದ ಮಾಡಿದ ಒಂದು ಸೇತುವೆ ಇತ್ತು. ಕೆರೆಯ ಇಕ್ಕೆಲಗಳಲ್ಲಿ ಎರಡು ಕುಟುಂಬಗಳು ವಾಸವಾಗಿತ್ತು. ಒಬ್ಬರು ಇನ್ನೊಬ್ಬರ ಮನೆಗೆ ಹೋಗಬೇಕಾದರೆ ಕೆರೆಗೆ ಹಾಕಿದ ಸೇತುವೆ ದಾಟಿ ಹೋಗಬೇಕಾಗಿತ್ತು. ಆ ಎರಡು ಕುಟುಂಬಗಳು ಪರಸ್ಪರ ಅನ್ಯೋನ್ಯವಾಗಿದ್ದು ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ಒಬ್ಬರ ಮನೆಗೆ ಇನ್ನೊಬ್ಬರು ಹೋಗುತ್ತಿದ್ದರು. ಆ ಎರಡು ಕುಟುಂಬಗಳ ಆಚಾರ ವಿಚಾರಗಳಲ್ಲಿ ಸಾಕಷ್ಟು ಭಿನ್ನತೆಗಳಿದ್ದರೂ ಅವರು ಪರಸ್ಪರ ಒಬ್ಬರನ್ನೊಬ್ಬರು ಗೌರವಿಸುತ್ತಿದ್ದರು. ಎರಡು ಕುಟುಂಬಗಳ ಮಕ್ಕಳು ಒಟ್ಟಾಗಿ ಬೆರೆತು ಆಟವಾಡಿ ಕಾಲ ಕಳೆಯುತ್ತಿದ್ದರು. ಹಿರಿಯರು ಪರಸ್ಪರ ಸಹಕಾರ ಭಾವದಿಂದ ಬಾಳುತ್ತಿದ್ದರು. ಹಲವು ವಿಚಾರಗಳಲ್ಲಿ ಎರಡು ಕುಟುಂಬದವರೂ ಒಬ್ಬರನ್ನೊಬ್ಬರು ಅವಲಂಬಿಸಿದ್ದರು. ಬಹಳ ಸಂತೋಷದಿಂದ ಇದ್ದ ಆ ಎರಡು ಕುಟುಂಬಗಳ ನಡುವೆ ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಜಗಳ ನಡೆದು ಎರಡು ಕುಟುಂಬಗಳ ನಡುವೆ ಮಾತುಕತೆ ನಿಂತು ಹೋಯಿತು. ಅದೊಂದು ಮಳೆಗಾಲದ ದಿನ ಜೋರಾಗಿ ಸುರಿದ ಮಳೆಗೆ ಕೆರೆಗೆ ಹಾಕಿದ ಸೇತುವೆ ಮುರಿದು ಹೋಯಿತು ..............

..........................................................................................................

..........................................................................................................

.....................................................................................

### ಸಂಯುಕ್ತ ವಾಕ್ಯವನ್ನು ಸರಳ ವಾಕ್ಯವನ್ನಾಗಿ ಪರಿವರ್ತಿಸಿ ಬರೆಯಿರಿ.

ಈ ಕೆಳಗಿನ ವಾಕ್ಯವನ್ನು ಓದಿರಿ.

- ಮನೆಗೆ ನುಗ್ಗಿದ ಖದೀಜ ಮಲಗಿದ್ದ ರೋಹಿಣಿಯನ್ನೆಬ್ಬಿಸಿ ಪಕ್ಕದಲ್ಲಿದ್ದ ಮಗುವನ್ನು ಕೈಯಿಂದ ಎತ್ತಿ ಹಕ್ಕಿಯಂತೆ ಹೊರಗೆ ಹಾರಿದಳು.

ಇದು ಸಂಯುಕ್ತ ವಾಕ್ಯರೂಪದಲ್ಲಿದೆ. ಇದನ್ನು ಈ ಕೆಳಗಿನಂತೆ ಸರಳ ವಾಕ್ಯಗಳನ್ನಾಗಿ ಮಾಡಬಹುದು.

- ಮನೆಗೆ ನುಗ್ಗಿದ ಖದೀಜಾ ಮಲಗಿದ್ದ ರೋಹಿಣಿಯನ್ನು ಎಬ್ಬಿಸಿದಳು.
- ಅವಳು ಪಕ್ಕದಲ್ಲಿದ್ದ ಮಗುವನ್ನು ಕೈಯಿಂದೆತ್ತಿ ಹಕ್ಕಿಯಂತೆ ಹೊರಗೆ ಹಾರಿದಳು.

ಕೆಳಗಿನ ಸಂಯುಕ್ತ ವಾಕ್ಯಗಳನ್ನು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

- ರೋಹಿಣಿಯಮ್ಮ ಹುಲ್ಲಿನ ಚಾಪೆಯನ್ನು ಮನೆಮಂಟಪದಲ್ಲಿ ಹಾಸಿದಾಗ ಖದೀಜಳು ಮುಗುಳು ನಗುತ್ತಿದ್ದಳು.
- ರೋಹಿಣಿಯಮ್ಮ ರಾತ್ರಿ ಹೊರಗೆ ಬಿಸಿ ನೀರು ಕಾಯಿಸಿದ ಬೆಂಕಿಯ ಮೇಲೆ ನೀರು ಹಾಕಲು ಮರೆತುದರಿಂದ ಗಾಳಿ ಬೀಸಿ, ಬೆಂಕಿ ಹರಿದು ಮಾಡನ್ನು ಸೇರಿ ಮನೆಯನ್ನು ಸುಡುವುದರಲ್ಲಿತ್ತು.

### ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ.

ನುಡಿಗಟ್ಟುಗಳ ಬಗ್ಗೆ ಹಿಂದಿನ ತರಗತಿಯಲ್ಲಿ ಕೇಳಿದ್ದೀರಲ್ಲವೇ?

**ಉದಾ- ವಿಷದ ಬೀಜ ಬಿತ್ತು - ದ್ವೇಷವನ್ನು ಕೆರಳಿಸುವ ಮಾತನ್ನು ಹೇಳುವುದು.**

ಈ ರೀತಿಯ ಇತರ ನುಡಿಗಟ್ಟುಗಳನ್ನು ಸಂಗ್ರಹಿಸಿ ಅದರ ಅರ್ಥವನ್ನು ಬರೆಯಿರಿ.

*****

# ಎಲೆಗಳು ನೂರಾರು

- ಡಾ| ಎಚ್. ಎಸ್. ವೆಂಕಟೇಶ ಮೂರ್ತಿ

ಎಲೆಗಳು ನೂರಾರು ಭಾವದ ಎಳೆಗಳು ನೂರಾರು
ಎಲೆಗಳ ಬಣ್ಣ ಒಂದೇ ಹಸಿರು
ಜಾತಿ ಭಾಷೆ ಪಂಥ ಹಲವು
ಅವುಗಳ ಹಿಂದೆ ಮಾತ್ರ ಒಂದೇ ಒಲವು.

ಸಾಗೋಣ ಒಟ್ಟಿಗೆ ಸಾಗೋಣ
ನಾವು ನೀವು ಸೇರಿ ಒಂದಾಗಿ
ನೀಗೋಣ ಭಿನ್ನತೆ ನೀಗೋಣ
ಸಾವಿರ ಹೆಜ್ಜೆ ಒಂದೇ ಗುರಿಗಾಗಿ

ಕಿಡಿಗಳು ನೂರಾರು ಬೆಳಕಿನ ಕುಡಿಗಳು ನೂರಾರು
ಬೆಳಕಿನ ಪರಿಗೆ ಒಂದೇ ಹೆಸರು
ಸೂರ್ಯ ಚಂದ್ರ ಲಾಂದ್ರ ಹಣತೆ
ಅವುಗಳ ಹಿಂದೆ ಮಾತ್ರ ಒಂದೇ ಘನತೆ.

ತೆರೆಯೋಣ ಹೃದಯ ತೆರೆಯೋಣ
ನಾವು ನೀವು ಸೇರಿ ಒಂದಾಗಿ
ಮರೆಯೋಣ ಭೇದ ಮರೆಯೋಣ
ನದಿಗಳು ಕೂಡಿದ ಪ್ರೀತಿಯ ಕಡಲಾಗಿ

ಪದಗಳು ನೂರಾರು ಬದುಕಿನ ಹದಗಳು ನೂರಾರು
ಪದಗಳ ಹಿಂದೆ ಒಂದೇ ಉಸಿರು
ಅಕ್ಕರೆಯಿಂದ ಒಟ್ಟಿಗೆ ಬಾಳೋಣ
ಭಾರತ ಮಾತೆಗೆ ನಮ್ಮ ಪ್ರೀತಿ ತೋರೋಣ

ಕಟ್ಟೋಣ ನಾಡನು ಕಟ್ಟೋಣ
ನಾವು ನೀವು ಸೇರಿ ಒಂದಾಗಿ
ಮುಟ್ಟೋಣ ಮಾಡನು ಮುಟ್ಟೋಣ
ತಾರೆಗಳೇ ಈ ನಾಡಿನ ಸೂರಾಗಿ

## ಕವಿ ಪರಿಚಯ



ಡಾ. ಎಚ್ ಎಸ್. ವೆಂಕಟೇಶ್ ಮೂರ್ತಿ ಅವರು 1944 ಜೂನ್ ತಿಂಗಳ 23ರಂದು ಶಿವಮೊಗ್ಗ ಜಿಲ್ಲೆಯ ಹೊದಿಗ್ಗೆರೆ ಗ್ರಾಮದಲ್ಲಿ ಜನಿಸಿದರು. ಮಲ್ಲಾಡಿ ಹಳ್ಳಿಯ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಜೀವನವನ್ನು ಆರಂಭಿಸಿದ ಡಾ. ಎಚ್. ಎಸ್. ವಿ. ಅವರು ಅನಂತರ ಬೆಂಗಳೂರಿನ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರಾದರು.

'ಸೌಗಂಧಿಕ', 'ಹರಿಗೋಲು', 'ಭೂಮಿಯು ಒಂದು ಅವಕಾಶ', 'ಮೂವತ್ತು ಮಳೆಗಾಲ',ಮೊದಲಾದವು ಇವರ ಕವನ ಸಂಕಲನಗಳು. 'ಬಾನಸವಾಡಿಯ ಬೆಂಕಿ', 'ಪುಟ್ಟಾರಿಯ ಮತಾಂತರ' ಕಥಾ ಸಂಕಲನಗಳನ್ನೂ, 'ಅಮಾನುಷ', 'ಕದಿರನ ಕೋಟೆ' ಮುಂತಾದ ಕಾದಂಬರಿಗಳನ್ನೂ 'ಹಕ್ಕಿ ನಾಲ್ಕು' , 'ಹೂವಿನ ಶಾಲೆ' ಮುಂತಾದ ಮಕ್ಕಳ ಸಾಹಿತ್ಯ ಕೃತಿಗಳನ್ನೂ 'ಸೋದರಿ ನಿವೇದಿತಾ' 'ಸಿ. ವಿ. ರಾಮನ್' ಮುಂತಾದ ಜೀವನ ಚರಿತ್ರೆಗಳನ್ನೂ ರಚಿಸಿದ್ದಾರೆ. 'ಎಚ್ಚೆಸ್ವಿ ಅನಾತ್ಮ ಕಥನ' ಶ್ರೀಯುತರ ಆತ್ಮಕತೆಯಾಗಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ದೇವರಾಜ ಬಹದ್ದೂರ್ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಬಾಲ ಸಾಹಿತ್ಯ ಪುರಸ್ಕಾರ ಮುಂತಾದ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಪ್ರಸ್ತುತ ಕವನವನ್ನು ಎಚ್. ಎಸ್. ವಿ. ಯವರ 'ಎಲೆಗಳು ನೂರಾರು' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

### ಚಟುವಟಿಕೆಗಳು

### ಹಾಡಿರಿ

"ಎಲೆಗಳು ನೂರಾರು" ಪದ್ಯವನ್ನು ರಾಗ ತಾಳ ಲಯಬದ್ಧವಾಗಿ ಹಾಡಿರಿ.

### ಉತ್ತರಿಸಿರಿ

1. 'ಜಾತಿ ಭಾಷೆ ಪಂಥ ಹಲವು ಅವುಗಳ ಹಿಂದೆ ಮಾತ್ರ ಒಂದೇ ಒಲವು' - ಎಲೆಗಳು ನೂರಾರು ಕವನದ ಈ ಸಾಲುಗಳು ಯಾವ ಭಾವವನ್ನು ಸೂಚಿಸುತ್ತದೆ ಎಂದು ಕವಿ ಹೇಳಿದ್ದಾರೆ?
2. ಒಂದೇ ಘನತೆ ಹೊಂದಿರುವ ಬೆಳಕಿನ ಕುಡಿಗಳು ಯಾವುವು?
3. ಎಲ್ಲಾ ಮನುಷ್ಯರು ಭೇದ ಮರೆತು ಯಾವ ರೀತಿಯಲ್ಲಿ ಒಂದಾಗಿ ಬಾಳಬೇಕು?
4. ಭಾರತ ಮಾತೆಗೆ ಪ್ರೀತಿ ತೋರುವ ಬಗೆ ಹೇಗೆ?
5. ನಾವು ಕಟ್ಟುವ ನಾಡು ಹೇಗಿರಬೇಕು?

### ಆಶಯ ಬರೆಯಿರಿ

ಎಲೆಗಳು ನೂರಾರು ಕವನವನ್ನು ಓದಿದಿರಲ್ಲವೇ? ಕವನದ ಆಶಯವನ್ನು ಬರೆಯಿರಿ.

### ಪ್ರಬಂಧ ಬರೆಯಿರಿ

ಜಾತಿ ಮತ ಧರ್ಮಗಳು ಬೇರೆ ಬೇರೆಯಾದರೂ ಎಲ್ಲರೂ ಒಗ್ಗಟ್ಟಿನಿಂದ ಪ್ರೀತಿಯಿಂದ ಬಾಳಬೇಕು ಎಂಬುದನ್ನು ಈ ಕವನದಿಂದ ತಿಳಿದುಕೊಂಡಿರಲ್ಲವೇ? ಈ ಹಿನ್ನೆಲೆಯಲ್ಲಿ "ರಾಷ್ಟ್ರೀಯ ಭಾವೈಕ್ಯತೆ" ಎಂಬ ವಿಷಯದ ಕುರಿತು ಒಂದು ಪ್ರಬಂಧ ಬರೆಯಿರಿ.

### ಇಷ್ಟವಾದ ಸಾಲು ಬರೆಯಿರಿ

ಪದ್ಯ ಭಾಗದಲ್ಲಿ ನಿಮಗೆ ಇಷ್ಟವಾದ ಸಾಲುಗಳು ಯಾವುವು ?ಇದು ನಿಮಗೆ ಯಾಕೆ ಇಷ್ಟವಾಯಿತು ಎಂದು ಬರೆಯಿರಿ.

### ಪ್ರಾಸ ಪದಗಳನ್ನು ಗುರುತಿಸಿರಿ

ನೂರಾರು – ಹಸಿರು

ಹಲವು – ಒಲವು

ಮೇಲಿನ ಪದಗಳನ್ನು ಗಮನಿಸಿದಿರಲ್ಲವೇ? ಈ ರೀತಿಯ ಪದಗಳನ್ನು ಪ್ರಾಸ ಪದಗಳು ಎನ್ನುತ್ತಾರೆ. ಈ ಕವನದಲ್ಲಿ ಬಂದ ಪ್ರಾಸ ಪದಗಳನ್ನು ಹುಡುಕಿ ಬರೆಯಿರಿ.

### ವಿರೋಧಾರ್ಥ ಪದ ಬರೆಯಿರಿ

ಕೆಳಗೆ ಕೊಟ್ಟಿರುವ ಶಬ್ದಗಳ ವಿರುದ್ಧಾರ್ಥ ಪದವನ್ನು ಬರೆಯಿರಿ.

ಹಿಂದೆ × ........................

ಪ್ರೀತಿ × ........................

ಬೆಳಕು × ........................

### ಸಂಚಿಕೆ ತಯಾರಿಸಿರಿ

ದೇಶಭಕ್ತಿ ಗೀತೆಗಳನ್ನು ಸಂಗ್ರಹಿಸಿ ಒಂದು ಸಂಚಿಕೆಯನ್ನು ತಯಾರಿಸಿರಿ.

*****

# ಸಮಾಜ ಸೇವಕ ಸ್ಕೌಟು

**- ಸಂಗ್ರಹ**

ಅಂದು ಶನಿವಾರ. ರಾತ್ರಿ ಸ್ಕೌಟುಗಳ ಶಿಬಿರಾಗ್ನಿ ಕಾರ್ಯಕ್ರಮ. ಊರವರೆಲ್ಲಾ ಬೇಗನೆ ಊಟ ಮುಗಿಸಿ 9 ಗಂಟೆಗೆ ಸರಿಯಾಗಿ ಶಾಲಾ ಆಟದ ಬಯಲಿನಲ್ಲಿ ನೆರೆದಿದ್ದರು. ಅಷ್ಟರಲ್ಲಿ ಸ್ವಲ್ಪ ದೂರದಿಂದ ಬೊಬ್ಬೆ ಕೇಳಿಸಿತು. ವಿಚಾರವೇನೆಂದು ತಿಳಿದಾಗ ಶಾಲೆಯ ಪಕ್ಕದಲ್ಲಿದ್ದ ಆವರಣವಿಲ್ಲದ ಬಾವಿಗೆ ಯಾರೋ ಬಿದ್ದು ಬಿಟ್ಟಿದ್ದರು. ಇದನ್ನು ತಿಳಿದ ಸ್ಕೌಟು ಉಪಾಧ್ಯಾಯರು ಬಿಗಿಲು ಊದಿ ಎಲ್ಲಾ ಸ್ಕೌಟುಗಳನ್ನು ಬರಮಾಡಿಕೊಂಡು ಬಾವಿಯತ್ತ ಹೋದರು. ನಿರ್ದೇಶನದಂತೆ ಸ್ಕೌಟು ಬಾಲಕರಿಬ್ಬರು ತಮ್ಮಲ್ಲಿದ್ದ ಹಗ್ಗಗಳ ಸಹಾಯದಿಂದ ಬಾವಿಗೆ ಇಳಿದರು. ಮೇಲಿನಿಂದ ಇಬ್ಬರು ಬೆಳಕನ್ನು ಹಿಡಿದರು. ಉಳಿದವರು ಸಹಾಯ ಮಾಡಿ ಆ ವ್ಯಕ್ತಿಯನ್ನು ತಮ್ಮಲ್ಲಿದ್ದ, ಹಗ್ಗದಿಂದ ತಯಾರಿಸಿದ ಕುಳಿತುಕೊಳ್ಳುವ ಆಸನದಲ್ಲಿ ಕಟ್ಟಿ, ಅವುಗಳ ತುದಿಗಳನ್ನು ಮೇಲಿದ್ದವರಿಗೆ ಮುಟ್ಟಿಸಿದರು. ಮೇಲಿದ್ದವರು ಜಾಗ್ರತೆಯಿಂದ ಹಗ್ಗವನ್ನು ಎಳೆದು ವ್ಯಕ್ತಿಯನ್ನು ಮೇಲಕ್ಕೆ ತಂದರು. ಕೆಳಗಿಳಿದ ಸ್ಕೌಟು ಬಾಲಕರು ಹಗ್ಗದ ಸಹಾಯದಿಂದ ಮೇಲಕ್ಕೆ ಬಂದರು. ಬಳಿಕ ವ್ಯಕ್ತಿಯನ್ನು ಹಗ್ಗದಿಂದ ಬಿಡಿಸಿ ಕವುಚಿ ಮಲಗಿಸಿದರು. ಒಬ್ಬನು ಅವನ ಹೊಟ್ಟೆಯ ಭಾಗದಲ್ಲಿ ಕ್ರಮವಾಗಿ ಒತ್ತ ತೊಡಗಿದನು. ಸ್ವಲ್ಪ ಹೊತ್ತಿನ ಮೇಲೆ ಅವನ ಬಾಯಿಂದ ನೀರು ಹೊರಗೆ ಬಂತು. ಕೂಡಲೇ ಆ ವ್ಯಕ್ತಿಯ ಶ್ವಾಸೋಚ್ಛ್ವಾಸ ಸರಿಯಾಗುವಂತೆ ಅವನ ಎದೆಯ ಎರಡು ಪಕ್ಕಗಳನ್ನು ಕ್ರಮದಿಂದ ಒತ್ತ ತೊಡಗಿದರು. ಶ್ವಾಸೋಚ್ಛ್ವಾಸ ಸರಿ ಆಯಿತು. ಕೂಡಲೆ ಸ್ಕೌಟುಗಳಿಬ್ಬರು ತಮ್ಮ ದಂಡಗಳನ್ನು ಎದುರುಬದುರಾಗಿ ಇಟ್ಟು ಅವುಗಳ ಮೇಲೆ ತಮ್ಮ ಅಂಗಿಗಳನ್ನು ಹೊದಿಸಿ ಆ ವ್ಯಕ್ತಿಯನ್ನು ಮಲಗಿಸಿ ನೆರೆದವರ ಸಹಾಯದಿಂದ ಸಮೀಪದ ಡಾಕ್ಟರ್ ಬಳಿಗೆ ಕರೆದೊಯ್ದರು.

ಅಂದು ರಮೇಶನು ಬೆಳಗಿನ ಹೊತ್ತಿಗೆ ಶಾಲೆಯ ಬಳಿ ತಲುಪಿದ್ದನು. ಸಮವಸ್ತ್ರ ಧರಿಸಿದ ಸ್ಕೌಟು ಬಾಲಕರು ಪದ್ಯವನ್ನು ಹಾಡುತ್ತ ಶಾಲೆಯ ಕಡೆ ಬಂದುದನ್ನು ನೋಡಿದ್ದನು. ಅಲ್ಲಿ ಶಾಲಾ ಮುಖ್ಯೋಪಾಧ್ಯಾಯರು ಸ್ಕೌಟುಗಳಿಗೆ ತಂಗಲು ಸ್ಥಳವನ್ನು ಏರ್ಪಾಡು ಮಾಡಿದ್ದರು. ಸ್ಕೌಟು ಅಧ್ಯಾಪಕರು ಅವರನ್ನು ಮೂರು ಪಂಗಡಗಳಾಗಿ ವಿಭಾಗಿಸಿದ್ದರು. ಎಂಟೆಂಟು ಸ್ಕೌಟುಗಳ ಒಂದೊಂದು ಪಂಗಡಕ್ಕೆ ಸ್ಥಳವನ್ನು ನಿಗದಿಪಡಿಸಿ ಆ ಸ್ಥಳದಲ್ಲಿ ತಂದ ಸಾಮಾನುಗಳನ್ನು ಕ್ರಮವಾಗಿ ತೆರೆದಿಡಲು ಹೇಳಿದ್ದರು. ಉಪಾಧ್ಯಾಯರ ನಿರ್ದೇಶನದಂತೆ ತಾವು ತಂದ ಅಕ್ಕಿ,ಬೇಳೆ, ತರಕಾರಿಗಳನ್ನು ತೆಗೆದುಕೊಂಡು ಅಡುಗೆ ತಯಾರು ಮಾಡಿದ್ದರು.

ಸ್ಕೌಟು ಉಪಾಧ್ಯಾಯರು ಸ್ಕೌಟು ಬಾಲಕರ ನಾಯಕರನ್ನು ಬಿಗಿಲು ಊದಿ ಆಗಾಗ ಕರೆಯುತ್ತಿದ್ದರು. ಬಿಗಿಲಾದೊಡನೆ ಸ್ಕೌಟು ನಾಯಕರು ಓಡಿಬಂದು ಅಧ್ಯಾಪಕರಿಗೆ ವಂದಿಸಿ ನೆಟ್ಟಗೆ ನಿಂತು ಅಪ್ಪಣೆ ಪಡೆಯುತ್ತಿದ್ದರು. ನಿರ್ದೇಶನ ಪಡೆದೊಡನೆ  ಪುನಃ ವಂದಿಸಿ ತಮ್ಮ ಪಂಗಡವನ್ನು ಸೇರುತ್ತಿದ್ದರು. ಇಷ್ಟು ಅಚ್ಚುಕಟ್ಟಾಗಿ ಅವ್ಯವಸ್ಥೆ ಇಲ್ಲದೆ ಕೆಲಸ ಮಾಡುತ್ತಿರುವ ಸ್ಕೌಟುಗಳ ಶಿಸ್ತನ್ನು ಕಂಡು ರಮೇಶನು  ಬೆರಗಾಗಿ ಅವರನ್ನೇ ನೋಡುತ್ತಿದ್ದನು. ರಮೇಶನು ಆಶ್ಚರ್ಯದಿಂದ ಅವರ ಕೆಲಸಗಳನ್ನು ದಿಟ್ಟಿಸಿ ನೋಡುವುದನ್ನು ತಿಳಿದ ಸ್ಕೌಟು ಅಧ್ಯಾಪಕರು ಅವನನ್ನು ಪರಿಚಯ ಮಾಡಿಕೊಂಡರು. ಬಳಿಕ ರಮೇಶನು ಅವರ ಗೆಳೆಯನಾಗಿ, ಊಟ, ತಿಂಡಿ ಎಲ್ಲಾ ಅವರೊಂದಿಗೆ ಮುಗಿಸಿದನು. ಮಾತ್ರವಲ್ಲದೆ ಅವರ ಚಟುವಟಿಕೆಗಳಾದ ಹಗ್ಗದಲ್ಲಿ ಗಂಟುಗಳನ್ನು ಬಿಗಿಯುವುದು, ಅವುಗಳ ಉಪಯೋಗ, ದಂಡದ ಉಪಯೋಗ, ಧ್ವಜವನ್ನು ಹಾರಿಸುವ ಕ್ರಮ, ಗಾಯಗೊಂಡವರನ್ನು ಶುಶ್ರೂಷೆ ಮಾಡುವ ಕ್ರಮಗಳನ್ನೆಲ್ಲಾ ವೀಕ್ಷಿಸಿದನು. ಈಗಾಗಲೇ ಸ್ಕೌಟು ಬಾಲಕರ ಕಾರ್ಯ ಚಟುವಟಿಗಳನ್ನೆಲ್ಲ ವೀಕ್ಷಿಸಿದ ರಮೇಶನಿಗೆ ಬಾವಿಗೆ ಬಿದ್ದು ಸಾಯುತ್ತಿದ್ದ ವ್ಯಕ್ತಿಯೊಬ್ಬನನ್ನು ಉಳಿಸಿದ ರೀತಿಯನ್ನು ಕಂಡು ಆಶ್ಚರ್ಯವೂ ಸ್ಕೌಟುಗಳ ಮೇಲೆ ಅಭಿಮಾನವೂ ಉಂಟಾಯಿತು.



ವ್ಯಕ್ತಿ ಬಾವಿಗೆ ಬಿದ್ದ ಪ್ರಕರಣದಿಂದಾಗಿ 9 ಗಂಟೆಗೆ ನಡೆಯಬೇಕಾಗಿದ್ದ ಕಾರ್ಯಕ್ರಮ ಅರ್ಧ ಗಂಟೆ ತಡವಾಗಿ ಆರಂಭವಾಯಿತು. ಪಂಚಾಯತು ಅಧ್ಯಕ್ಷರು ಶಿಬಿರಾಗ್ನಿ ಸಮಾರಂಭದ ಅಧ್ಯಕ್ಷರಾಗಿದ್ದರು. ಸ್ಕೌಟುಗಳೆಲ್ಲ ವೃತ್ತಾಕಾರದಲ್ಲಿ ಕುಳಿತುಕೊಂಡರು. ಮಧ್ಯೆ ಗೋಪುರಾಕೃತಿಯಲ್ಲಿ ಕಟ್ಟಿಗೆಯನ್ನು ಇಟ್ಟಿದ್ದರು. ಬಿಗಿಲು ಊದಿದ ಮೇಲೆ ಕಾರ್ಯಕ್ರಮ ಪ್ರಾರಂಭವಾಯಿತು. ಒಬ್ಬೊಬ್ಬ ಸ್ಕೌಟು, ಉರಿಯುವ ಒಂದೊಂದು ಕೊಳ್ಳಿ ಹಿಡಿದುಕೊಂಡಿದ್ದರು. ಪ್ರತಿಯೊಬ್ಬರೂ ಒಂದೊಂದು ಸ್ಕೌಟು ನಿಯಮವನ್ನು ಉಚ್ಚರಿಸಿ ಒಂದೊಂದು ಕೊಳ್ಳಿಯನ್ನು ಕಟ್ಟಿಗೆಯ ರಾಶಿಗೆ ಇಟ್ಟರು. ಹತ್ತು ವಿಧಿಗಳನ್ನೂ ಉಚ್ಚರಿಸಿ ಕೊಳ್ಳಿಗಳನ್ನು ಇಟ್ಟಾಗ ಶಿಬಿರಾಗ್ನಿಯು ಪ್ರಜ್ವಲಿಸಿ ಉರಿಯತೊಡಗಿತು. ರಮೇಶನ ಶಾಲೆಯ ಮುಖ್ಯೋಪಾಧ್ಯಾಯರು ಈ ಶಿಬಿರಾಗ್ನಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸ್ಕೌಟು ಬಾಲಕರು ಒಂದಾಗಿ 'ಶಿಬಿರಾಗ್ನಿ ಪ್ರಜ್ವಲಿಸುತಿದೆ ಇಂದು' ಎಂಬ ಪದ್ಯವನ್ನು ಹಾಡಿದರು. ಬೆಂಕಿಯ ಜ್ವಾಲೆಯು ಮೇಲೆದ್ದು ಪ್ರಕಾಶ ಕೊಡುವಂತೆ ಸತ್ಕರ್ಮಗಳು ಬೆಳಗಿ ಪ್ರಕಾಶಮಾನವಾಗಲಿ ಎಂದೂ, ಬೆಂಕಿ ಉರಿದಾದ ಬಳಿಕ ಬೂದಿಯು ಕೆಳಗೆ ಬೀಳುವಂತೆ ದುಷ್ಟವಾದವುಗಳೆಲ್ಲವೂ ಉರಿದು ಬೂದಿಯಾಗಲಿ ಎಂದೂ ಆ ಪದ್ಯದ ಅರ್ಥವಾಗಿತ್ತು. ಆ ಮೇಲೆ ಸ್ಕೌಟು ಬಾಲಕರ ನಾನಾ ರೀತಿಯ ಚಟುವಟಿಕೆಗಳು ಆರಂಭವಾದವು.



ಶಾಂತಿ ಕಾಲದಲ್ಲಿಯೂ ಇದೇ ರೀತಿ ಧೈರ್ಯ ಸಾಹಸಗಳನ್ನು ತೋರಿಸುವವರು ಸ್ಕೌಟುಗಳೆಂದು ಕರೆಯಲ್ಪಡುತ್ತಾರೆ. ದಕ್ಷಿಣ ಆಫ್ರಿಕದ ಮೇಫ್ ಕಿಂಗ್ ಎಂಬಲ್ಲಿ ಯುದ್ಧ ನಡೆದಾಗ ಬಾಲಕರು ಜೀವರಕ್ಷಣೆಗೆ ಮತ್ತು ಗಾಯಾಳುಗಳ ಶುಶ್ರೂಷೆಗೆ ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ನೆರವಾದರು. ಅವರ ಈ ಸಾಹಸದಿಂದ ಸ್ಫೂರ್ತಿಗೊಂಡ ಲಾರ್ಡ್ ಬೇಡನ್ ಪವೆಲ್ ಎಂಬೊಬ್ಬ ಸೈನಿಕ ಮೇಧಾವಿಯು ಮಕ್ಕಳನ್ನು ಸಾಹಸಮಯವಾದ ಸತ್ಕಾರ್ಯಗಳಲ್ಲಿ ಹಚ್ಚುವುದಕ್ಕಾಗಿ ಈ ಸ್ಕೌಟು ಚಳುವಳಿ ಯನ್ನು ಪ್ರಾರಂಭಿಸಿದನು. ಈ ಚಳುವಳಿಯು ಜಗತ್ತಿನಾದ್ಯಂತ ಹರಡಿ ಲಕ್ಷೋಪಲಕ್ಷ ಮಕ್ಕಳಿಗೆ ಹಿತಕರವಾದ ಚಟುವಟಿಕೆಗಳನ್ನು ಒದಗಿಸಿತು. ಇದೇ ರೀತಿಯಲ್ಲಿ ಬಾಲಕಿಯರಿಗೆ ಗೈಡು ದಳಗಳಿವೆ. ಇವು ವಿಶ್ವದಲ್ಲೆಲ್ಲ ಬಾಲಕ ಬಾಲಕಿಯರ ಸಂಸ್ಥೆಗಳಾಗಿ ಬೆಳೆದಿರುತ್ತವೆ.

ಸ್ಕೌಟುಗಳು ಹೇಗಿರುತ್ತಾರೆ ಗೊತ್ತೇ? ಎಂತಹ ಸ್ಥಳದಲ್ಲೂ ಅವರು ಬದುಕಬಲ್ಲರು. ಕಾಡುಗಳಲ್ಲಿಯೂ ಜೀವಿಸಲು ಶಕ್ತರು. ಅವರು ತಮ್ಮ ದಾರಿಯನ್ನು ತಾವೇ ಕಂಡುಕೊಳ್ಳಬಲ್ಲರು. ಹೆಜ್ಜೆಗಳ ಗುರುತುಗಳನ್ನು ತಿಳಿದು ವಿಷಯವನ್ನು ಸಂಶೋಧಿಸಬಲ್ಲರು. ವೈದ್ಯರಿಲ್ಲದ ಸ್ಥಳದಲ್ಲಿಯೂ ಅವರು ಆರೋಗ್ಯವಂತರಾಗಿ ಜೀವಿಸಬಲ್ಲರು. ಆಪತ್ತಿಗೊಳಗಾದವರನ್ನು ರಕ್ಷಿಸಬಲ್ಲರು. ಬುದ್ದಿವಂತರೂ ದೃಢಕಾಯರೂ ಆಗಿದ್ದು ಎಂತಹ ಅಪಾಯಗಳನ್ನೂ ಎದುರಿಸಲು ಅವರು ಸಿದ್ಧರು. ತಮ್ಮ ಪ್ರಾಣಾಪಾಯವನ್ನು ಕೂಡಾ ಲೆಕ್ಕಿಸದೆ ಇತರರಿಗೆ ಸಹಾಯ ಮಾಡುವುದು ತಮ್ಮ ಕರ್ತವ್ಯವೆಂದು ಪರಿಗಣಿಸುವರು. ಈಗ ತಾನೇ ನೋಡಿದಂತೆ ಬಾವಿಗೆ ಬಿದ್ದವನನ್ನು ರಕ್ಷಿಸುವ ಕೆಲಸವನ್ನು ನಮ್ಮ ಸ್ಕೌಟುಗಳು ವ್ಯವಸ್ಥೆಯಿಂದ ಮಾಡಿದರು. ಸ್ಕೌಟುಗಳಲ್ಲದವರಿಗೆ ಇದು ಸಾಧ್ಯವೇ?

ಸ್ಕೌಟು ಚಟುವಟಿಕೆಗಳು ಮಕ್ಕಳಿಗೆ ಆಟಗಳ ಮೂಲಕ, ಪ್ರತ್ಯಕ್ಷ ಜೀವನದ ಮೂಲಕ ಉಪಯುಕ್ತ ಅನುಭವಗಳನ್ನು ಒದಗಿಸುತ್ತವೆ. ಸ್ಕೌಟು ದಳಕ್ಕೆ ಸೇರಿದ ಮಕ್ಕಳು ಈಶ ಸೇವೆ, ದೇಶಸೇವೆಗಳನ್ನು ಮಾಡುತ್ತೇವೆ ಎಂದೂ, ಸ್ಕೌಟು ನಿಯಮಗಳನ್ನು ಸದಾ ಪಾಲಿಸುತ್ತೇವೆ ಎಂದೂ ಪ್ರಮಾಣ ವಚನ ಸ್ವೀಕರಿಸುತ್ತಾರೆ. 'ಸದಾ ಸಿದ್ಧರಾಗಿರುವುದು' ಅವರ ಧ್ಯೇಯ. ಆದುದರಿಂದ ಇಂತಹ ಉತ್ತಮ ಕಾರ್ಯಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ರಾಷ್ಟ್ರ ಸೇವೆಗೆ ಬೇಕಾದ ಮನಸ್ಸು ಮತ್ತು ಯೋಗ್ಯತೆಗಳನ್ನು ಉಂಟುಮಾಡುವುದಕ್ಕೆ ಮಕ್ಕಳನ್ನು ಸ್ಕೌಟು ದಳಕ್ಕೆ ಸೇರಿಸಬೇಕು. ಪ್ರತಿ ಶಾಲೆಯಲ್ಲಿ ಸ್ಕೌಟು ದಳಗಳನ್ನು ತೆರೆಯಬೇಕು. ಅಲ್ಲಿ ನೆರೆದ ಜನರಿಗೆ ಸ್ಕೌಟು ಅಧ್ಯಾಪಕರು ಸ್ಕೌಟ್ ಚಳುವಳಿಯ ಕುರಿತಾಗಿ ಈ ರೀತಿಯಾಗಿ ತಿಳಿಸಿದರು.

ಕೊನೆಗೆ ಪಂಚಾಯತು ಅಧ್ಯಕ್ಷರು ಮಾತನಾಡುತ್ತಾ ಸಮವಸ್ತ್ರಧಾರಿಗಳಾದ ಸ್ಕೌಟುಗಳು ಪ್ರವಾಸಗಳನ್ನು ಮಾಡಿ ಶಿಬಿರಗಳನ್ನು ಹೂಡಿ, ಅಡುಗೆ ತಯಾರಿಸಿ ಜಾತಿಭೇದವನ್ನು ಮರೆತು ಒಂದಾಗಿ ಬಾಳುತ್ತಾರೆ. ಇತರರಿಗೆ ಸಹಾಯ ಮಾಡುವುದು ಅವರ ಮೊದಲನೆಯ ಧರ್ಮ. ನಕ್ಷತ್ರಗಳ ಪರಿಶೀಲನೆ, ಪ್ರಕೃತಿ ಪರಿಶೀಲನೆ, ಭೂಪಟಗಳ ಮೂಲಕ ದಾರಿಗಳನ್ನು ಕಂಡುಹಿಡಿಯುವುದು, ಈಜುವುದು, ಪ್ರಥಮ ಚಿಕಿತ್ಸೆ ಕೊಡುವುದು, ಹಗ್ಗಗಳ ಉಪಯೋಗ, ದಂಡಗಳ ಉಪಯೋಗ, ಮರ ಕಡಿಯುವ ರೀತಿ, ಉಪಯುಕ್ತ ವಸ್ತುಗಳನ್ನು ತಯಾರಿಸುವ ರೀತಿ - ಮುಂತಾದುವುಗಳನ್ನು ಸ್ಕೌಟುಗಳೂ, ಗೈಡುಗಳೂ ಕಲಿಯುತ್ತಾರೆ ಎಂದರು. ಬಾವಿಗೆ ಬಿದ್ದು ಸಾಯಲಿದ್ದ ಮನುಷ್ಯನನ್ನು ಉಳಿಸಿದ ಸ್ಕೌಟು ದಳಕ್ಕೆ ತನ್ನ ಸಂತೋಷವನ್ನೂ ಕೃತಜ್ಞತೆಯನ್ನೂ ಪ್ರಕಟಿಸಿ ಉಪಾಧ್ಯಾಯರೊಡಗೂಡಿದ ಎಲ್ಲ ಸ್ಕೌಟುಗಳೊಂದಿಗೂ ಹಸ್ತ ಲಾಘವವನ್ನು ಮಾಡಿದರು. ಆ ಸಂತೋಷದ ಸಂಬಂಧವಾಗಿ ಎಲ್ಲ ಸ್ಕೌಟು ಬಾಲಕರಿಗೆ ಸಿಹಿತಿಂಡಿಯನ್ನು ಹಂಚಿದರು.

ರಾಷ್ಟ್ರಗೀತೆಯನ್ನು ಹಾಡಿಯಾದ ಮೇಲೆ ಕಾರ್ಯಕ್ರಮ ಮುಕ್ತಾಯವಾಯಿತು. ಶಿಬಿರಾಗ್ನಿಯು ಉರಿದು ಕೆಂಡವಾಗಿ ಬೂದಿಯಾಗತೊಡಗಿತ್ತು. ರಮೇಶನಿಗೆ ಏನೋ ಒಂದು ರೀತಿಯ ಕುತೂಹಲ, ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಬಂದ ತನ್ನ ತಂದೆಯನ್ನು ಕರೆದುಕೊಂಡು ಸ್ಕೌಟು ಮಾಸ್ಟರರ ಪರಿಚಯವನ್ನು ಮಾಡಿಸಿದನು.

ಅವರೊಡನೆ ಸ್ಕೌಟು ನಿಯಮಗಳನ್ನು ತಿಳಿದುಕೊಳ್ಳಬೇಕೆಂಬ ಆಸೆಯನ್ನು ಪ್ರಕಟಿಸಿದನು. ರಾತ್ರಿ ಹೆಚ್ಚಾದುದರಿಂದ ಸ್ಕೌಟು ಉಪಾಧ್ಯಾಯರು ಹೆಚ್ಚು ಸಮಯ ಕಳೆಯದೆ ಸ್ಕೌಟು ನಿಯಮಗಳ ಪಟ್ಟಿಯನ್ನು ಅವನ ಕೈಗಿತ್ತರು. ರಮೇಶನು ಅವರನ್ನು ಬೀಳ್ಕೊಂಡು ಮನೆಗೆ ಬಂದನು. ಸ್ಕೌಟು ನಿಯಮಗಳನ್ನು ಓದಿ ನೋಡುವವರೆಗೂ ಅವನಿಗೆ ನಿದ್ದೆಯೇ ಬರಲಿಲ್ಲ. ಅವನು ಈ ನಿಯಮಗಳನ್ನು ಈ ಕೆಳಗಿನಂತೆ ಓದಿದನು.

## ಸ್ಕೌಟು ನಿಯಮಗಳು

- ಸ್ಕೌಟಿನ ಗೌರವವು ವಿಶ್ವಾಸಾರ್ಹವಾದುದು.
- ಸ್ಕೌಟು ಸ್ವಾಮಿನಿಷ್ಠನು.
- ಸ್ಕೌಟು ದೇವರ ಮತ್ತು ತನ್ನ ದೇಶದ ಸೇವೆ ಮಾಡುವನು. ಇತರರಿಗೆ ಸಹಾಯ ಮಾಡುವುದು ಸದಾ ಅವನ ಕರ್ತವ್ಯ.
- ಸ್ಕೌಟು ಸ್ನೇಹಪರನು, ದೇಶ, ಜಾತಿ, ಮತ ಭೇದಗಳಿಲ್ಲದೆ ಇತರ ಎಲ್ಲ ಸ್ಕೌಟುಗಳೊಡನೆ ಸಹೋದರನಂತೆ ವರ್ತಿಸುವನು.
- ಸ್ಕೌಟು ವಿನಯವಂತನು.
- ಸ್ಕೌಟು ಪ್ರಾಣಿಗಳಲ್ಲಿ ದಯೆಯುಳ್ಳವನು.
- ಸ್ಕೌಟು ಶಿಸ್ತು ಪಾಲಕನು ಮತ್ತು ಆಜ್ಞಾಧಾರಕನು.
- ಸ್ಕೌಟು ಎಂತಹ ಕಷ್ಟಕಾಲದಲ್ಲಿಯು ಧೈರ್ಯವಂತನಾಗಿದ್ದು ಸದಾ ಹಸನ್ಮುಖಿಯಾಗಿರುವವನು.
- ಸ್ಕೌಟು ಮಿತವ್ಯಯಿ
- ಸ್ಕೌಟು ಕಾಯೇನ ವಾಚಾ ಮನಸಾ ಪರಿಶುದ್ಧನು.

ಸ್ಕೌಟಿನ ಈ ನಿಯಮಗಳನ್ನು ಓದಿದ ರಮೇಶನು ತಾನು ಶಾಲೆಯಲ್ಲಿ ಸ್ಕೌಟು ದಳಕ್ಕೆ ಸೇರಿ ಉತ್ತಮ ಸ್ಕೌಟಾಗಬೇಕೆಂದು ನಿರ್ಧರಿಸಿಕೊಂಡು ಮಲಗಿ ನಿದ್ದೆ ಹೋದನು.

## ಚಟುವಟಿಕೆಗಳು

### ಉತ್ತರಿಸಿರಿ

1. ಸ್ಕೌಟು ದಳದವರು ಶಿಬಿರದ ಕೊನೆಯಲ್ಲಿ ನಡೆಸಿದ ಕಾರ್ಯಕ್ರಮ ಯಾವುದು?
2. ಸ್ಕೌಟು ಚಳುವಳಿಯನ್ನು ಪ್ರಾರಂಭಿಸಿದವರು ಯಾರು?
3. ಸ್ಕೌಟುಗಳ ಧ್ಯೇಯ ಯಾವುದು?
4. ರಮೇಶನು ಸ್ಕೌಟು ಬಾಲಕರೊಡನೆ ಬೆರೆತು ಯಾವ ಚಟುವಟಿಕೆಗಳನ್ನು ನಿರೀಕ್ಷಿಸಿದನು?
5. ಸ್ಕೌಟುಗಳು ಬಾವಿಗೆ ಬಿದ್ದವನನ್ನು ಹೇಗೆ ರಕ್ಷಿಸಿದರು?
6. ರಮೇಶನು ತಾನು ಉತ್ತಮ ಸ್ಕೌಟು ಆಗಬೇಕೆಂದು ನಿರ್ಧರಿಸಲು ಕಾರಣವಾದ ಸ್ಕೌಟಿನ ನಿಯಮಗಳು ಯಾವುದು?

### ಲಿಖಿತ ಭಾಷಣ ತಯಾರಿಸಿರಿ

ನಿಮ್ಮ ಶಾಲೆಯ ಸಾಹಿತ್ಯ ಸಭೆಯಲ್ಲಿ ಭಾಷಣ ಮಾಡುವುದಕ್ಕಾಗಿ “ಸಾರ್ವಜನಿಕ ಸ್ವತ್ತುಗಳ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ” ಎಂಬ ವಿಷಯದ ಕುರಿತು ಮಾಹಿತಿ ಸಂಗ್ರಹಿಸಿ ಒಂದು ಲಿಖಿತ ಭಾಷಣವನ್ನು ಸಿದ್ಧಪಡಿಸಿರಿ.

### ವಿವರಣೆ ಬರೆಯಿರಿ

ಆವರಣವಿಲ್ಲದ ಬಾವಿಗೆ ಬಿದ್ದ ಬಾಲಕನನ್ನು ಸ್ಕೌಟುಗಳು ಪ್ರಾಣಾಪಾಯದಿಂದ ರಕ್ಷಿಸಿದ ಬಗೆಯನ್ನು ನೀವು ಓದಿದಿರಲ್ಲವೇ? ಈ ರೀತಿಯ ಪೌರ ಪ್ರಜ್ಞೆಯನ್ನು ಮೆರೆದ ಘಟನೆಗಳು ನಿಮ್ಮ ಪರಿಸರದಲ್ಲಿಯೂ ನಡೆದಿರಬಹುದಲ್ಲವೇ? ಇಂತಹ ಒಂದು ಘಟನೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ ಬರೆಯಿರಿ.

### ಪರ್ಯಾಯ ಪದಗಳು

ಕೆಳಗೆ ಕೊಟ್ಟಿರುವ ಶಬ್ದಗಳಿಗೆ ಪರ್ಯಾಯ ಪದಗಳನ್ನು ಬರೆಯಿರಿ.

- ಆಶ್ಚರ್ಯ -
- ಶುಶ್ರೂಷೆ - -
- ಸೈನಿಕ -
- ತಾಣ -

## ಪತ್ರಿಕಾ ವರದಿ ತಯಾರಿಸಿರಿ

ಸ್ಕೌಟು ಶಿಬಿರದ ಆಮಂತ್ರಣ ಪತ್ರಿಕೆಯೊಂದನ್ನು ಕೆಳಗೆ ಕೊಡಲಾಗಿದೆ. ಇದರ ಆಧಾರದಲ್ಲಿ ಪತ್ರಿಕಾ ವರದಿಯನ್ನು ಬರೆಯಿರಿ.

### ಸ್ಕೌಟು ಶಿಬಿರದ ಕರೆಯೋಲೆ

ಸ್ಥಳ : ಪಿಲಿಕುಳ
ದಿನಾಂಕ : 01-01-2025

ಪ್ರಿಯರೇ,

ಇದೇ ಬರುವ ತಾರೀಕು 16.02.2025 ನೇ ಆದಿತ್ಯವಾರ ಪಂಚಾಯತು ಮಟ್ಟದ ಸ್ಕೌಟು ಶಿಬಿರದ ಉದ್ಘಾಟನಾ ಕಾರ್ಯಕ್ರಮವು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಿಲಿಕುಳದಲ್ಲಿ ಜರಗಲಿದೆ. ಈ ಕಾರ್ಯಕ್ರಮಕ್ಕೆ ಪ್ರೀತಿ ಪೂರ್ವಕವಾಗಿ ತಮ್ಮೆಲ್ಲರನ್ನು ಆಮಂತ್ರಿಸುತ್ತಿದ್ದೇವೆ.

ಇತಿ,

ಅಧ್ಯಕ್ಷರು ಮತ್ತು ಸದಸ್ಯರು
ರಕ್ಷಕ ಶಿಕ್ಷಕ ಸಂಘ

ಮುಖ್ಯೋಪಾಧ್ಯಾಯರು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಪಿಲಿಕುಳ

#### ಸಭಾ ಕಾರ್ಯಕ್ರಮ

| | | |
|---|---|---|
| ಪ್ರಾರ್ಥನೆ | : | ಶಾಲಾ ವಿದ್ಯಾರ್ಥಿನಿಯರಿಂದ |
| ಸ್ವಾಗತ | : | ಶ್ರೀ ಮನೋಹರ, ಶಾಲಾ ಮುಖ್ಯೋಪಾಧ್ಯಾಯರು |
| ಅಧ್ಯಕ್ಷತೆ | : | ಶ್ರೀಮತಿ ಮರೀನಾ ಡಿ ಸೋಜ, ವಾರ್ಡ್ ಸದಸ್ಯರು |
| ಉದ್ಘಾಟನೆ | : | ಶ್ರೀಮತಿ ಜಮೀಲ, ಪಂಚಾಯತ್ ಅಧ್ಯಕ್ಷರು |
| ಶುಭಹಾರೈಕೆ | : | ಶ್ರೀ ಅಬ್ದುಲ್ ಗಫೂರ್, ಪಿ.ಟಿ.ಎ. ಅಧ್ಯಕ್ಷರು |
| ಧನ್ಯವಾದ | : | ಶ್ರೀ ಮೋಹನ, ಸ್ಕೌಟು ಕಾರ್ಯದರ್ಶಿ |



*ಸರ್ವರಿಗೂ ಆದರದ ಸ್ವಾಗತ*

## ಲೇಖನ ಚಿಹ್ನೆ

ಕೆಳಗೆ ಕೊಟ್ಟ ಗದ್ಯ ಭಾಗಕ್ಕೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಸೇರಿಸಿ ಬರೆಯಿರಿ.

ಹುರಿಗಾಳು ಚಕ್ಲಿ ವಡೆ ಎಲ್ಲ ತಾಜಾ ಇವೆ ಬೇಕೆ ಸೋಮಿ ತಟ್ಟನೆ ಕೇಳಿಸಿದ ದನಿಗೆ ಬೆಚ್ಚಿ ತಿರುಗಿದರೆ ಅದೇ ಮುದುಕ ಕುರುಕಲು ತಿಂಡಿ ಹೊತ್ತು ಮಾರುವ ಆತನನ್ನು ಈ ಮೊದಲು ಮಾಧವ ಕಂಡಿದ್ದ ಕೆಲವೊಮ್ಮೆ ಅವನ್ನು ಕೊಂಡೂ ಇದ್ದ ಆದರೆ ಈಗ ಕಾಸೇ ಇರಲಿಲ್ಲವಲ್ಲ ಹಾಗೆಂದೆ ಬರಿದೆ ತಲೆ ಆಡಿಸಿದ ಆದರೆ ವೃದ್ಧ ಮತ್ತೆ ಒತ್ತಾಯಿಸಿದಾಗ ಮಾತ್ರ ಏನನ್ನಿಸಿತೊ ತಟ್ಟನೆ ಹೇಳಿಬಿಟ್ಟ ವಿಷ ಕುಡಿಯಲೂ ಕೈಲಿ ಕಾಸಿಲ್ಲ

### ಲೇಖನ ಚಿಹ್ನೆಗಳು

ಬರೆವಣಿಗೆಯಲ್ಲಿ ಲೇಖನ ಚಿಹ್ನೆಗಳು ಅತ್ಯಂತ ಮಹತ್ವವನ್ನು ಪಡೆಯುತ್ತವೆ. ಮಾತಿನಲ್ಲಿ ಧ್ವನಿಯ ಏರಿಳಿತಗಳ ಮೂಲಕ ನಮ್ಮ ಭಾವನೆಗಳನ್ನು ಸ್ಪಷ್ಟವಾಗಿ ತಿಳಿಸಬಹುದು. ಅದೇರೀತಿ ಲೇಖನ ಚಿಹ್ನೆಗಳ ಮೂಲಕ ಬರವಣಿಗೆಯಲ್ಲಿ ನಮ್ಮ ಭಾವನೆಗಳನ್ನು ಸ್ಪಷ್ಟವಾಗಿ ತಿಳಿಸಬಹುದಾಗಿದೆ.

ಪೂರ್ಣವಿರಾಮ(.) - ಕ್ರಿಯೆಯಿಂದ ಪೂರ್ಣಗೊಂಡ ವಾಕ್ಯದ ಕೊನೆಯಲ್ಲಿ ಚಿಹ್ನೆಯನ್ನು ಬಳಸಬೇಕು

ಅರ್ಧವಿರಾಮ(;) - ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗುವ ಉಪವಾಕ್ಯಗಳ ಕೊನೆಯಲ್ಲಿ ಅರ್ಧವಿರಾಮವನ್ನು ಬಳಸಲಾಗುತ್ತದೆ.

ಅಲ್ಪವಿರಾಮ(,) - ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆ ಬೇರೆ ವಿಶೇಷಣಗಳನ್ನು ನೀಡಿದಾಗ ಅಲ್ಪವಿರಾಮವನ್ನು ಬಳಸಲಾಗುತ್ತದೆ.

ಪ್ರಶ್ನಾರ್ಥಕ(?) - ಪ್ರಶ್ನೆ ರೂಪದ ಪದ ಮತ್ತು ವಾಕ್ಯಗಳ ಮುಂದೆ ಬಳಸುವ ಚಿಹ್ನೆ ಇದಾಗಿದೆ

| | | |
|---|---|---|
| ಭಾವಸೂಚಕ(!) | - | ಅಚ್ಚರಿ, ಖೇದ, ಸಂತೋಷ, ವಿಷಾದ ಇತ್ಯಾದಿ ಭಾವಗಳನ್ನು ಸೂಚಿಸುವ ಸಂದರ್ಭಗಳಲ್ಲಿ ಭಾವಸೂಚಕ ಚಿಹ್ನೆ ಬಳಸಬೇಕು. |
| ಉದ್ಧರಣ(“ ”) | - | ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು. |
| ಆವರಣ ಚಿಹ್ನೆ () | - | ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ. |
| ವಿವರಣ ಚಿಹ್ನೆ(:) | - | ಒಂದು ಅಭಿಪ್ರಾಯದ ವಿವರಣೆಯನ್ನು ನೀಡುವಾಗ ಈ ಚಿಹ್ನೆಯನ್ನು ಬಳಸಬೇಕು |

*****

# ಪದಕೋಶ

| | | |
|---|---|---|
| ಅಡ್ಡ ಬೀಳು | - | ನಮಸ್ಕರಿಸು |
| ಅತಿಥಿ | - | ನೆಂಟ |
| ಅಂಧಕಾರ | - | ದಟ್ಟವಾದ ಕತ್ತಲೆ |
| ಅನಿವಾರ್ಯ | - | ಆವಶ್ಯಕ |
| ಅಪ್ಪಣೆ | - | ಆಜ್ಞೆ, ಆದೇಶ, ಅನುಮತಿ, ಒಪ್ಪಿಗೆ |
| ಅಮಾಯಕ | - | ಮುಗ್ಧ ಸ್ವಭಾವದ ವ್ಯಕ್ತಿ |
| ಅವಯವ | - | ಅಂಗಾಂಗ |
| ಅವಿವೇಕ | - | ವಿವೇಕವಿಲ್ಲದಿರುವುದು |
| ಅವ್ಯವಸ್ಥೆ | - | ವ್ಯವಸ್ಥೆ ಇಲ್ಲದಿರುವುದು |
| ಆಜ್ಞಾಧಾರಕ | - | ಆದೇಶವನ್ನು ನೀಡುವವನು |
| ಆಪತ್ತು | - | ತೊಂದರೆ |
| ಆರಂಭ ಶೂರ | - | ಕೆಲಸ ಕೊನೆಗಾಣಿಸದವನು |
| ಆವರಣ | - | ಸುತ್ತು ಗೋಡೆ, ಹೊದಿಕೆ |
| ಆಶಯ | - | ಮನಸ್ಸಿನ ಭಾವ, ಅಭಿಪ್ರಾಯ |
| ಆಶ್ಚರ್ಯ | - | ವಿಸ್ಮಯ, ಅಚ್ಚರಿ, ಬೆರಗು |
| ಆಸಕ್ತಿ | - | ಮೋಹ, ಶ್ರದ್ಧೆ |
| ಆಸನ | - | ಕುಳಿತುಕೊಳ್ಳಲು ಉಪಯೋಗಿಸುವ ಪೀಠ |
| ಆಸರಿಗೆ | - | ದಣಿವಿಗೆ, ಬಳಲಿಕೆಗೆ, ದಾಹಕ್ಕೆ |
| ಆಸರೆ | - | ಆಶ್ರಯ |
| ಆಸೆಬುರುಕ | - | ಅತಿಯಾಸೆ ಉಳ್ಳವನು, ದುರಾಸೆಗಾರ |
| ಇದಿರುಗೊಳ್ಳು | - | ಸ್ವಾಗತಿಸು |

| | | |
|---|---|---|
| ಉಕ್ಕಿತು | - | ಮೇಲಕ್ಕೆ ಉಬ್ಬು, ಹಿಗ್ಗು |
| ಉಚ್ಚರಿಸು | - | ನುಡಿ |
| ಉತ್ಪತ್ತಿ | - | ಹುಟ್ಟುವಿಕೆ, ಮೂಲ |
| ಉತ್ಪ್ರೇಕ್ಷೆ | - | ಅಧಿಕವಾಗಿ ವರ್ಣಿಸುವುದು, ಅತಿಶಯವಾದ ಮಾತು |
| ಉದ್ಗಾರ | - | ತೇಗು, ಭಾವಾವೇಶದಿಂದ ಕೂಡಿದ ಮಾತು |
| ಉಪದೇಶ | - | ಹಿತವನ್ನು ಹೇಳುವುದು, ತಿಳುವಳಿಕೆ ಹೇಳುವುದು |
| ಉಪಯುಕ್ತ | - | ಉಪಯೋಗಕ್ಕೆ ಬರುವಂತಹ, ಅಗತ್ಯವಾದುದು |
| ಉಲ್ಲಾಸ | - | ಸಂತೋಷ |
| ಒದೆ | - | ಕಾಲಿನಿಂದ ತುಳಿ |
| ಒಲವು | - | ಪ್ರೀತಿ |
| ಒಲುಮೆ | - | ಪ್ರೀತಿ, ಅನುರಾಗ, ದಯೆ |
| ಕಟ್ಟಾಜ್ಞೆ | - | ಕಟ್ಟಪ್ಪಣೆ, ಕಠಿಣವಾದ ಆದೇಶ |
| ಕವುಚು | - | ಹೊದಿಸು, ಆವರಿಸು, ದುರ್ನಾತ, ದುರ್ವಾಸನೆ |
| ಕಳ | - | ಆಟದ ಮೈದಾನ |
| ಕಾಮಧೇನು | - | ಬಯಸಿದ್ದನ್ನು ಕೊಡುವ ದೇವಲೋಕದ ಹಸು |
| ಕುಚೋದ್ಯ | - | ಕುಚೇಷ್ಟೆ, ಅಪಹಾಸ್ಯ |
| ಕುಟುಕು | - | ಕುಕ್ಕು, ತಿವಿ, ತುತ್ತು |
| ಕೂಗಾಟ | - | ಅರಚಾಟ |
| ಕೂಡುವಿಕೆ | - | ಸೇರು |
| ಕೃತಕ | - | ಸ್ವಾಭವಿಕವಲ್ಲದ, ನಿರ್ಮಿಸಿದ, ಕಪಟ |
| ಕೃತಜ್ಞತೆ | - | ಧನ್ಯತೆ/ ಧನ್ಯತಾಭಾವ |
| ಕೆಂಗಣ್ಣು | - | ಕೆಂಪಾದ ಕಣ್ಣುಳ್ಳವನು |
| ಕೊಂಡಾಟ | - | ಹೊಗಳಿಕೆ, ಮುದ್ದಾಟ |

| | | |
|---|---|---|
| ಕೊಳ್ಳಿ | - | ನಿಗಿನಿಗಿ ಉರಿಯುವ ಕಟ್ಟಿಗೆ |
| ಕೋಶ | - | ಕವಚ, ಪೆಟ್ಟಿಗೆ, ನಿಘಂಟು |
| ಗಜ | - | ಆನೆ, ಕರಿ, ಒಂದು ಅಳತೆ |
| ಗಳು | - | ಬಿದಿರುಕೋಲು |
| ಗೇಣಿ | - | ಗುತ್ತಿಗೆ, ಒಪ್ಪಂದ |
| ಗೇಲಿ | - | ತಮಾಷೆ, ಲೇವಡಿ, ಅಪಹಾಸ್ಯ |
| ಘಟಕ | - | ಅಂಗ, ವಿಭಾಗ |
| ಘನತೆ | - | ಗೌರವ |
| ಘೋಷ | - | ಗಟ್ಟಿಯಾದ ಶಬ್ದ, ಕೂಗಿ ಹೇಳುವಿಕೆ |
| ಚಟ | - | ಹವ್ಯಾಸ, ಅಭ್ಯಾಸ, ಚಾಳಿ |
| ಚಣ | - | ಕ್ಷಣ |
| ಚಹರೆ | - | ಲಕ್ಷಣ, ರೀತಿ ,ಚರ್ಯೆ |
| ಚಾಟಿ | - | ಹುರಿ ಅಥವಾ ಚರ್ಮವನ್ನು ಕಟ್ಟಿ ಮಾಡಿದ ಹೊಡೆಯುವ ಸಾಧನ |
| ಚಾತುರ್ಯ | - | ಜಾಣತನ, ಬುದ್ಧಿವಂತಿಕೆ |
| ಚಾಪೆ | - | ಮಂದಲಿಗೆ |
| ಚಾಳಿ | - | ಅಭ್ಯಾಸ, ರೂಢಿ |
| ಚಿಂತೆ | - | ಆಲೋಚನೆ |
| ಚಿಪ್ಪು | - | ತೆಂಗಿನ ಗೆರಟೆ |
| ಚಿಮಿಣಿ | - | ಹೊಗೆ ಹೋಗುವ ನಳಿಕೆ, ದೀಪಕ್ಕೆ ಹಾಕುವ ಗಾಜಿನ ಬುರುಡೆ |
| ಚುರುಕುತನ | - | ಚಾತುರ್ಯದಿಂದ ಕೂಡಿದ |
| ಜನಪ್ರಿಯ | - | ಹೆಸರುವಾಸಿ |

| | | |
|---|---|---|
| ಜಂತು | - | ಸಣ್ಣ ಕ್ರಿಮಿ |
| ಜಂಬ | - | ಗರ್ವ, ಹೆಮ್ಮೆ |
| ಜುಟ್ಟು | - | ಕೂದಲು, ಮುಡಿ, ನವಿಲು ಹುಂಜ ಮುಂತಾದವುಗಳ ತಲೆಯ ಮೇಲಿರುವ ಕೊಟ್ಟು |
| ಜ್ವಾಲೆ | - | ಬೆಂಕಿ, ಅಗ್ನಿ ಶಿಖೆ |
| ತಂಗು | - | ಉಳಕೊಳ್ಳು |
| ತಲ್ಲೀನ | - | ಒಂದೇ ವಿಷಯದಲ್ಲಿ ಆಸಕ್ತನಾಗಿರುವುದು, ಮಗ್ನ |
| ತಾಟಗಿತ್ತಿ | - | ಗಯ್ಯಾಳಿ, ಗಂಡು ಬೀರಿ, ಬಜಾರಿ |
| ತಾರತಮ್ಯ | - | ಹೆಚ್ಚು ಕಡಿಮೆ, ವ್ಯತ್ಯಾಸ |
| ತಾಸು | - | ಒಂದು ಗಂಟೆ |
| ತಿಥಿ | - | ಒಂದು ದಿನದ ಕಾಲಮಾನ |
| ತುಳಿ | - | ಮೆಟ್ಟು |
| ತೇಗು | - | ಢರಕೆ ಹೊಡೆ, ಏಗು, ತಿಂದುಮುಗಿಸು |
| ತೌಡು | - | ನಿಷ್ಪ್ರಯೋಜಕವಾದುದು |
| ದಣಪೆ | - | ದನಕರುಗಳು ಒಳಗೆ ನುಗ್ಗದಂತೆ ಬೇಲಿಗೆ ಅಳವಡಿಸಿರುವ ಬಿದಿರು ಅಥವಾ ಬೊಂಬಿನ ಚೌಕಟ್ಟು, ತಡೆ |
| ದವಡೆ | - | ಕಪೋಲದ ಒಳಭಾಗದಲ್ಲಿರುವ ವಸಡಿನ ಭಾಗ, ದಂತಪೀಠ, ಅವುಡು |
| ದಿಟ್ಟಿಸು | - | ಎವೆಯಿಕ್ಕದೆ ನೋಡು, ದೃಷ್ಟಿಸು |
| ದುರುಪಯೋಗ | - | ಕೆಟ್ಟ ಉದ್ದೇಶಕ್ಕೆ ಬಳಸುವುದು |
| ದುಶ್ಚಟ | - | ಕೆಟ್ಟ ಚಟ |
| ದುಷ್ಟ | - | ನೀಚ, ಕೆಟ್ಟ ಗುಣವುಳ್ಳ |
| ದೃಢ ಕಾಯ | - | ಗಟ್ಟಿ ಮುಟ್ಟಾದ ಶರೀರ |

| | | |
|---|---|---|
| ದೌರ್ಬಲ್ಯ | - | ಬಲಹೀನತೆ, ಅಶಕ್ತತೆ |
| ಧೃತಿಗೆಡು | - | ಧೈರ್ಯ ಗೆಡು |
| ಧ್ಯೇಯ | - | ಉದ್ದೇಶ, ಗುರಿ, ಲಕ್ಷ್ಯ |
| ನಿರರ್ಥಕ | - | ವ್ಯರ್ಥವಾದುದು, ಪ್ರಯೋಜನವಿಲ್ಲದ |
| ನಿರೀಕ್ಷಿಸು | - | ಬಯಸು, ಎದುರು ನೋಡು |
| ನಿರ್ಣಯ | - | ತೀರ್ಮಾನ, ನಿರ್ಧಾರ |
| ನಿರ್ದೇಶನ | - | ಆಜ್ಞೆ, ಆದೇಶ |
| ನಿಶ್ಚಿಂತೆ | - | ಚಿಂತೆಯಿಲ್ಲದಿರುವಿಕೆ |
| ನೈಜ | - | ನಿಜ, ಸ್ವಾಭಾವಿಕವಾದುದು |
| ನೌಕರ | - | ಕೆಲಸಗಾರ |
| ನ್ಯೂನಾತಿರೇಕ | - | ಹೆಚ್ಚು ಕಡಿಮೆ, ಏರು ಪೇರು |
| ಪಂಗಡ | - | ಗುಂಪು, ಸಮೂಹ, ವರ್ಗ |
| ಪಂಚೆ | - | ಉಡುವ ವಸ್ತ್ರ, ದೋತರ |
| ಪಂಥ | - | ಪ್ರತಿಜ್ಞೆ , ಶಪಥ, ಸ್ಪರ್ಧೆ |
| ಪಂದ್ಯ | - | ಸ್ಪರ್ಧೆ |
| ಪಾಲನೆ | - | ರಕ್ಷಿಸು |
| ಪಿಡುಗು | - | ಸಿಡಿಲಿನ ಹಾಗೆ ಸಿಡಿ, ಒಡೆ, ಬಿರಿ, ಅಂಟುಜಾಡ್ಯ |
| ಪುಕ್ಕಟೆ | - | ಬಿಟ್ಟಿಯಾಗಿ, ಉಚಿತವಾಗಿ |
| ಪೆನಾಲ್ಟಿ | - | ಶಿಕ್ಷೆ |
| ಪ್ರಜ್ವಲಿಸು | - | ಪ್ರಕಾಶಮಾನವಾಗಿ ಉರಿಯು, ಪ್ರಕಾಶಿಸು |
| ಪ್ರತ್ಯಕ್ಷ | - | ಕಣ್ಣಿಗೆ ಕಾಣುವ, ದೃಷ್ಟಾಂತ |
| ಪ್ರತ್ಯುತ್ತರ | - | ಮರುನುಡಿ |
| ಪ್ರಮಾಣ ವಚನ | - | ಪ್ರತಿಜ್ಞೆ, ಆಣೆ |

| | | |
|---|---|---|
| ಪ್ರಯಾಣ | - | ಪಯಣ, ಸಂಚಾರ |
| ಪ್ರೋತ್ಸಾಹ | - | ಉತ್ತೇಜನ, ಹುರಿದುಂಬಿಸು |
| ಬಡಾಯಿ | - | ಒಣಹೆಮ್ಮೆ, ಜಂಬ |
| ಬಡಾವಣೆ | - | ಕಟ್ಟಡ, ನಗರ, |
| ಬಾಹುಳ್ಯ | - | ಆಧಿಕ್ಯ, ಹೆಚ್ಚಳ |
| ಬಾಳ್ವೆ | - | ಬದುಕು |
| ಬಿರುಸು | - | ಒರಟು, ಕಠಿಣ, ರಭಸ |
| ಬೀಳ್ಕೊಡು | - | ಕಳುಹಿಸಿಕೊಡು |
| ಬೆಂಗಡೆ | - | ಹಿಂಭಾಗ |
| ಬೆರಗು | - | ಆಶ್ಚರ್ಯ |
| ಭಾವ | - | ಸಹೋದರಿಯ ಗಂಡ, ಅಭಿಪ್ರಾಯ |
| ಭಿನ್ನ | - | ಚೂರು, ತುಂಡು, ಬೇರೆಯಾದ |
| ಮಹಡಿ | - | ಮಾಳಿಗೆ ಮನೆ, ಉಪ್ಪರಿಗೆ, ಅಟ್ಟ |
| ಮಹನೀಯ | - | ಮನ್ನಣೆಗೆ ಪಾತ್ರನಾದವನು, ಶ್ರೇಷ್ಠ |
| ಮಾಸ | - | ಮೂವತ್ತು ದಿನಗಳ ಅವಧಿ, ತಿಂಗಳು |
| ಮಿಳಿತ | - | ಸೇರುವಿಕೆ, ಮಿಶ್ರಣ |
| ಮುಖ ಚರ್ಯೆ | - | ಮುಖದಲ್ಲಿ ತೋರಿ ಬರುವ ಅಭಿವ್ಯಕ್ತಿ, ಮುಖ ಭಾವ |
| ಮುಂಗಡೆ | - | ಮುಂಭಾಗ |
| ಮುನಿಸು | - | ಕೋಪ, ಸಿಟ್ಟು, ಸೇಡು |
| ಮೇಣ | - | ಮಯಣ |
| ಮೇಧಾವಿ | - | ಪಂಡಿತ |
| ಮೇಳೈಸು | - | ಜೊತೆಯಾಗು, ಒಟ್ಟುಗೂಡು, ಗುಂಪು ಸೇರು |
| ಮೋರೆ | - | ಮುಖ |

| | | |
|---|---|---|
| ರಂಜನೆ | - | ಮೆರುಗು, ಕಾಂತಿ, ಶೋಭೆ |
| ಲದ್ದಿ | - | ಆನೆ, ಕುದುರೆಗಳ ಮಲ |
| ಲಾಂದ್ರ | - | ಬೆಳಕು |
| ವಿಪುಲ | - | ಹೆಚ್ಚು, ಜಾಸ್ತಿ, ವಿಶಾಲ, ಬಹಳ |
| ವಿವೇಕ | - | ವಿವೇಚನೆ, ಜ್ಞಾನ, ಅರಿವು |
| ವೃದ್ಧಿ | - | ವಿಕಾಸ, ಏಳಿಗೆ |
| ವೈಷಮ್ಯ | - | ದ್ವೇಷ, ಹಗೆತನ |
| ವ್ಯಂಗ್ಯ | - | ಕೊಂಕು, ಅಣಕ |
| ವ್ಯವಸ್ಥಿತ | - | ಅಚ್ಚುಕಟ್ಟಾದ |
| ವ್ಯವಹಾರ | - | ಕೆಲಸ, ಉದ್ಯೋಗ, ವಹಿವಾಟು |
| ವ್ಯಾಯಾಮ | - | ಅಂಗ ಸಾಧನೆ |
| ಶಂಕೆ | - | ಸಂದೇಹ, ಸಂಶಯ, ಅಳುಕು |
| ಶಕ್ತ | - | ಸಮರ್ಥ |
| ಶಿಬಿರ | - | ಸೈನ್ಯವು ತಾತ್ಕಾಲಿಕವಾಗಿ ಬೀಡು ಬಿಡುವ ಸ್ಥಳ |
| ಶುಶ್ರೂಷೆ | - | ಆರೈಕೆ, ಉಪಚಾರ, ಸೇವೆ |
| ಶೃಂಗಾರ | - | ಅಲಂಕಾರ, ಭೂಷಣ |
| ಸಂಕೀರ್ಣ | - | ಸೇರಿಕೊಂಡಿರುವುದು |
| ಸಂಗ | - | ಒಡನಾಟ |
| ಸಜ್ಜನ | - | ಒಳ್ಳೆಯ ನಡತೆಯವ, ಸತ್ಪುರುಷ |
| ಸತ್ಕರ್ಮ | - | ಸತ್ಕಾರ್ಯ, ಒಳ್ಳೆಯ ಕೆಲಸ |
| ಸತ್ಕಾರ | - | ಉಪಚಾರ, ಗೌರವ |
| ಸಂದಿಗ್ಧ | - | ಜಟಿಲವಾದ ಪರಿಸ್ಥಿತಿ, ಇಕ್ಕಟ್ಟು |
| ಸಮನ್ವಯತೆ | - | ಹೊಂದಾಣಿಕೆ |

| | | |
|---|---|---|
| ಸಮವಸ್ತ್ರ | - | ಏಕರೂಪದ ಉಡುಪು |
| ಸಮೂಹ | - | ಗುಂಪು, ಸಮುದಾಯ |
| ಸರ್ವನಾಶ | - | ಸಂಪೂರ್ಣ ನಾಶ, ಹಾನಿ |
| ಸಂಶೋಧಿಸು | - | ಹೊಸತನ್ನು ಕಂಡು ಹಿಡಿ, ಅನ್ವೇಷಿಸು |
| ಸಂಸ್ಕಾರ | - | ನಾಗರಿಕತೆ, ಸಂಸ್ಕೃತಿ |
| ಸಾಮರ್ಥ್ಯ | - | ದಕ್ಷತೆ, ಯೋಗ್ಯತೆ, ಬಲ, ಸಾಮರ್ಥ್ಯ |
| ಸೀಮೆ | - | ಗಡಿ, ಮೇರೆ, ಪರಿಮಿತಿ |
| ಸುಡುಗಾಡು | - | ಹೆಣಗಳನ್ನು ಸುಡುವ ಸ್ಥಳ, ಮಸಣ |
| ಸುಸ್ಥಿರ | - | ಅಚಲ, ದೃಢವಾದ |
| ಸೂಟೆ | - | ಒಣಗಿದ ತೆಂಗಿನ ಗರಿ ಮೊದಲಾದವುಗಳಿಂದ ಮಾಡಿದ ದೀವಟಿಗೆ, ದೊಂದಿ, ಪಂಜು |
| ಸೋಂಕು | - | ತಾಗು, ಮುಟ್ಟು, ಸ್ಪರ್ಶಿಸು, ಹರಡುವ ರೋಗದ ಸಂಪರ್ಕ |
| ಸೌಹಾರ್ದ | - | ಸಹೃದಯತೆ, ಸೌಜನ್ಯ |
| ಹಸನ್ಮುಖಿ | - | ನಗುಮುಖ ಹೊಂದಿರುವವರು |
| ಹಸ್ತ | - | ಕೈ, ಕರ |
| ಹಸ್ತಲಾಘವ | - | ಕೈ ಕುಲುಕುವಿಕೆ, ಕೈಯ ಚಳಕ |
| ಹಾಲು ಬಾಯಿ | - | ಹಾಲಿನಿಂದ ತಯಾರಿಸುವ ಒಂದು ಬಗೆಯ ತಿಂಡಿ |
| ಹಿತ | - | ಒಳ್ಳೆಯದು, ಪ್ರಯೋಜನಕಾರಿಯಾದುದು |
| ಹೀಯಾಳಿಸು | - | ನಿಂದಿಸು, ತೆಗಳು, ಅವಮಾನ ಮಾಡು |
| ಹುಗಿದು | - | ಹೂಳು |
| ಹೂರಣ | - | ತುಂಬುವುದು, ಸಾರ ಸತ್ವ |
| ಹೇರಳ | - | ಅಧಿಕ, ಹೆಚ್ಚಳ |

*****

## ಭಾರತದ ಸಂವಿಧಾನ

ಭಾಗ IV ಕ

### ಕರ್ತವ್ಯಗಳು

51 **ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ. ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ದಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000

*online* ***R.T.E Monitoring : www.nireekshana.org.in***